ಸೋಮವಾರ, ಏಪ್ರಿಲ್ 25, 2022 | ₹ 6.00

ಪ್ರಜಾ ವಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಲ್ಲಕಂಬ ಕಸರತ್ತು...

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದಲ್ಲಿ ಮೂಡುಬಿದಿರೆಯ ಆಳ್ವಾಸ್ ಮಲ್ಲಕಂಬ ತಂಡದವರು ರೋಮಾಂಚಕಾರಿ ಪ್ರದರ್ಶನ ನೀಡಿದರು

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಎಲೆಕ್ಟ್ರಾನಿಕ್ ಉಪಕರಣ ಬಳಸಿ ಉತ್ತರ ಹೇಳುತ್ತಿದ್ದ ವಿಡಿಯೊ ಬಹಿರಂಗ

ಎಂಜಿನಿಯರ್ ನೇಮಕ ಪರೀಕ್ಷೆಯಲ್ಲೂ ಅಕ್ರಮ?

ಪ್ರಜಾವಾಣಿ ವಾರ್ತೆ

ಕಲಬುರಗಿ: ಲೋಕೋಪಯೋಗಿ ಇಲಾಖೆಯ ಸಹಾಯಕ ಎಂಜಿನಿಯರ್ ಹಾಗೂ ಕಿರಿಯ ಎಂಜಿನಿಯರ್ ನೇಮಕಾತಿ ಪರೀಕ್ಷೆಯಲ್ಲೂ ಅಕ್ರಮ ನಡೆದಿರುವ ಸಾಧ್ಯತೆ ಇದೆ. ವ್ಯಕ್ತಿಯೊಬ್ಬ ಕೋಣೆಯೊಂದರಲ್ಲಿ ಕುಳಿತು ಮೊಬೈಲ್ ಬಳಸಿ ಉತ್ತರ ಹೇಳುತ್ತಿರುವ ವಿಡಿಯೊ ತುಣುಕು ಜಾಲತಾಣದಲ್ಲಿ ಹರಿದಾಡುತ್ತಿದ್ದು, ಈ ಸಂದೇಹವನ್ನು ಗಟ್ಟಿಗೊಳಿಸಿದೆ.

2021ರ ಡಿಸೆಂಬರ್ 14ರಂದು ಕರ್ನಾಟಕ ಲೋಕಸೇವಾ ಆಯೋಗವು ಎಂಜಿನಿಯರ್ ನೇಮಕಾತಿ ಪರೀಕ್ಷೆ ನಡೆಸಿದೆ. ವಿಡಿಯೊದಲ್ಲಿ ಹೇಳಲಾದ ಉತ್ತರಗಳು ಇದೇ ಪರೀಕ್ಷೆಗೆ ಸಂಬಂಧಿಸಿದವು ಎಂದು ಮೂಲಗಳು ಖಚಿತಪಡಿಸಿವೆ.

ಈ ಪರೀಕ್ಷೆಯಲ್ಲೂ ಬ್ಲೂಟೂತ್ ಬಳಕೆಗೆ ಸಂಬಂಧಿಸಿದಂತೆ, ಕಲಬುರಗಿಯಲ್ಲಿ ನೀರಾವರಿ ಇಲಾಖೆ ಸಹಾಯಕ ಎಂಜಿನಿಯರ್ ಆಗಿರುವ ಮಂಜುನಾಥ ಮೇಳಕುಂದಿ ಅವರನ್ನು ಡಿಸೆಂಬರ್‌ನಲ್ಲೇ ಬೆಂಗಳೂರು ಪೊಲೀಸರು ವಶಕ್ಕೆ ಪಡೆದಿದ್ದರು. ಆದರೆ, ಪ್ರಕರಣ ದಾಖಲಿಸಿರಲಿಲ್ಲ. ಈಗ ವಿಡಿಯೊ ಬಹಿರಂಗವಾಗಿದ್ದು, ಅಕ್ರಮ ನಡೆದಿರುವ ಸಾಧ್ಯತೆಯನ್ನು ದಟ್ಟವಾಗಿಸಿದೆ.

ಎರಡೂ ಅಕ್ರಮದಲ್ಲಿ ಭಾಗಿ?: ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮದ ಬಗ್ಗೆ ಸಿಐಡಿ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ಇದರಲ್ಲಿ ಮೊದಲಿಗೆ ಬಂಧಿತನಾದ ವೀರೇಶ ಮೇಳಕುಂದಾ ಎಂಬ ಅಭ್ಯರ್ಥಿ ಕೂಡ ಇದೇ ಮಂಜುನಾಥಗೆ ಹಣ ನೀಡಿದ್ದ. ಇದರ ಜಾಡುಹಿಡಿದು ಅಧಿಕಾರಿಗಳು ಮಂಜುನಾಥ ಅವರ ಕಲಬುರಗಿಯ ಮನೆ ಮೇಲೆ ದಾಳಿ ನಡೆಸಿದ್ದರು. ಆಗ ಲೋಕೋಪಯೋಗಿ ಇಲಾಖೆಯ ಸಹಾಯಕ ಎಂಜಿನಿಯರ್ ನೇಮಕಾತಿ ಪರೀಕ್ಷೆಗೆ ಹಾಜರಾಗಿದ್ದ 10 ಅಭ್ಯರ್ಥಿಗಳ ಹಾಲ್ ಟಿಕೆಟ್‌ಗಳು ಸಿಕ್ಕಿದ್ದವು. ಹೀಗಾಗಿ, ಎರಡೂ ಪರೀಕ್ಷೆಯಲ್ಲಿ ಅಕ್ರಮ ನಡೆಸಿದ್ದ ತಂಡದಲ್ಲಿ ಮಂಜುನಾಥ ಇದ್ದಾರೆ ಎಂಬುದು ಅಧಿಕಾರಿಗಳ ಅನುಮಾನ.

'ಪಿಎಸ್‌ಐ ಪ್ರಕರಣದಲ್ಲಿ ಹೆಸರು ಕೇಳಿ ಬಂದಾಗಿನಿಂದಲೂ ಮಂಜುನಾಥ ತಲೆಮರೆಸಿಕೊಂಡಿದ್ದು, ಅವರ ಬಂಧನದ ನಂತರವೇ ಎಲ್ಲದಕ್ಕೂ ಸ್ಪಷ್ಟ ಉತ್ತರ ಸಿಗಲಿದೆ' ಎಂದು ಸಿಐಡಿ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ವಿಡಿಯೊ ಎಲ್ಲಿಯದು?: 'ಡಿಯೊದಲ್ಲಿ ಉತ್ತರ ಓದಿ ಹೇಳುತ್ತಿರುವ ವ್ಯಕ್ತಿ ಯಾರು? ಎಲ್ಲಿಂದ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ. ಆದರೆ, ಸಾಮಾಜಿಕ ಮಾಧ್ಯಮದಲ್ಲಿ ಹರಿಬಿಟ್ಟವರು ಇದು ಬೆಂಗಳೂರಿನ ಲಾಡ್ಜ್‌ನಲ್ಲಿ ನಡೆದಿದೆ ಎಂದು ಬರೆದಿದ್ದಾರೆ. ಸಹಾಯಕ ಎಂಜಿನಿಯರ್ ನೇಮಕಾತಿ ಪರೀಕ್ಷೆಗೆ ಸಂಬಂಧಿಸಿಯೇ ಈತ ವಿಡಿಯೊದಲ್ಲಿ ಹೇಳಿದ್ದಾನೆ ಎನ್ನುವುದು ಮಾತ್ರ ಖಚಿತವಾಗಿದೆ.

'ಮಿಡಲ್ ಅಕ್ಟೋಬರ್, ವಿಜಯನಗರ ಎಂಪೈರ್ಸ್, ಸನ್‌ಫ್ಲವರ್ ಆಯಿಲ್. ಸಿಕ್ಸ್ಟಿ– ಸಿಕ್ಸ್ ಜೀರೋ...' ಹೀಗೆ ಪ್ರತಿ ಪ್ರಶ್ನೆಯ ಸಂಖ್ಯೆ ಹಾಗೂ ಅದರ ಉತ್ತರವನ್ನೂ ಈತ ಮೂರು ಬಾರಿ ಪುನರುಚ್ಚರಿಸಿರುವುದು ವಿಡಿಯೊದಲ್ಲಿದೆ. ಸರಿ ಉತ್ತರ ಮಾರ್ಕ್ ಮಾಡಿದ ಪ್ರಶ್ನೆಪತ್ರಿಕೆ, ಎಲೆಕ್ಟ್ರಾನಿಕ್ ಉಪಕರಣ ಹಾಗೂ ಎರಡು ಮೊಬೈಲ್‌ಗಳನ್ನು ಈತ ಬಳಸಿದ್ದಾನೆ.

ರೈಲು ವಿಳಂಬದಿಂದ ಗೊಂದಲ: ಎಂಜಿನಿಯರ್ ನೇಮಕಾತಿ ಪರೀಕ್ಷೆಯ ಅಭ್ಯರ್ಥಿಗಳು ಪ್ರಯಾಣಿಸುತ್ತಿದ್ದ ಹಾಸನ– ಸೊಲ್ಲಾಪುರ ಹಾಗೂ ಉದ್ಯಾನ್ ಎಕ್ಸ್‌ಪ್ರೆಸ್ ರೈಲುಗಳು ಐದು ತಾಸು ತಡವಾಗಿ ಕಲಬುರಗಿಗೆ ತಲುಪಿದ್ದವು. ಇದರಿಂದ ಮಧ್ಯಾಹ್ನದ ಎರಡನೇ ಪರೀಕ್ಷೆಯನ್ನು ಮಾತ್ರ ಅಭ್ಯರ್ಥಿಗಳು ಬರೆದಿದ್ದರು. ಮೊದಲ ಪರೀಕ್ಷೆ ಬರೆಯಲು ಡಿಸೆಂಬರ್ 29ರಂದು ಮತ್ತೆ ಅವಕಾಶ ನೀಡಲಾಗಿತ್ತು.

ಅಕ್ರಮ ನಡೆಯಬಾರದು ಎಂಬ ಕಾರಣದಿಂದ ಲೋಕಸೇವಾ ಆಯೋಗವು ಉತ್ತರ ಕರ್ನಾಟಕದ ಭಾಗದ ಅಭ್ಯರ್ಥಿಗಳಿಗೆ ಬೆಂಗಳೂರಿನಲ್ಲಿ, ದಕ್ಷಿಣ ಕರ್ನಾಟಕ ಭಾಗದ ಅಭ್ಯರ್ಥಿಗಳಿಗೆ ಕಲಬುರಗಿಯಲ್ಲಿ ಪರೀಕ್ಷೆ ಬರೆಯುವಂತೆ ಅದಲು ಬದಲು ಮಾಡಿತ್ತು.

ಪಿಡಬ್ಲ್ಯುಡಿ ಎಂಜಿನಿಯರ್‌ಗಳ ಭರ್ತಿ • ಅಭ್ಯರ್ಥಿಗಳಿಂದ ಕೆಪಿಎಸ್‌ಸಿಗೆ ದೂರು

'ಬ್ಲೂ ಟೂತ್' ಬಳಸಿ ಪರೀಕ್ಷಾ ಅಕ್ರಮ ಸಾಧ್ಯತೆ!

• ರಾಜೇಶ್ ರೈ ಚಟ್ಲ

ಬೆಂಗಳೂರು: ಲೋಕೋಪಯೋಗಿ ಇಲಾಖೆಯಲ್ಲಿ ಖಾಲಿ ಇರುವ ಸಹಾಯಕ ಎಂಜಿನಿಯರ್ (ಎಇ) 660 ಮತ್ತು ಕಿರಿಯ ಎಂಜಿನಿಯರ್ (ಜೆಇ) 330 ಹುದ್ದೆಗಳ ನೇಮಕಾತಿಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಇದೇ 13 ಮತ್ತು 14ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಿದೆ. ಪರೀಕ್ಷೆಗೆ ಸಿದ್ಧತೆ ನಡೆಯುತ್ತಿರುವ ಬೆನ್ನಲ್ಲೇ, 'ಅತ್ಯಾಧುನಿಕ

ಪ್ರಜಾವಾಣಿ ವಿಶೇಷ

ಸಂದೇಹಾಸ್ಪದ ಪರೀಕ್ಷಾ ಕೇಂದ್ರ ರದ್ದು

'ಹೇಗೆಲ್ಲಾ ಪರೀಕ್ಷಾ ಅಕ್ರಮ ನಡೆಯುವ ಸಾಧ್ಯತೆಗಳಿವೆ ಎಂಬ ಬಗ್ಗೆ ಮಾಹಿತಿ ಸಿಕ್ಕಿದೆ. ಹೀಗಾಗಿ, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಪರೀಕ್ಷಾ ಕೇಂದ್ರದ ಪ್ರವೇಶಪತ್ರವನ್ನು (ಹಾಲ್ ಟಿಕೆಟ್) ಈ ಬಾರಿ ಒಂದು ವಾರ ಮೊದಲು ಬಿಡುಗಡೆ ಮಾಡಲಾಗುವುದು. ಯಾವ ಪರೀಕ್ಷಾ ಕೇಂದ್ರಕ್ಕೆ ಹಾಜರಾಗಬೇಕು ಎಂಬ ವಿಚಾರ ಅಭ್ಯರ್ಥಿಗಳಿಗೆ ವಾರದ ಮೊದಲಷ್ಟೆ ಗೊತ್ತಾಗಲಿದೆ.

ಖಜಾನೆಯಿಂದ ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆಪತ್ರಿಕೆಗಳ ರವಾನಿಸುವುದು, ಅಭ್ಯರ್ಥಿಗಳ ಪರಿಶೋಧನೆ ಸೇರಿದಂತೆ ಇಡೀ ಪರೀಕ್ಷಾ ವ್ಯವಸ್ಥೆಯ ಮೇಲೆ ನಿಗಾವಹಿಸಲಾಗುವುದು. ಅಕ್ರಮಕ್ಕೆ ಕೈಜೋಡಿಸಿರುವ ಅನುಮಾನದ ಮೇಲೆ ಕೆಲವು ಪರೀಕ್ಷಾ ಕೇಂದ್ರಗಳನ್ನೇ ರದ್ದುಪಡಿಸಲಾಗಿದೆ.

ಅಭ್ಯರ್ಥಿಗಳು ತಮ್ಮ ಊರಿನಲ್ಲೇ ಪರೀಕ್ಷೆ ಬರೆಯಲು ಅವಕಾಶ ಇರುವುದಿಲ್ಲ. ಇನ್ನೂ ಕೆಲವು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದ್ದೇವೆ. ಅವುಗಳನ್ನು ಬಹಿರಂಗಪಡಿಸುವುದಿಲ್ಲ' ಎಂದು ಕೆಪಿಎಸ್‌ಸಿ ಸದಸ್ಯರೊಬ್ಬರು ತಿಳಿಸಿದರು.

ಪರೀಕ್ಷಾ ಅಕ್ರಮಕ್ಕೆ ಅವಕಾಶ ನೀಡಬಾರದೆಂದು ನೂರಾರು ಮನವಿಗಳು ಬಂದಿವೆ. ಹೀಗಾಗಿ, ಹಿಂದೆಂಗಿಂತಲೂ ಕಟ್ಟುನಿಟ್ಟಿನ ಕ್ರಮಗಳನ್ನು ಈ ಬಾರಿ ತೆಗೆದುಕೊಳ್ಳುತ್ತೇವೆ

ಜಿ. ಸತ್ಯವತಿ, ಕೆಪಿಎಸ್‌ಸಿ ಕಾರ್ಯದರ್ಶಿ

ಮುನ್ನೆಚ್ಚರಿಕೆ ನೀಡಿದ್ದ 'ಪ್ರಜಾವಾಣಿ'

2021ರ ಡಿಸೆಂಬರ್ 14ರಂದು ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ ಲೋಕೋಪಯೋಗಿ ಇಲಾಖೆಯ ಸಹಾಯಕ ಹಾಗೂ ಕಿರಿಯ ಎಂಜಿನಿಯರ್ ನೇಮಕಾತಿ ಪರೀಕ್ಷೆಯಲ್ಲಿ ಬ್ಲೂಟೂತ್ ಬಳಸಿ ಅಕ್ರಮ ನಡೆಸುವ ಸಾಧ್ಯತೆ ಇದೆ ಎಂದು ಡಿಸೆಂಬರ್ 6ರಂದೇ 'ಪ್ರಜಾವಾಣಿ' ವಿಶೇಷ ವರದಿ ಪ್ರಕಟಿಸಿತ್ತು.

ಆಗ ಕೆಪಿಎಸ್‌ಸಿ ಕಾರ್ಯದರ್ಶಿ ಜಿ.ಸತ್ಯವತಿ ಅವರು, 'ಅಕ್ರಮ ನಡೆಯದಂತೆ ಕಟ್ಟುನಿಟ್ಟಿನ ಕ್ರಮ ವಹಿಸಲಾಗುವುದು' ಎಂದಿದ್ದರು.

ಪೊಲೀಸ್ ಕಸ್ಟಡಿಗೆ ರುದ್ರಗೌಡ

ಕಲಬುರಗಿ: 'ನನಗೆ ಪುಕ್ಕಟ್ಟೆ ಪ್ರಚಾರ ಕೊಡ್ತಿದ್ದೀರಿ; ಥ್ಯಾಂಕ್ಸ್ ಸರ್...'

ಪಿಎಸ್‌ಐ ನೇಮಕಾತಿ ಪರೀಕ್ಷೆಯ ಅಕ್ರಮ ಪ್ರಕರಣದಲ್ಲಿ ಬಂಧಿತನಾದ ರುದ್ರಗೌಡ ಡಿ.ಪಾಟೀಲ ಸಿಐಡಿ ಅಧಿಕಾರಿಗಳ ಮುಂದೆ ಆಡಿದ ಮಾತುಗಳು ಇವು.

ಮಹಾರಾಷ್ಟ್ರದಲ್ಲಿ ಬಂಧಿಸಿದ್ದ ಆರೋಪಿಯನ್ನು ಭಾನುವಾರ ನಸುಕಿನ 3ಕ್ಕೆ ಕಲಬುರಗಿಗೆ ಕರೆ ತರಲಾಯಿತು. ಆಗಲೂ ಮಾಧ್ಯಮದವರ ಕ್ಯಾಮೆರಾಗಳನ್ನು ನೋಡಿದ ಆರೋಪಿ ನಗುತ್ತಲೇ 'ಹಾಯ್' ಎನ್ನುವಂತೆ ಕೈ ಬೀಸಿದ. ಮತ್ತೊಮ್ಮೆ ತಿರುಗಿ ಬೆರಳುಗಳ ಮೂಲಕ 'ವಿಜೇತ' ಸಂಕೇತ ತೋರಿಸಿದ.

ರುದ್ರಗೌಡ ತಪ್ಪಿಸಿಕೊಳ್ಳಲು ನೆರವಾದ ಆರೋಪದ ಮೇಲೆ ಅಫಜಲಪುರ ತಾಲ್ಲೂಕು ಪಂಚಾಯಿತಿಯ ಮಾಜಿ ಸದಸ್ಯ ಮಲ್ಲಿಕಾರ್ಜುನ ಅಲಿಯಾಸ್ ಮಲ್ಲುಗೌಡ ಪಾಟೀಲ ಅವರನ್ನೂ ಬಂಧಿಸಲಾಗಿದೆ.

ಇಬ್ಬರನ್ನೂ ಭಾನುವಾರ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿದ್ದು, 13 ದಿನ (ಮೇ 6ರವರೆಗೆ) ಪೊಲೀಸ್ ಕಸ್ಟಡಿಗೆ ನೀಡಲಾಗಿದೆ.

ಪ್ರಿಯಾಂಕ್ ಖರ್ಗೆಗೆ ಸಿಐಡಿ ನೋಟಿಸ್

ಬೆಂಗಳೂರು: ಪಿಎಸ್‌ಐ ನೇಮಕಾತಿಯಲ್ಲಿ ನಡೆದ ಅಕ್ರಮಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ಸಿಐಡಿ ಪೊಲೀಸರು, ವಿಚಾರಣೆಗೆ ಹಾಜರಾಗುವಂತೆ ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಅವರಿಗೆ ನೋಟಿಸ್ ನೀಡಿದ್ದಾರೆ.

ಈ ಬಗ್ಗೆ ಖಚಿತಪಡಿಸಿರುವ ಅವರು, 'ಸಿಐಡಿಯವರು ಬೆಂಗಳೂರು ನಿವಾಸಕ್ಕೆ ನೋಟಿಸ್ ಕಳುಹಿಸಿದ್ದಾರೆ. ವಿಚಾರಣೆಗೆ ಹಾಜರಾಗುವ ಬಗ್ಗೆ ತೀರ್ಮಾನಿಸಿಲ್ಲ. ಪಕ್ಷದ ನಾಯಕರ ಜೊತೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತೇನೆ' ಎಂದರು.

545 ಪಿಎಸ್‌ಐ ಹುದ್ದೆಗಳ ನೇಮಕಾತಿ ಅಕ್ರಮದ ಬಗ್ಗೆ ತನಿಖೆ ನಡೆಸುತ್ತಿರುವ ಮಧ್ಯೆಯೇ, ಶೀಘ್ರದಲ್ಲಿಯೇ ನಡೆಯಲಿದ್ದ 402 ಪಿಎಸ್‌ಐ ನೇಮಕಾತಿಗೆ ಸಂಬಂಧಿಸಿ ಇಬ್ಬರು ಮಾತನಾಡಿದ್ದ ಆಡಿಯೊವನ್ನು ಪ್ರಿಯಾಂಕ್ ಕಲಬುರಗಿಯಲ್ಲಿ ಶನಿವಾರ ಬಿಡುಗಡೆ ಮಾಡಿದ್ದರು.

ಉಪ ರಾಷ್ಟ್ರಪತಿ ಎಂ. ವೆಂಕಯ್ಯನಾಯ್ಡು ಪ್ರತಿಪಾದನೆ

'ಪಕ್ಷಾಂತರ ನಿಷೇಧ ಕಾಯ್ದೆಗೆ ತಿದ್ದುಪಡಿ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾಯಿತ ಪ್ರತಿನಿಧಿಗಳ ಪಕ್ಷಾಂತರ ದೊಡ್ಡ ಪಿಡುಗಾಗಿ ದೇಶವನ್ನು ಬಾಧಿಸುತ್ತಿದೆ. ಈ ಸಮಸ್ಯೆ ಪರಿಹಾರಕ್ಕೆ ಪಕ್ಷಾಂತರ ನಿಷೇಧ ಕಾಯ್ದೆಯ ತಿದ್ದುಪಡಿ ಅಗತ್ಯ ಎಂದು ಉಪ ರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಪ್ರತಿಪಾದಿಸಿದರು.

ಬೆಂಗಳೂರು ಪ್ರೆಸ್ ಕ್ಲಬ್‌ನಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ 'ನವ ಭಾರತದಲ್ಲಿ ಮಾಧ್ಯಮಗಳ ಪಾತ್ರ' ಕುರಿತು ಮಾತನಾಡಿದ ಅವರು, 'ಪಕ್ಷಾಂತರಿಗಳಿಗೆ ಕಡಿವಾಣ ಹಾಕಲೇಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಪಕ್ಷಾಂತರ ನಿಷೇಧ ಕಾಯ್ದೆಯಲ್ಲಿರುವ ಲೋಪಗಳನ್ನು ಗುರುತಿಸಿ, ಸೂಕ್ತ ತಿದ್ದುಪಡಿಗಳನ್ನು ತರಬೇಕು' ಎಂದರು.

ಪಕ್ಷಾಂತರದಿಂದಾಗಿ ದೇಶದ ರಾಜಕಾರಣದಲ್ಲಿ ಮೌಲ್ಯಗಳ ಕುಸಿತವಾಗುತ್ತಿದೆ. ಅದು ಕ್ರಮೇಣ ಎಲ್ಲ ಕ್ಷೇತ್ರಗಳನ್ನೂ ವ್ಯಾಪಿಸುತ್ತಿದೆ. ರಾಜಕಾರಣದಲ್ಲಿ ಮೌಲ್ಯ ಕುಸಿತ ತಡೆಯುವ ಮೂಲಕ ಪ್ರಜಾಪ್ರಭುತ್ವವನ್ನು ಕಾಪಾಡಬೇಕಿದೆ ಎಂದು ಹೇಳಿದರು.

ಪಕ್ಷಾಂತರ ಮಾಡುವವರು ಹುದ್ದೆಗೆ ರಾಜೀನಾಮೆ ನೀಡುವುದನ್ನು ಕಡ್ಡಾಯಗೊಳಿಸಬೇಕು. ಪುನರಾಯ್ಕೆ ಆಗುವವರೆಗೆ ಯಾವುದೇ ಹುದ್ದೆ ನೀಡಬಾರದು. ಪಕ್ಷಾಂತರ ನಿಷೇಧ ಕಾಯ್ದೆ ವ್ಯಾಪ್ತಿಯ ಪ್ರಕರಣಗಳ ಇತ್ಯರ್ಥಕ್ಕೆ ಸಭಾಧ್ಯಕ್ಷರು, ಸಭಾಪತಿ ಮತ್ತು ನ್ಯಾಯಾಲಯಗಳಿಗೆ ಅಧಿಕಾರವಿದೆ. ಆದರೆ, ಸದಸ್ಯರ ಅಧಿಕಾರದ ಅವಧಿ ಮುಗಿದರೂ ತೀರ್ಪು ಬರುವುದಿಲ್ಲ. ಮೂರು ತಿಂಗಳೊಳಗೆ ಈ ಪ್ರಕರಣಗಳನ್ನು ವಿಲೇವಾರಿ ಮಾಡುವುದನ್ನು ಕಡ್ಡಾಯಗೊಳಿಸಬೇಕು ಎಂದು ಉಪ ರಾಷ್ಟ್ರಪತಿ ಹೇಳಿದರು.

ಶಾಸನಸಭೆಗಳ ಒಳಗಿನ ಮತ್ತು ಹೊರಗಿನ ನಡವಳಿಕೆಗಳ ವಿಚಾರದಲ್ಲಿ ರಾಜಕೀಯ ಪಕ್ಷಗಳು ಸ್ವಯಂ ನೀತಿಸಂಹಿತೆ ಅಳವಡಿಸಿಕೊಳ್ಳಬೇಕು. ರಚನಾತ್ಮಕ ಚಟುವಟಿಕೆಗಳನ್ನು ಬೆಂಬಲಿಸುವ ಬದ್ಧತೆಯನ್ನು ಎಲ್ಲ ರಾಜಕೀಯ ಪಕ್ಷಗಳೂ ತೋರಬೇಕು ಎಂದು ಸಲಹೆ ನೀಡಿದರು.

ಸಾಂವಿಧಾನಿಕ ಸಂಸ್ಥೆಗಳು, ಸಾಂವಿಧಾನಿಕ ಹುದ್ದೆಗಳ ಮೇಲಿನ ದಾಳಿ ಹಾಗೂ ಅವುಗಳನ್ನು ದುರ್ಬಲಗೊಳಿಸುವ ಪ್ರಯತ್ನ ನಿಲ್ಲಬೇಕು. ರಾಜಕೀಯದಲ್ಲಿರುವ ವ್ಯಕ್ತಿಗಳ ಕುಟುಂಬವನ್ನು ಗುರಿಯಾಗಿಸಿ ಟೀಕಾಪ್ರಹಾರ ನಡೆಸುವುದೂ ಕೊನೆಯಾಗಬೇಕು. ಎಲ್ಲ ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿನ ಭರವಸೆಗಳನ್ನು ಈಡೇರಿಸುವುದಕ್ಕೆ ಬದ್ಧತೆ ತೋರಿಸಬೇಕು ಎಂದು ಹೇಳಿದರು.

ಸ್ಥಳೀಯ ಸಂಸ್ಥೆಗಳು ಬಲಗೊಳ್ಳಲಿ: ಭಾನುವಾರ ಪಂಚಾಯತ್ ರಾಜ್ ದಿನ ಎಂಬುದನ್ನು ನೆನಪಿಸಿದ ವೆಂಕಯ್ಯ ನಾಯ್ಡು, 'ಮೂರು ಹಂತದ ಆಡಳಿತ ವಿಕೇಂದ್ರೀಕರಣ ವ್ಯವಸ್ಥೆಯಿಂದ ಭಾರತದ ಪ್ರಜಾಪ್ರಭುತ್ವ ಹೆಚ್ಚು ಸದೃಢವಾಗಿದೆ. ಈ ಸಂದರ್ಭದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅಧಿಕಾರ, ಅನುದಾನ ಮತ್ತು ಚುನಾಯಿತ ಆಡಳಿತ ವ್ಯವಸ್ಥೆ ನೀಡುವ ಮೂಲಕ ಅವುಗಳನ್ನು ಬಲಪಡಿಸಬೇಕು' ಎಂದರು.

ಸಂಸದ ಪಿ.ಸಿ. ಮೋಹನ್ ಉಪಸ್ಥಿತರಿದ್ದರು.

'ಸುದ್ದಿಯಲ್ಲಿ ಅಭಿಪ್ರಾಯ ಹೇರಬೇಡಿ'

'ಮಾಧ್ಯಮಗಳಲ್ಲಿ ಪ್ರಕಟವಾಗುವ ಸುದ್ದಿಗಳಲ್ಲಿ ಪತ್ರಕರ್ತರ ವೈಯಕ್ತಿಕ ಅಭಿಪ್ರಾಯ ಹೇರಲು ಅವಕಾಶ ಇರಬಾರದು. ಆಗ ಮಾತ್ರ ನಿಷ್ಪಕ್ಷಪಾತ ಸುದ್ದಿ ಪ್ರಕಟಿಸಲು ಸಾಧ್ಯ' ಎಂದು ಉಪ ರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಹೇಳಿದರು.

'ಸುದ್ದಿ ಸಂಪೂರ್ಣವಾಗಿ ವೈಯಕ್ತಿಕ ಅಭಿಪ್ರಾಯಗಳಿಂದ ಮುಕ್ತವಾಗಿ ಇರಬೇಕು. ಸುದ್ದಿಯಲ್ಲಿ ಪತ್ರಕರ್ತರ ಅಭಿಪ್ರಾಯ ಹೇರುವುದು ಜನರನ್ನು ಗೊಂದಲಕ್ಕೆ ತಳ್ಳಲು ಕಾರಣವಾಗುತ್ತದೆ' ಎಂದರು.

'ಸಾಮಾಜಿಕ ಮಾಧ್ಯಮಗಳು ದೇಶದಲ್ಲಿ ದ್ವೇಷ ಬಿತ್ತಿ, ಜನರ ನಡುವೆ ಒಡಕು ಮೂಡಿಸುತ್ತಿವೆ. ಅವುಗಳ ಮೇಲೆ ನಿಯಂತ್ರಣ ಇಲ್ಲ. ನಿಗಾ ಇಡುವ ವ್ಯವಸ್ಥೆಯೂ ಸರಿಯಾಗಿಲ್ಲ. ಸಾಮಾಜಿಕ ಮಾಧ್ಯಮಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳುವುದು ಅಗತ್ಯ' ಎಂದರು.

ಜಮ್ಮು–ಕಾಶ್ಮೀರ: ಪ್ರಧಾನಿ ನರೇಂದ್ರ ಮೋದಿ ಘೋಷಣೆ

ಭಾರಿ ಮೊತ್ತದ ಹೂಡಿಕೆ ಪ್ರಸ್ತಾವ

ಪಲ್ಲಿ (ಜಮ್ಮು ಮತ್ತು ಕಾಶ್ಮೀರ) (ಪಿಟಿಐ): 'ಜಮ್ಮು ಮತ್ತು ಕಾಶ್ಮೀರಕ್ಕೆ ₹38,000 ಕೋಟಿ ಮೊತ್ತದ ಖಾಸಗಿ ಬಂಡವಾಳ ಹೂಡಿಕೆ ಪ್ರಸ್ತಾವಗಳು ಬಂದಿವೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ. ಇಲ್ಲಿ ಅರಬ್ ಸಂಯುಕ್ತ ಸಂಸ್ಥಾನದ ನಿಯೋಗವನ್ನು ಭೇಟಿ ಮಾಡಿದ ನಂತರ ಮಾತನಾಡಿದ ಅವರು ಈ ಮಾಹಿತಿ ನೀಡಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಸಾಂಬಾ ಜಿಲ್ಲೆಯ ಪಲ್ಲಿ ಗ್ರಾಮದಲ್ಲಿ ಭಾನುವಾರ ನಡೆದ ರಾಷ್ಟ್ರೀಯ ಪಂಚಾಯಿತಿ ರಾಜ್ ದಿನಾಚರಣೆ ಕಾರ್ಯಕ್ರಮದಲ್ಲಿ ಮೋದಿ ಅವರು ಭಾಗಿಯಾಗಿದ್ದರು. ಈ ಕಾರ್ಯಕ್ರಮದಲ್ಲಿ ಅವರು ದೇಶದ ಎಲ್ಲಾ ಗ್ರಾಮ ಪಂಚಾಯಿತಿಗಳನ್ನು ಉದ್ದೇಶಿಸಿ ಮಾತನಾಡಿದರು.

ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು 2019ರ ಆಗಸ್ಟ್‌ನಲ್ಲಿ ತೆಗೆದುಹಾಕಿದ ನಂತರ ಮೋದಿ ಅವರು ಇಲ್ಲಿಗೆ ಭೇಟಿ ನೀಡಿದ್ದು ಇದೇ ಮೊದಲು. ಈ ಭೇಟಿಯ ವೇಳೆ ಮೋದಿ ಅವರು ₹20,000 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದರು.

ಈ ಮೊದಲು ಜಮ್ಮು ಮತ್ತು ಕಾಶ್ಮೀರದಲ್ಲಿ ಖಾಸಗಿ ಬಂಡವಾಳವು ಹೆಚ್ಚಿನ ಪ್ರಮಾಣದಲ್ಲಿ ಹೂಡಿಕೆಯಾಗುತ್ತಿರಲಿಲ್ಲ. ಸ್ವಾತಂತ್ರ್ಯ ಬಂದ ಏಳು ದಶಕಗಳಲ್ಲಿ ಇಲ್ಲಿ ಕೇವಲ ₹17,000 ಕೋಟಿಯಷ್ಟು ಖಾಸಗಿ ಬಂಡವಾಳ ಹೂಡಿಕೆಯಾಗಿದೆ. ಆದರೆ ಈಗ ₹38,000 ಕೋಟಿಯಷ್ಟು ಖಾಸಗಿ ಬಂಡವಾಳ ಹೂಡಿಕೆಗೆ ಪ್ರಸ್ತಾವಗಳು ಬಂದಿವೆ ಎಂದು ಮೋದಿ ಅವರು ಹೇಳಿದ್ದಾರೆ.

'ಈ ಹಿಂದಿನ ಸರ್ಕಾರಗಳ ಅವಧಿಯಲ್ಲಿ ಇಲ್ಲಿನ ಪಂಚಾಯಿತಿಗಳಿಗೆ ₹5,000 ಕೋಟಿ ಮೊತ್ತದ ಅನುದಾನವನ್ನು ನೀಡಲಾಗುತ್ತಿತ್ತು. ಎನ್‌ಡಿಎ ಸರ್ಕಾರದ ಅವಧಿಯಲ್ಲಿ ₹22,000 ಕೋಟಿ ಮೊತ್ತದ ಅನುದಾನವನ್ನು ನೀಡಲಾಗಿದೆ. ಎರಡು–ಮೂರು ವರ್ಷಗಳಲ್ಲಿ ಜಮ್ಮು ಮತ್ತು ಕಾಶ್ಮೀರದ ಅಭಿವೃದ್ಧಿಗೆ ವೇಗ ದೊರೆತಿದೆ. ಈ ಅವಧಿಯಲ್ಲಿ ಕೇಂದ್ರ ಸರ್ಕಾರದ 175 ಕಾನೂನುಗಳನ್ನು ಇಲ್ಲಿ ಜಾರಿಗೆ ತರಲಾಗಿದೆ' ಎಂದು ಅವರು ವಿವರಿಸಿದ್ದಾರೆ.

ಸಾಂಬಾ ಜಿಲ್ಲೆಯ ಪಲ್ಲಿ ಎಂಬ ಗ್ರಾಮ ಪಂಚಾಯಿತಿಯನ್ನು ದೇಶದ ಮೊದಲ ಇಂಗಾಲ ತಟಸ್ಥ ಪಂಚಾಯಿತಿ ಎಂದು ಮೋದಿ ಅವರು ಘೋಷಿಸಿದ್ದಾರೆ. ಇಲ್ಲಿ 500 ಕಿಲೋವಾಟ್ ಸಾಮರ್ಥ್ಯದ ಸೌರಶಕ್ತಿ ಘಟಕವನ್ನು ಅವರು ಉದ್ಘಾಟಿಸಿದರು.

ಜಮ್ಮುವಿನ ಶಿಲ್ಪಿ ರವೀಂದರ್ ಜಮ್ವಾಲ್ ಅವರು ಕೆತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರ ಪ್ರತಿಮೆಯನ್ನು ಸಾಂಬಾ ಜಿಲ್ಲೆಯ ಇಂಡಿಯನ್ ನ್ಯಾಷನಲ್ ಟ್ರಸ್ಟ್ ಫಾರ್ ಆರ್ಟ್ ಅಂಡ್ ಕಲ್ಚರಲ್ ಹೆರಿಟೇಜ್‌ನ ಗ್ಯಾಲರಿಯಲ್ಲಿ ಸ್ಥಾಪಿಸಲಾಗಿದೆ. ಈ ಪ್ರತಿಮೆಯನ್ನು ಅನಾವರಣ ಮಾಡಿದ ಮೋದಿ ಅವರು, ಶಿಲ್ಪಿ ಜಮ್ವಾಲ್ ಜತೆಗೆ ಚಿತ್ರ ತೆಗೆಸಿಕೊಂಡರು —ಪಿಟಿಐ ಚಿತ್ರ

ಮೋದಿ ಘೋಷಣೆಗಳು

- ತಮಿಳುನಾಡಿನ ಕನ್ಯಾಕುಮಾರಿ ಮತ್ತು ಕಾಶ್ಮೀರದ ವೈಷ್ಣೋದೇವಿಯ ಮಧ್ಯೆ ಒಂದೇ ಹೆದ್ದಾರಿ ಸಂಪರ್ಕ ಕಲ್ಪಿಸುವ ದಿನ ದೂರವಿಲ್ಲ
- ಜಮ್ಮು ಮತ್ತು ಕಾಶ್ಮೀರದ ಎಲ್ಲಾ ಜಿಲ್ಲೆಗಳಿಗೆ ಸರ್ವಋತು ರಸ್ತೆ ಸಂಪರ್ಕವನ್ನು ಕಲ್ಪಿಸಲಾಗುವುದು
- ನೈಸರ್ಗಿಕ ಕೃಷಿಯನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಉತ್ತೇಜಿಸಬೇಕು. ಈ ಮೂಲಕ, ಭೂಮಿ ತಾಯಿಯನ್ನು ರಾಸಾಯನಿಕಗಳಿಂದ ಮುಕ್ತವಾಗಿಸಬೇಕು. ಎಲ್ಲರೂ ಕಸವನ್ನು ವಿಂಗಡಿಸಬೇಕು. ಶೂನ್ಯ ಇಂಗಾಲ ಪರಿಸರ ವ್ಯವಸ್ಥೆಸಾಧಿಸಲು ಎಲ್ಲರೂ ಸಹಕರಿಸಬೇಕು
- 2023ರ ಆಗಸ್ಟ್ 15ರ ವೇಳೆಗೆ ದೇಶದ ಆಯ್ದ 75 ಜಿಲ್ಲೆಗಳಲ್ಲಿ 75 ಸರೋವರಗಳನ್ನು ನಿರ್ಮಿಸಲಾಗುತ್ತದೆ. ಈ ಸರೋವರಗಳಿಗೆ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಹುತಾತ್ಮರ ಹೆಸರುಗಳನ್ನು ಇಡಲಾಗುತ್ತದೆ

ವಶಪಡೆಯಲು ರಷ್ಯಾ ಯತ್ನ • ಕಾರ್ಖಾನೆಯಲ್ಲಿ ಆಶ್ರಯ ಪಡೆದಿರುವ ನಾಗರಿಕರು

ಉಕ್ಕಿನ ಕಾರ್ಖಾನೆ ಮೇಲೆ ವಾಯು ದಾಳಿ

ಪ್ರಜಾವಾಣಿ ವಾರ್ತೆ

ಕೀವ್ (ಎ.ಪಿ): ಉಕ್ರೇನ್‌ನ ಮರಿಯುಪೋಲ್ ನಗರವನ್ನು ಬಹುತೇಕ ವಶಕ್ಕೆ ಪಡೆದಿರುವ ರಷ್ಯಾ, ಉಕ್ಕಿನ ಕಾರ್ಖಾನೆ ಅಜೋವ್‌ಸ್ಟಾಲ್‌ನಲ್ಲಿ ಬೀಡುಬಿಟ್ಟಿರುವ ಉಕ್ರೇನ್ ಸೇನೆಯ ತೆರವು ಗುರಿಯೊಂದಿಗೆ ಭಾನುವಾರ ವಾಯುದಾಳಿ ನಡೆಸಿದೆ.

ಉಕ್ಕು ಕಾರ್ಖಾನೆಯ ಸುರಂಗ ವ್ಯವಸ್ಥೆಯಲ್ಲಿ ಹಲವು ನಾಗರಿಕರೂ ಆಶ್ರಯ ಪಡೆದಿದ್ದಾರೆ, ಇತ್ತ, ರಷ್ಯಾವು ವಾಯುದಾಳಿ ಚುರುಕುಗೊಳಿಸಿದೆ ಎಂದು ಉಕ್ರೇನ್ ಸೇನೆಯ ವಕ್ತಾರ ಅಲೆಕ್ಸಾಂಡರ್ ಷ್ಟುಪುನ್ ಹೇಳಿದ್ದಾರೆ.

ಯುದ್ಧದಿಂದ ಮರಿಯುಪೋಲ್ ನಗರವು ತೀವ್ರ ಬಾಧಿತವಾಗಿದೆ. ಸಂಘರ್ಷವು ಮುಗಿದ ಹಿಂದೆಯೇ ರಷ್ಯಾದ ಯುದ್ಧ ಅಪರಾಧಕ್ಕೆ ಸಾಕ್ಷಿಯಾಗಿ ನಾಗರಿಕರ ಶವಗಳು ಸಿಗಬಹುದು ಎಂದು ಅಧಿಕಾರಿಗಳು ಶಂಕೆ ವ್ಯಕ್ತಪಡಿಸಿದ್ದಾರೆ.

ರಷ್ಯಾ ಬೆಂಬಲಿತ ಪ್ರತ್ಯೇಕತಾವಾದಿಗಳ ಪ್ರಾಬಲ್ಯವಿರುವ ಡೊನ್‌ಬಾಸ್ ವಲಯದಿಂದಲೂ ರಷ್ಯಾ ದಾಳಿ ಆರಂಭಿಸಿದೆ. ಈ ವಲಯದಲ್ಲಿ ಕೈಗಾರಿಕಾ ವಲಯದ ಮೇಲೆ ನಿಯಂತ್ರಣವನ್ನು ಹೊಂದಲು ರಷ್ಯಾ ಶತಪ್ರಯತ್ನ ನಡೆಸಿದೆ.

ಆದರೆ, ರಷ್ಯಾಗೆ ಉಕ್ರೇನ್‌ನ ಸೇನೆ ಕೂಡಾ ಸತತವಾಗಿ ಪ್ರತಿರೋಧ ತೋರುತ್ತಿದೆ. ತಾನು ಕೆರ್ಸನ್‌ನಲ್ಲಿ ರಷ್ಯಾದ ಕಮ್ಯಾಂಡ್ ಪೋಸ್ಟ್ ಅನ್ನು ಧ್ವಂಸಗೊಳಿಸಿದ್ದಾಗಿ ಉಕ್ರೇನ್‌ನ ಸೇನೆಯು ಭಾನುವಾರ ತಿಳಿಸಿದೆ.

ಉಕ್ರೇನ್ ರಾಷ್ಟ್ರೀಯ ಭದ್ರತಾ ಪಡೆಯ ಅಜೋವ್ ರೆಜಿಮೆಂಟ್ ವಿಡಿಯೊವೊಂದನ್ನು ಬಿಡುಗಡೆ ಮಾಡಿದ್ದು, ಅದರ ಪ್ರಕಾರ ಉಕ್ಕು ಸ್ಥಾವರದಲ್ಲಿ ಮಕ್ಕಳು ಸೇರಿದಂತೆ 24ಕ್ಕೂ ಹೆಚ್ಚು ಜನರು ಆಶ್ರಯ ಪಡೆದಿದ್ದಾರೆ.

ಮರಿಯುಪೋಲ್‌ನಲ್ಲಿ ರಷ್ಯಾದ ಸೇನೆಯು ಸಾವಿರಾರು ನಾಗರಿಕರನ್ನು ಕೊಂದಿರುವ ಯುದ್ಧ ಅಪರಾಧಕ್ಕೆ ಹೊಸ ಸಾಕ್ಷ್ಯಗಳು ದೊರೆಯತ್ತಿವೆ ಎಂದು ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಹೇಳಿದರು.

ಮರಿಯುಪೋಲ್‌ನಲ್ಲಿನ ಸದ್ಯದ ಸ್ಥಿತಿ ಮತ್ತು ಯುದ್ಧದ ಬೆಳವಣಿಗೆ ಕುರಿತು ಶನಿವಾರ ತಾವು ಬ್ರಿಟಿಷ್ ಪ್ರಧಾನಿ ಬೋರಿಸ್ ಜಾನ್ಸನ್ ಜೊತೆಗೆ ಚರ್ಚಿಸಿದ್ದಾಗಿ ತಿಳಿಸಿದರು.

ರಷ್ಯಾ–ಉಕ್ರೇನ್ ನಡುವಣ ಯುದ್ಧ ಭಾನುವಾರ 60ನೇ ದಿನದಲ್ಲಿ ಮುಂದುವರಿದಿದೆ.

ಉಕ್ರೇನ್‌ನ ಮರಿಯುಪೋಲ್‌ನಲ್ಲಿ ರಷ್ಯಾ ಬೆಂಬಲಿತ ಪ್ರತ್ಯೇಕತಾವಾದಿಗಳ ಪ್ರಾಬಲ್ಯವಿರುವ ವಲಯದಲ್ಲಿ ರಷ್ಯಾದ ಸೇನಾ ವಾಹನಗಳು ಗಸ್ತು ತಿರುಗುತ್ತಿರುವುದು —ಎಪಿ/ಪಿಟಿಐ ಚಿತ್ರ.

61ನೇ ದಿನದ ಬೆಳವಣಿಗೆ

- ಯುದ್ಧಬಾಧಿತ ಕೀವ್‌ನಲ್ಲಿ ಭಾನುವಾರ ಈಸ್ಟರ್ ನಿಮಿತ್ತ ಜನರು, ವಿವಿಧೆಡೆ ಅತಂತ್ರರಾಗಿರುವ ಜನರ ರಕ್ಷಣೆಗೆ ವಿಶೇಷ ಪ್ರಾರ್ಥನೆ ಮಾಡಿದರು. ಸೇಂಟ್ ವೊಲೊಡಿಮಿರ್ ಕ್ಯಾಥೆಡ್ರಲ್‌ನಲ್ಲಿ ನೂರಾರು ಮಂದಿ ಸೇರಿದ್ದರು.
- ರಷ್ಯಾದ ಸೇನೆಯು ಸಿವೆರೊಡೊನೆಟ್ಸ್ಕ್, ಕುರಾಖಿವ್ ಮತ್ತು ಪೊಪಾಸ್ನಾ ಭಾಗದಿಂದ ದಾಳಿಯನ್ನು ತೀವ್ರಗೊಳಿಸಿದೆ ಎಂದು ಉಕ್ರೇನ್‌ನ ಸೇನೆಯ ಮುಖ್ಯಸ್ಥರು ಭಾನುವಾರ ತಿಳಿಸಿದರು.
- ರಷ್ಯಾದ ಕ್ಷಿಪಣಿ ದಾಳಿಯಿಂದ ನಿಪ್ರೊ ವಲಯದಲ್ಲಿ ಒಬ್ಬರು ಮೃತಪಟ್ಟಿದ್ದು, ಲುಹಾನ್ಸ್ಕ್ ವಲಯದಲ್ಲಿ ಇಬ್ಬರು ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಗವರ್ನರ್‌ಗಳು ತಿಳಿಸಿದ್ದಾರೆ.
- ಉಕ್ರೇನ್ ಮತ್ತು ವಿವಿಧ ದೇಶಗಳ ನಡುವೆ ವಾಣಿಜ್ಯ ವಹಿವಾಟಿಗೆ ಧಕ್ಕೆ ಆಗದಂತೆ ರೈಲ್ವೆ ಸಂಪರ್ಕ ವಲಯ ಅಭಿವೃದ್ಧಿಗೆ ಕುರಿತು ಉಕ್ರೇನ್ ಮತ್ತು ಪೋಲೆಂಡ್ ಒಪ್ಪಂದಕ್ಕೆ ಸಹಿಹಾಕಿವೆ. ಉಕ್ರೇನ್ ಪ್ರಧಾನಿ ಡೆನಿಸ್ ಶಮಿಹಾಲ್ ಮತ್ತು ಪೋಲೆಂಡ್‌ನ ಮಾಟೆಸ್ಜ್ ಮೊರಾವಿಕಿ ಒಪ್ಪಂದಕ್ಕೆ ಸಹಿ ಹಾಕಿದರು.

ರಷ್ಯಾ–ಉಕ್ರೇನ್ ಸಮರಾಂಗಣ

ಝೆಲೆನ್‌ಸ್ಕಿ–ಬ್ಲಿಂಕೆನ್ ಭೇಟಿಗೆ ಸಿದ್ಧತೆ

ಕೀವ್: 'ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕೆನ್, ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್‌ರನ್ನು ಭೇಟಿ ಮಾಡಲಿದ್ದೇನೆ' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ತಿಳಿಸಿದ್ದಾರೆ.

'ಈ ಭೇಟಿ ನಿರ್ದಿಷ್ಟ ಫಲಿತಾಂಶ ನೀಡುವ ವಿಶ್ವಾಸವಿದೆ. ಕೆಲ ಶಸ್ತ್ರಾಸ್ತ್ರ, ನೆರವು ದೊರೆಯಲಿದೆ ಎಂದು ನಿರೀಕ್ಷಿಸಿದ್ದೇನೆ' ಎಂದರು.

ಯುದ್ಧದ ಸ್ಥಿತಿ ಕುರಿತಂತೆ ಅವರು, 'ಖಂಡಿತ ಪುನರುತ್ಥಾನ ಆಗಲಿದೆ. ಬದುಕು ಸಾವನ್ನು, ಸತ್ಯ ಸುಳ್ಳನ್ನು ಸೋಲಿಸಲಿದೆ. ದುಷ್ಟರಿಗೆ ಶಿಕ್ಷೆ ಆಗಲಿದೆ. ರಷ್ಯಾ ತನ್ನ ತಪ್ಪಿನಿಂದ ಪಾಠ ಕಲಿಯುವ ಕಾಲ ಬರಲಿದೆ' ಎಂದರು.

ಉಭಯ ರಾಷ್ಟ್ರಗಳ ನಡುವೆ ಉನ್ನತ ಮಟ್ಟದ ಮಾತುಕತೆ ಇದಾಗಿದೆ. ಹಿಂದೆ ಝೆಲೆನ್‌ಸ್ಕಿ ಫೆ.19ರಂದು ಮ್ಯೂನಿಕ್‌ನಲ್ಲಿ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರನ್ನು ಭೇಟಿಯಾಗಿದ್ದರು.

ಕೇಂದ್ರ ಸರ್ಕಾರದ ವಿರುದ್ಧ ಯುದ್ಧ ಸಾರಲು ಕುತಂತ್ರದ ಆರೋಪ

ಕರ್ನಾಟಕದ ಐವರ ವಿರುದ್ಧ ಎನ್‌ಐಎ ಆರೋಪಪಟ್ಟಿ

ಎರ್ನಾಕುಲಂ (ಪಿಟಿಐ): ಭಯೋತ್ಪಾದಕ ಕೃತ್ಯ ಹಾಗೂ ಭಾರತ ಸರ್ಕಾರದ ವಿರುದ್ಧ ಯದ್ಧ ಸಾರಲು ನಿಷೇಧಿತ ಸಿಪಿಐ (ಮಾವೋವಾದಿ) ಭಯೋತ್ಪಾದಕ ಸಂಘಟನೆಯನ್ನು ಬಲಗೊಳಿಸುವ ಪಿತೂರಿಯಲ್ಲಿ ಭಾಗಿಯಾಗಿದ್ದ ಆರೋಪದಡಿ ಕರ್ನಾಟಕದ ಐವರು ಸೇರಿದಂತೆ 20 ಮಾವೋವಾದಿಗಳ ವಿರುದ್ಧ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ವಿಶೇಷ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದೆ.

ಚಿಕ್ಕಮಗಳೂರಿನ ಶ್ರೀಮತಿ ಬಿ.ಪಿ, ಸಾವಿತ್ರಿ ಮತ್ತು ಬಿ.ಜಿ. ಕೃಷ್ಣಮೂರ್ತಿ, ಬೆಂಗಳೂರಿನ ರಮೇಶ್ ಹಾಗೂ ಉಡುಪಿಯ ವಿಕ್ರಂ ಗೌಡ ಸೇರಿದಂತೆ ಒಟ್ಟಾರೆ 20 ಮಂದಿಯ ವಿರುದ್ಧ ಭಾರತೀಯ ದಂಡ ಸಂಹಿತೆ, ಶಸ್ತ್ರಾಸ್ತ್ರ ಕಾಯ್ದೆ ಹಾಗೂ ಕಾನೂನು ಬಾಹಿರ ಚಟುವಟಿಕೆಗಳ (ನಿಯಂತ್ರಣ) ಕಾಯ್ದೆ ಅಡಿ ದೋಷಾರೋಪ ಸಲ್ಲಿಕೆಯಾಗಿದೆ.

ಶಸ್ತ್ರಾಸ್ತ್ರ ತರಬೇತಿ, ಭಯೋತ್ಪಾದಕ ಕೃತ್ಯ ಹಾಗೂ ಭಾರತ ಸರ್ಕಾರದ ವಿರುದ್ಧ ಯುದ್ಧದ ಉದ್ದೇಶಕ್ಕಾಗಿ ನಿಷೇಧಿತ ಭಯೋತ್ಪಾದಕ ಸಂಘಟನೆಯನ್ನು ಬಲಗೊಳಿಸಲು 2016ರಲ್ಲಿ ಮಲಪ್ಪುರಂ ಜಿಲ್ಲೆಯ ನೀಲಂಬೂರು ಅರಣ್ಯ ಪ್ರದೇಶದಲ್ಲಿ ಸಭೆ ಕರೆದಿದ್ದ ಆರೋಪದ ಮೇರೆಗೆ ಈ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದೆ ಎಂದು ಎನ್‌ಐಎ ವಕ್ತಾರ ತಿಳಿಸಿದ್ದಾರೆ.

ಮೊದಲಿಗೆ 2017ರಲ್ಲಿ ಮಲಪ್ಪುರಂನ ಎಡಕ್ಕರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಆ ಬಳಿಕ ಕೇರಳ ಎಟಿಎಸ್ ಈ ಪ್ರಕರಣದ ತನಿಖೆಯನ್ನು ಕೈಗೊಂಡಿತ್ತು. ಕಳೆದ ವರ್ಷದ ಆಗಸ್ಟ್‌ನಲ್ಲಿ ವಿಚಾರಣೆಯನ್ನು ಎನ್‌ಐಎ ಕೈಗೆತ್ತಿಕೊಂಡಿತ್ತು.

ಇಂದು ದೆಹಲಿಗೆ ಮಹಾರಾಷ್ಟ್ರ ಬಿಜೆಪಿ ನಿಯೋಗ

ಮುಂಬೈ: ಪಕ್ಷದ ನಾಯಕರ ಮೇಲೆ ದಾಳಿ, ಪಕ್ಷೇತರ ಶಾಸಕ ರವಿ ರಾಣಾ ಮತ್ತು ಅವರ ಪತ್ನಿ, ಸಂಸದೆ ನವನೀತ್ ರಾಣಾ ಅವರ ಬಂಧನದಂತಹ ಬೆಳವಣಿಗೆಗಳ ಬಗ್ಗೆ ಆಘಾತ ವ್ಯಕ್ತಪಡಿಸಿರುವ ಮಹಾರಾಷ್ಟ್ರದ ಬಿಜೆಪಿ ಮುಖಂಡರು, ಸೋಮವಾರ (ಏ.25) ನವದೆಹಲಿಗೆ ತೆರಳಲು ನಿರ್ಧರಿಸಿದ್ದಾರೆ.

ಬಿಜೆಪಿ ಮುಖಂಡರನ್ನು ಒಳಗೊಂಡ ನಿಯೋಗ ಕೇಂದ್ರ ಗೃಹ ಸಚಿವಾಲಯ ಸೇರಿದಂತೆ ವಿವಿಧ ಇಲಾಖೆಗಳ ಉನ್ನತ ಅಧಿಕಾರಿಗಳನ್ನು ಭೇಟಿ ಮಾಡಿ, ಮಹಾರಾಷ್ಟ್ರದಲ್ಲಿನ ಕಾನೂನು–ಸುವ್ಯವಸ್ಥೆ ಬಗ್ಗೆ ವಿವರಿಸಲಿದೆ ಎಂದು ಮೂಲಗಳು ಹೇಳಿವೆ.

ಬಿಜೆಪಿ ಪಾಳೆಯದ ಈ ನಡೆಯನ್ನು ಗಮನಿಸುತ್ತಿರುವ ಮಹಾ ವಿಕಾಸ್ ಆಘಾಡಿ (ಎಂವಿಎ) ನಾಯಕರು, ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸುವ ಹುನ್ನಾರ ನಡೆಯುತ್ತಿದೆ ಎಂದು ಪ್ರತಿಕ್ರಿಯಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಬಾಲಕಿ ಮೇಲೆ ಪಾದ್ರಿ ಅತ್ಯಾಚಾರ ಆರೋಪ; ಬಂಧನ

ಬಾಗ್ಪತ್ (ಉತ್ತರ ಪ್ರದೇಶ) (ಪಿಟಿಐ): ಇಲ್ಲಿನ ಚಂಡಿನಗರದದಲ್ಲಿ ಚರ್ಚ್ ಪಾದ್ರಿಯೊಬ್ಬರು 11 ವರ್ಷದ ಬಾಲಕಿ ಮೇಲೆ ಅತ್ಯಾಚಾರ ನಡೆಸಿದ ಆರೋಪ ಕೇಳಿ ಬಂದಿದ್ದು, ಆರೋಪಿಯನ್ನು ಬಂಧಿಸಲಾಗಿದೆ.

'ನನ್ನ ಮಗಳು ಸೈಕಲ್ ತುಳಿಯುತ್ತ ಚರ್ಚ್‌ಗೆ ಹೋಗಿದ್ದ ವೇಳೆ ಪಾದ್ರಿ ಆಲ್ಬರ್ಟ್ ಆಕೆಯ ಮೇಲೆ ಅತ್ಯಾಚಾರ ಎಸಗಿದ್ದಾರೆ' ಎಂದು ಸಂತ್ರಸ್ತೆಯ ತಾಯಿ ದೂರಿನಲ್ಲಿ ತಿಳಿಸಿದ್ದಾರೆ. ಅಲ್ಲದೆ ಈ ವಿಚಾರವನ್ನು ಯಾರಿಗೂ ತಿಳಿಸದಂತೆ ಆರೋಪಿಯು ಬೆದರಿಸಿದ್ದ. ಆದರೂ ಸಹ ಆಕೆ ಎಲ್ಲ ವಿಚಾರವನ್ನು ಪೋಷಕರಿಗೆ ತಿಳಿಸಿದ್ದಳು. ದೂರಿನ ಅನ್ವಯ ಪಾದ್ರಿಯನ್ನು ಬಂಧಿಸಲಾಗಿದೆ ಎಂದು ಬಾಗ್ಪತ್ ಎಸ್ಪಿ ನೀರಜ್ ಜಾದೂನ್ ಅವರು ತಿಳಿಸಿದ್ದಾರೆ.

ಕೋರ್ಟ್‌ಗೆ ಶರಣಾದ ಆಶಿಶ್ ಮಿಶ್ರಾ

ಲಖಿಂಪುರ (ಪಿಟಿಐ): ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣದ ಪ್ರಮುಖ ಆರೋಪಿ, ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಪುತ್ರ ಆಶಿಶ್ ಮಿಶ್ರಾ ಇಲ್ಲಿನ ಸ್ಥಳೀಯ ನ್ಯಾಯಾಲಯಕ್ಕೆ ಭಾನುವಾರ ಶರಣಾಗಿದ್ದಾರೆ.

'ಆಶಿಶ್‌ಗೆ ಅಲಹಾಬಾದ್ ಹೈಕೋರ್ಟ್ ನೀಡಿದ್ದ ಜಾಮೀನನ್ನು ಸುಪ್ರೀಂ ಕೋರ್ಟ್ ಇದೇ ಏಪ್ರಿಲ್ 18 ರಂದು ರದ್ದುಪಡಿಸಿ, ಒಂದು ವಾರದೊಳಗೆ ಶರಣಾಗುವಂತೆ ಸೂಚಿಸಿತ್ತು. ಅವಧಿಗೂ ಮುನ್ನವೇ ಆಶಿಶ್ ನ್ಯಾಯಾಲಯಕ್ಕೆ ಶರಣಾಗಿದ್ದಾರೆ' ಎಂದು ಆಶಿಶ್ ಪರ ವಕೀಲರು ತಿಳಿಸಿದ್ದಾರೆ. 'ಭದ್ರತೆಯ ದೃಷ್ಟಿಯಿಂದ ಆಶಿಶ್ ಅವರನ್ನು ಜೈಲಿನಲ್ಲಿ ಪ್ರತ್ಯೇಕ ಬ್ಯಾರಕ್‌ನಲ್ಲಿ ಇರಿಸಲಾಗುವುದು' ಎಂದು ಜೈಲು ಅಧೀಕ್ಷಕ ಪಿ.ಪಿ.ಸಿಂಗ್ ತಿಳಿಸಿದ್ದಾರೆ.

ಅಸ್ಸಾಂ: ಬಿಜೆಪಿ–ಎಜಿಪಿ ಮಡಿಲಿಗೆ ಗುವಾಹಟಿ ಪಾಲಿಕೆ

ಗುವಾಹಟಿ(ಪಿಟಿಐ): ಅಸ್ಸಾಂನ ಗುವಾಹಟಿ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿ–ಎಜಿಪಿ ಮಿತ್ರ ಪಕ್ಷವು ಜಯಭೇರಿ ಸಾಧಿಸಿದ್ದು, ಎಎಪಿ ಖಾತೆ ತೆರೆದಿದೆ.

60 ವಾರ್ಡ್‌ಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಮತ್ತು ಅಸ್ಸಾಂ ಗಣ ಪರಿಷದ್(ಎಜಿಪಿ) ಮಿತ್ರ ಪಕ್ಷವು 58 ಸ್ಥಾನಗಳಲ್ಲಿ ಜಯ ಸಾಧಿಸಿದೆ. ಆಮ್ ಆದ್ಮಿ ಪಾರ್ಟಿ (ಎಎಪಿ) ಹಾಗೂ ಅಸ್ಸಾಂ ಜಾತಿಯಾ ಪರಿಷದ್ (ಎಜೆಪಿ) ತಲಾ ಒಂದು ಸ್ಥಾನ ಗಳಿಸಿವೆ. ಕಾಂಗ್ರೆಸ್ ಶೂನ್ಯ ಸಾಧನೆಯೊಂದಿಗೆ ದೂಳೀಪಟವಾಗಿದೆ.

ಬಿಜೆಪಿ ಮೂರು ಅಭ್ಯರ್ಥಿಗಳ ಅವಿರೋಧ ಆಯ್ಕೆಯೊಂದಿಗೆ 52 ಸ್ಥಾನ ಗಳಿಸಿದೆ. ಇನ್ನುಳಿದ ಆರು ವಾರ್ಡ್‌ಗಳಲ್ಲಿ ಎಜಿಪಿ ಅಭ್ಯರ್ಥಿಗಳು ಗೆದ್ದಿದ್ದಾರೆ ಎಂದು ಅಸ್ಸಾಂ ಚುನಾವಣೆ ಆಯೋಗವು ತಿಳಿಸಿದೆ.

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಬೇಸಿಗೆ ರಜೆ ಶಾಲೆಗಷ್ಟೇ, ಓದಿಗಲ್ಲ. ಮಕ್ಕಳು ಆಡುತ್ತಾ, ಕಲಿಯುತ್ತಾ ರಜೆಯ ಮಜವನ್ನು ಸವಿಯಬಹುದು.

ಸಂಖ್ಯೆ-ಸುದ್ದಿ: ನಿರೀಕ್ಷಿತ ಜೀವಿತಾವಧಿಗೆ ಜಾತಿಯ ನಂಟು

ಫ್ರಾನ್ಸ್ ಅಧ್ಯಕ್ಷೀಯ ಚುನಾವಣೆ: ಗೆಲುವಿನತ್ತ ಮ್ಯಾಕ್ರಾನ್ 3

ಪ್ರಶ್ನೆಪತ್ರಿಕೆ ಸೋರಿಕೆ: ಎಫ್‌ಐಆರ್ ದಾಖಲು 4

ಚೆನ್ನೈ ಸೂಪರ್ ಕಿಂಗ್ಸ್-ಪಂಜಾಬ್ ಕಿಂಗ್ಸ್ ಹಣಾಹಣಿ ಇಂದು

ಮಯಂಕ್ ಪಡೆಗೆ ಧೋನಿ ಸವಾಲು 9

ವಿದ್ಯಾರ್ಥಿಗಳು ಹಿಂದಿರುಗಲು ಅವಕಾಶ ಕೊಡದಿರುವುದಕ್ಕೆ ಭಾರತದ ತಿರುಗೇಟು

ಚೀನೀಯರ ಪ್ರವಾಸಿ ವೀಸಾಕ್ಕೆ ಕತ್ತರಿ

ನವದೆಹಲಿ (ಪಿಟಿಐ): ಚೀನಾದ ನಾಗರಿಕರಿಗೆ ನೀಡಲಾಗಿದ್ದ ಪ್ರವಾಸಿ ವೀಸಾಗಳನ್ನು ಭಾರತವು ಅಮಾನತು ಮಾಡಿದೆ. ವಿಮಾನಯಾನ ಸಂಸ್ಥೆಗಳ ಸಂಘ ಐಎಟಿಎ ಈ ಮಾಹಿತಿಯನ್ನು ತನ್ನೆಲ್ಲ ಸದಸ್ಯರಿಗೆ ತಿಳಿಸಿದೆ.

ಚೀನಾದಲ್ಲಿ ಕಲಿಯುತ್ತಿದ್ದ ಸುಮಾರು 22,000 ಭಾರತೀಯ ವಿದ್ಯಾರ್ಥಿಗಳು ಕೋವಿಡ್ ಸಾಂಕ್ರಾಮಿಕದ ಕಾರಣಕ್ಕೆ 2020ರಲ್ಲಿ ದೇಶಕ್ಕೆ ಹಿಂದಿರುಗಿದ್ದರು. ಆದರೆ, ಭೌತಿಕ ತರಗತಿಗಳಿಗೆ ಹಾಜರಾಗಲು ಸಾಧ್ಯವಾಗುವಂತೆ ಅವರಿಗೆ ಚೀನಾ ಸರ್ಕಾರವು ವೀಸಾ ನೀಡಿಲ್ಲ. ಹಲವು ಬಾರಿ ಪ್ರಸ್ತಾಪಿಸಿದ್ದರೂ ಈ ಸಮಸ್ಯೆಯನ್ನು ಪರಿಹರಿಸಲು ಚೀನಾ ಮುಂದಾಗಿಲ್ಲ. ಚೀನಾದ ನಿಲುವಿಗೆ ತಿರುಗೇಟು ನೀಡುವುದಕ್ಕಾಗಿ ಭಾರತ ಸರ್ಕಾರವು ವೀಸಾ ಅಮಾನತು ಕ್ರಮ ಕೈಗೊಂಡಿದೆ.

ಚೀನಾದ ಪೌರರಿಗೆ ನೀಡಲಾಗಿರುವ ಪ್ರವಾಸಿ ವೀಸಾಗಳು ಅಸಿಂಧು ಎಂದು ಏಪ್ರಿಲ್ 20ರಂದು ಹೊರಡಿಸಿದ್ದ ಸುತ್ತೋಲೆಯಲ್ಲಿ ಹೇಳಲಾಗಿದೆ.

ಭೂತಾನ್, ಭಾರತ, ಮಾಲ್ಡೀವ್ಸ್ ಮತ್ತು ನೇಪಾಳದ ಪೌರರು, ಭಾರತವು ನೀಡಿರುವ ನಿವಾಸಿ ಪರವಾನಗಿ ಹೊಂದಿರುವವರು, ಭಾರತವು ನೀಡಿರುವ ವೀಸಾ ಅಥವಾ ಇ-ವೀಸಾ ಹೊಂದಿರುವವರು, ಸಾಗರೋತ್ತರ ಭಾರತೀಯ ನಾಗರಿಕರು, ಭಾರತ ಮೂಲದ ವ್ಯಕ್ತಿಗಳು, ರಾಜತಾಂತ್ರಿಕ ಪಾಸ್‌ಪೋರ್ಟ್ ಹೊಂದಿರುವವರು ಭಾರತಕ್ಕೆ ಪ್ರವೇಶಿಸಲು ಅರ್ಹರು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

10 ವರ್ಷ ಅವಧಿಯ ಪ್ರವಾಸಿ ವೀಸಾಗಳು ಇನ್ನು ಮುಂದೆ ಸಿಂಧು ಅಲ್ಲ ಎಂದು ಅಂತರರಾಷ್ಟ್ರೀಯ ವಿಮಾನ ಸಾರಿಗೆ ಸಂಘ (ಐಎಟಿಎ) ತಿಳಿಸಿದೆ. ಐಎಟಿಎಯಲ್ಲಿ 290 ಸದಸ್ಯ ಸಂಸ್ಥೆಗಳಿವೆ. ಜಾಗತಿಕ ವಿಮಾನ ಸಂಚಾರದ ಶೇ 80ರಷ್ಟನ್ನು ಈ ಸಂಸ್ಥೆಗಳು ನಿಭಾಯಿಸುತ್ತಿವೆ.

ಕಟ್ಟುನಿಟ್ಟಿನ ನಿರ್ಬಂಧಗಳನ್ನು ಮುಂದುವರಿಸುವ ಮೂಲಕ ಭಾರತದ ಸಾವಿರಾರು ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯವನ್ನು ಚೀನಾವು ಗಂಡಾಂತರಕ್ಕೆ ತಳ್ಳಿದೆ. ಹೊಂದಾಣಿಕೆಯ ನಿಲುವು ಅನುಸರಿಸಿ ಎಂಬ ಭಾರತದ ಕೋರಿಕೆಯನ್ನು ಚೀನಾ ಮನ್ನಿಸಿಲ್ಲ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಹೇಳಿದ್ದಾರೆ.

ಭಾರತೀಯ ವಿದ್ಯಾರ್ಥಿಗಳನ್ನು ಮತ್ತೆ ಕರೆಸಿಕೊಳ್ಳುವುದಕ್ಕೆ ಸಂಬಂಧಿಸಿ ಯೋಚನೆ ಮಾಡಲಾಗುತ್ತಿದೆ ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರರು ಫೆಬ್ರುವರಿ 8ರಂದು ಹೇಳಿದ್ದರು. ಆದರೆ, ಈ ಬಗ್ಗೆ ಸ್ಪಷ್ಟವಾದ ಯಾವುದೇ ನಿರ್ಧಾರವನ್ನು ಚೀನಾ ಈವರೆಗೆ ಪ್ರಕಟಿಸಿಲ್ಲ. ಭಾರತೀಯ ವಿದ್ಯಾರ್ಥಿಗಳು ಬೇಗನೆ ಹಿಂದಿರುಗಲು ಸಾಧ್ಯವಾಗುವಂತಹ ಕ್ರಮ ಕೈಗೊಳ್ಳಿ ಎಂದು ಚೀನಾವನ್ನು ಕೋರುತ್ತಿದ್ದೇವೆ ಎಂದು ಬಾಗ್ಚಿ ಅವರು ಹೇಳಿದ್ದಾರೆ.

ಸಚಿವರ ಮಾತುಕತೆಯಿಂದಲೂ ಫಲವಿಲ್ಲ

ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಅವರ ಜತೆಗೆ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಭಾರತೀಯ ವಿದ್ಯಾರ್ಥಿಗಳ ವೀಸಾ ವಿಚಾರ ಪ್ರಸ್ತಾಪಿಸಿದ್ದಾರೆ. ತಜಿಕಿಸ್ತಾನದ ದುಷಾಂಬೆಯಲ್ಲಿ ಕಳೆದ ಸೆಪ್ಟೆಂಬರ್‌ನಲ್ಲಿ ನಡೆದ ಸಭೆಯಲ್ಲಿ ಈ ಬಗ್ಗೆ ಚರ್ಚೆ ಆಗಿತ್ತು. ಶಾಂಘೈ ಸಹಕಾರ ಸಂಘಟನೆಯ ಸಮಾವೇಶದ ಸಂದರ್ಭದಲ್ಲಿ ಈ ಮಾತುಕತೆ ನಡೆದಿತ್ತು. ಥಾಯ್ಲೆಂಡ್, ಪಾಕಿಸ್ತಾನ ಮತ್ತು ಶ್ರೀಲಂಕಾದ ವಿದ್ಯಾರ್ಥಿಗಳು ಚೀನಾಕ್ಕೆ ಹೋಗಲು ಅವಕಾಶ ಇದೆ. ಆದರೆ, ಎರಡೂ ದೇಶಗಳ ವಿದೇಶಾಂಗ ಸಚಿವರ ನಡುವೆ ಭಾರತದ ವಿದ್ಯಾರ್ಥಿಗಳನ್ನು ಕರೆಸಿಕೊಳ್ಳುವ ಕುರಿತು ಮಾತುಕತೆ ನಡೆದಿದ್ದರೂ, ಯಾವುದೇ ಪರಿಹಾರ ಸಿಕ್ಕಿಲ್ಲ.

- 156 ದೇಶಗಳ ಜನರಿಗೆ ನೀಡಿದ್ದ ಎಲೆಕ್ಟ್ರಾನಿಕ್ ವೀಸಾಗಳನ್ನು ಕಳೆದ ತಿಂಗಳು ಮರುಸ್ಥಾಪಿಸಲಾಗಿದೆ
- ಬ್ರಿಟನ್ ಮತ್ತು ಕೆನಡಾದ ಜನರು ಎಲೆಕ್ಟ್ರಾನಿಕ್ ವೀಸಾಗಳಲ್ಲಿ ಭಾರತಕ್ಕೆ ಬರುವಂತಿಲ್ಲ
- ಭಾರತೀಯ ರಾಯಭಾರ ಕಚೇರಿ ನೀಡುವ ನಿಯಮಿತ ವೀಸಾದಲ್ಲಿ ಅವರು ಭಾರತಕ್ಕೆ ಬರಬಹುದು

ಅಡುಗೆ ಎಣ್ಣೆ ಬೆಲೆ ಮತ್ತಷ್ಟು ಹೆಚ್ಚಳ?

ಬೆಂಗಳೂರು: ತಾಳೆ ಎಣ್ಣೆ ರಫ್ತು ನಿಷೇಧಿಸಲು ಇಂಡೊನೇಷ್ಯಾ ತೀರ್ಮಾನಿಸಿರುವ ಪರಿಣಾಮವಾಗಿ ದೇಶದಲ್ಲಿ ಅಡುಗೆ ಎಣ್ಣೆ ಬೆಲೆಯು ತೀವ್ರವಾಗಿ ಏರಿಕೆ ಆಗಬಹುದು ಎಂಬ ಆತಂಕ ವ್ಯಕ್ತವಾಗಿದೆ. ಈ ನಡುವೆ, ರಫ್ತು ನಿಷೇಧವನ್ನು ಇಂಡೊನೇಷ್ಯಾ ಹೆಚ್ಚು ಕಾಲ ಜಾರಿಯಲ್ಲಿ ಇರಿಸಲಿಕ್ಕಿಲ್ಲ ಎಂಬ ಆಶಾಭಾವನೆ ಕೂಡ ವರ್ತಕರಲ್ಲಿ ಇದೆ. 8

ಪ್ರಶಸ್ತಿ ಪ್ರದಾನ

ಬೆಂಗಳೂರಿನಲ್ಲಿ ಭಾನುವಾರ ನಡೆದ 2017ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಟಿ ಲಕ್ಷ್ಮೀ ಅವರಿಗೆ ಡಾ.ರಾಜ್‌ಕುಮಾರ್ ಜೀವಮಾನದ ಸಾಧನೆ ಪ್ರಶಸ್ತಿ ನೀಡಿ ಗೌರವಿಸಿದರು. ನಟ ರಾಘವೇಂದ್ರ ರಾಜ್‌ಕುಮಾರ್, ನಿರ್ಮಾಪಕ ಸಾ.ರಾ ಗೋವಿಂದು, ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಡಿ.ಆರ್. ಜೈರಾಜ್ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನೀಲ್ ಪುರಾಣಿಕ್ ಇದ್ದರು –ಪ್ರಜಾವಾಣಿ ಚಿತ್ರ

ಸುದ್ದಿ 4

ಬ್ಯಾಕ್‌ಲಾಗ್ ಎಂಜಿನಿಯರ್‌ಗಳಿಗೆ ಬಡ್ತಿ ವಂಚನೆ?

ಬೆಂಗಳೂರು: ‘ಲೋಕೋಪಯೋಗಿ, ಜಲಸಂಪನ್ಮೂಲ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಒಟ್ಟು 846 ಬ್ಯಾಕ್‌ಲಾಗ್ ಸಹಾಯಕ ಎಂಜಿನಿಯರ್‌ಗಳ ಸೇವೆ ಮತ್ತು ಜ್ಯೇಷ್ಠತೆಯನ್ನು 2003–2004ರಿಂದಲೇ ಪರಿಗಣಿಸುವಂತೆ ಸುಪ್ರೀಂ ಕೋರ್ಟ್ ತೀರ್ಪು ನೀಡಿದ್ದರೂ ಪದೋನ್ನತಿಗೆ ಪರಿಗಣಿಸದೆ ವಂಚಿಸಲಾಗಿದೆ’ ಎಂದು ಎಂಜಿನಿಯರ್‌ಗಳು ಆರೋಪಿಸಿದ್ದಾರೆ. 4

‘10ಕ್ಕೂ ಹೆಚ್ಚು ಶಾಸಕರು ಬಿಜೆಪಿ ಸಂಪರ್ಕದಲ್ಲಿದ್ದಾರೆ’ 4



ಒಳ ಪುಟಗಳು

ತಂದೆಯ ನೆನಪು: ನನಸಾದ ಚಿನ್ನದ ಕನಸು 10

ಎಐಎಂಐಎಂ ಮತ್ತೊಬ್ಬ ಮುಖಂಡ ಬಂಧನ 4

ಅಸುರಕ್ಷಿತ ಲೈಂಗಿಕತೆಯಿಂದ 17 ಲಕ್ಷ ಜನರಿಗೆ ಎಚ್‌ಐವಿ 8

ಚಿನಕುರಳಿ

ಪ್ರಕಾಶ್ ಶೆಟ್ಟಿ

ಉತ್ತರ ಪ್ರದೇಶದ ಬುಲ್ಡೋಜರ್ ಮಾದರಿ ಅಗತ್ಯವಿಲ್ಲ: ಸಿ.ಎಂ

ಗಲಭೆಕೋರರ ವಿರುದ್ಧ ‘ಕರ್ನಾಟಕ ಮಾದರಿ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಗಲಭೆಕೋರರ ವಿರುದ್ಧ ಕಠಿಣ ಕ್ರಮಕ್ಕೆ ‘ಕರ್ನಾಟಕ ಮಾದರಿ’ ಅನುಸರಿಸಲಾಗುವುದು. ಉತ್ತರ ಪ್ರದೇಶದ ಬುಲ್ಡೋಜರ್ ಮಾದರಿಯ ಅನುಕರಣೆ ಅಗತ್ಯವಿಲ್ಲ. ರಾಜ್ಯದ ಕಾನೂನುಗಳು ಬಲಿಷ್ಠವಾಗಿವೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದ ವಿಮಾನ ನಿಲ್ದಾಣದಲ್ಲಿ ಭಾನುವಾರ ಮಾಧ್ಯಮದವರ ಜೊತೆ ಮಾತನಾಡಿದ ಅವರು, ‘ಕರ್ನಾಟಕ-ದಲ್ಲಿ ಬುಲ್ಡೋಜರ್ ಕಾನೂನು ಜಾರಿಗೆ ತರಲಾಗುವುದೇ’ ಎನ್ನುವ ಪ್ರಶ್ನೆಗೆ ಮೇಲಿನಂತೆ ಪ್ರತಿಕ್ರಿಯಿಸಿದರು.

‘ಬೆಂಗಳೂರಿನ ಡಿ.ಜೆ.ಹಳ್ಳಿ, ಕೆ.ಜಿ. ಹಳ್ಳಿ ಗಲಭೆಯಿಂದ ಹಿಡಿದು ಹುಬ್ಬಳ್ಳಿ ಗಲಭೆಯ ತನಕ ಎಲ್ಲವನ್ನೂ ಆಳವಾಗಿ ತನಿಖೆ ಮಾಡಲಾಗುವುದು. ಕರ್ನಾಟಕ ನಡೆಯೇ ಹೊಸ ಮಾದರಿಯಾಗಲಿದೆ’ ಎಂದರು.

‘ರಾಜ್ಯದಲ್ಲಿಯೂ ಬುಲ್ಡೋಜರ್ ಕಾನೂನು ಜಾರಿಗೊಳಿಸಬೇಕು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹಾಗೂ ಕಂದಾಯ ಸಚಿವ ಆರ್.ಅಶೋಕ ಇತ್ತೀಚೆಗೆ ಸರ್ಕಾರವನ್ನು ಆಗ್ರಹಿಸಿದ್ದರು.

ವಿದೇಶಿ ನಂಟಿನ ತನಿಖೆ: ಬೆಂಗಳೂರಿನ ಶಾಲೆಗಳಿಗೆ ಬಾಂಬ್ ಬೆದರಿಕೆ ಒಡ್ಡಿದ್ದ ಇ-ಮೇಲ್ ಪಾಕಿಸ್ತಾನದಿಂದ ಬಂದಿದೆಯೇ ಎನ್ನುವ ಪ್ರಶ್ನೆಗೆ ‘ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿದ್ದುಕೊಂಡು ವಿದೇಶಿ ವಿಳಾಸ ನೀಡಿ ಆತಂಕ ಒಡ್ಡುವ ಕೃತ್ಯ ಎಸಗುವವರ ವಿರುದ್ಧ ತನಿಖೆ ಮಾಡಲಾಗುವುದು. ಕೇಂದ್ರದ ಸಂಬಂಧಿತ ವಿಭಾಗದಿಂದ ಮಾಹಿತಿ ಸಂಗ್ರಹಿಸಲಾಗುವುದು’ ಎಂದರು.

‘ಪಿಎಸ್‌ಐ ನೇಮಕಾತಿ ಪರೀಕ್ಷೆ ಅಕ್ರಮಕ್ಕೆ ಸಂಬಂಧಿಸಿದಂತೆ ವಿಡಿಯೊ ವೈರಲ್ ಆಗಿದೆ. ಹಲವಾರು ವಿಷಯಗಳು ಹೊರಬೀಳುತ್ತಿವೆ. ವಂಚನೆಯ ಹೊಸ ಮಾದರಿಗಳು ಪತ್ತೆಯಾಗುತ್ತಿವೆ. ಪಿಎಸ್‌ಐ ನೇಮಕ ನ್ಯಾಯಸಮ್ಮತ-ವಾಗಿದ್ದರೆ ಮಾತ್ರ ಉತ್ತಮ ಪೊಲೀಸ್ ಪಡೆಯು ನಿರ್ಮಾಣವಾಗುತ್ತದೆ’ ಎಂದು ಬೊಮ್ಮಾಯಿ ಅಭಿಪ್ರಾಯಪಟ್ಟರು.

ಕೋವಿಡ್: 27ರ ನಂತರ ಮಾರ್ಗಸೂಚಿ

‘ಕೋವಿಡ್ ನಾಲ್ಕನೆ ಅಲೆಯ ಆತಂಕದ ಹಿನ್ನೆಲೆಯಲ್ಲಿ ಏ.27ರಂದು ಪ್ರಧಾನಿಯವರ ಜೊತೆಗೆ ವಿಡಿಯೊ ಕಾನ್ಫರೆನ್ಸ್ ನಂತರ ಹೊಸ ಮಾರ್ಗಸೂಚಿಗಳನ್ನು ಪ್ರಕಟಿಸಲಾಗುವುದು’ ಎಂದು ಮುಖ್ಯಮಂತ್ರಿ ತಿಳಿಸಿದರು.

‘ದೇಶದ ವಿವಿಧೆಡೆ ಸೋಂಕು ಪ್ರಕರಣಗಳು ಹೆಚ್ಚಾಗುತ್ತಿವೆ. ಹಿಂದಿನ ಅನುಭವಗಳನ್ನು ಆಧರಿಸಿ ಕೋವಿಡ್ ನಿರ್ವಹಣೆಗೆ ಮುನ್ನೆಚ್ಚರಿಕೆ ವಹಿಸಲಿದ್ದೇವೆ. ತಜ್ಞರ ಸಲಹೆಗಳನ್ನೂ ಪಡೆಯಲಾಗುವುದು’ ಎಂದರು.

> ಬುಲ್ಡೋಜರ್ ತರಲು ಇದು ಉತ್ತರ ಪ್ರದೇಶವಲ್ಲ, ಕರ್ನಾಟಕ. ಉತ್ತರಪ್ರದೇಶಕ್ಕೆ ನಮ್ಮ ರಾಜ್ಯವನ್ನು ಹೋಲಿಸಬೇಡಿ. ಇಲ್ಲಿ ಪ್ರಜ್ಞಾವಂತರಿದ್ದಾರೆ
>
> **ಡಿ.ಕೆ.ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ಎನ್‌ಎಫ್‌ಎಚ್‌ಎಸ್ ದತ್ತಾಂಶ ಆಧಾರದಲ್ಲಿ ವಿಶ್ಲೇಷಣೆ

ಪರಿಶಿಷ್ಟರಿಗೆ ಆಯುಷ್ಯ ಕಡಿಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಸಮಾಜದಲ್ಲಿ ಇರುವ ಜಾತಿ ಶ್ರೇಣೀಕರಣ ಮತ್ತು ಜನರ ನಿರೀಕ್ಷಿತ ಜೀವಿತಾವಧಿ ನಡುವೆ ನೇರ ಸಂಬಂಧ ಇದೆ ಎಂದು ಅಧ್ಯಯನವೊಂದು ಬಹಿರಂಗಪಡಿಸಿದೆ. ಪರಿಶಿಷ್ಟ ಪಂಗಡಕ್ಕೆ ಸೇರಿದ ಜನರ ಜೀವಿತಾವಧಿ ನಿರೀಕ್ಷೆಯು ಇತರ ಜಾತಿಗಳಿಗೆ ಹೋಲಿಸಿದರೆ ಕಡಿಮೆ ಇದೆ ಎಂದು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ (ಎನ್‌ಎಫ್‌ಎಚ್‌ಎಸ್) ದತ್ತಾಂಶಗಳನ್ನು ವಿಶ್ಲೇಷಿಸಿ ಮಾಡಿದ ಅಧ್ಯಯನವು ಹೇಳಿದೆ. ಅಧ್ಯಯನವು ಪಾಪ್ಯುಲೇಷನ್ ಆ್ಯಂಡ್ ಡೆವಲಪ್‌ಮೆಂಟ್ ರಿವ್ಯೂ ನಿಯತಕಾಲಿಕದಲ್ಲಿ ಪ್ರಕಟವಾಗಿದೆ.

ಎನ್‌ಎಫ್‌ಎಚ್‌ಎಸ್‌ನ 1997–2000 ಮತ್ತು 2013–2016ರ ಎರಡು ಸಮೀಕ್ಷೆಗಳ ದತ್ತಾಂಶಗಳನ್ನು ಬಳಸಿಕೊಂಡು ಅಧ್ಯಯನ ನಡೆಸಲಾಗಿದೆ.

2013–16ರ ಅವಧಿಯಲ್ಲಿ ಪರಿಶಿಷ್ಟ ಪಂಗಡಗಳ ಪುರುಷರ ನಿರೀಕ್ಷಿತ ಜೀವಿತಾವಧಿಯು (ಜನನ ಸಂದರ್ಭದಲ್ಲಿ) 62.4 ವರ್ಷ ಇತ್ತು. ಇದೇ ಅವಧಿಯಲ್ಲಿ, ಪರಿಶಿಷ್ಟ ಜಾತಿಯ ಪುರುಷರ ನಿರೀಕ್ಷಿತ ಜೀವಿತಾವಧಿಯು 63.3 ವರ್ಷ ಇತ್ತು. ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಗಂಡಸರ ಜೀವಿತಾವಧಿಯು ಈ ಎರಡೂ ಜಾತಿಗಳಿಗಿಂತ ಹೆಚ್ಚು ಇತ್ತು. ಈ ವರ್ಗದ ಪುರುಷರ ನಿರೀಕ್ಷಿತ ಜೀವಿತಾವಧಿಯು 65.5 ವರ್ಷ. ಮುಸ್ಲಿಂ ಗಂಡಸರ ನಿರೀಕ್ಷಿತ ಜೀವಿತಾವಧಿಯು ಇನ್ನೂ ಸ್ವಲ್ಪ ಹೆಚ್ಚು ಇದ್ದು, 66.8 ವರ್ಷಗಳಾಗಿವೆ. ಪ್ರಬಲ ಜಾತಿಗಳು ಎಂದು ಪರಿಗಣಿಸಲಾಗುವ ಜಾತಿಗಳ ಪುರುಷರು 69.4 ವರ್ಷ ಜೀವಿಸಿರುತ್ತಾರೆ ಎಂಬ ನಿರೀಕ್ಷೆ ಇದೆ. ಅಂದರೆ, ಅತ್ಯಂತ ಕಡಿಮೆ ನಿರೀಕ್ಷಿತ ಜೀವಿತಾವಧಿ ಹೊಂದಿರುವ ಪರಿಶಿಷ್ಟ ಪಂಗಡಗಳ ಪುರುಷರಿಗಿಂತ ಪ್ರಬಲ ಎಂದು ಪರಿಗಣಿಸಲಾಗುವ ಜಾತಿಯ ಜನರ ನಿರೀಕ್ಷಿತ ಜೀವಿತಾವಧಿಯು 7 ವರ್ಷಗಳಷ್ಟು ಹೆಚ್ಚು.

ಮಹಿಳೆಯರ ನಿರೀಕ್ಷಿತ ಜೀವಿ-ತಾವಧಿಯಲ್ಲಿಯೂ ಇದೇ ರೀತಿಯ ವ್ಯತ್ಯಾಸವನ್ನು ಗುರುತಿಸಲಾಗಿದೆ. ಜತೆಗೆ, ಎಲ್ಲ ವರ್ಗಗಳಲ್ಲಿಯೂ ಮಹಿಳೆಯರ ಆಯುಷ್ಯದ ನಿರೀಕ್ಷೆಯು ಪುರುಷರಿಗಿಂತ ಹೆಚ್ಚು ಇದೆ ಎಂಬುದನ್ನೂ ಗುರುತಿಸಲಾಗಿದೆ. ಪರಿಶಿಷ್ಟ ಪಂಗಡದ ಪುರುಷರ ನಿರೀಕ್ಷಿತ ಜೀವಿತಾವಧಿಯು ಪರಿಶಿಷ್ಟ ಜಾತಿಯ ಪುರುಷರ ನಿರೀಕ್ಷಿತ ಜೀವಿತಾವಧಿಗಿಂತ ಕಡಿಮೆ ಇದೆ.

ಜಾಗತಿಕ ಸರಾಸರಿಗಿಂತ ಕಡಿಮೆ

ಭಾರತೀಯರ ಸರಾಸರಿ ನಿರೀಕ್ಷಿತ ಜೀವಿತಾವಧಿಯು ಜಾಗತಿಕ ಸರಾಸರಿ ನಿರೀಕ್ಷಿತ ಜೀವಿತಾವಧಿಗಿಂತ ಕಡಿಮೆ ಇದೆ. ವಿಶ್ವಬ್ಯಾಂಕ್‌ನ ಅಂದಾಜು ಪ್ರಕಾರ 2019ರಲ್ಲಿ ಭಾರತೀಯರ ನಿರೀಕ್ಷಿತ ಜೀವಿತಾವಧಿಯು 69.6 ವರ್ಷ ಇತ್ತು. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, 2019ರಲ್ಲಿ ಜಾಗತಿಕ ಸರಾಸರಿ ನಿರೀಕ್ಷಿತ ಜೀವಿತಾವಧಿಯು 73.4 ವರ್ಷ. ಹೀಗಾಗಿ, ಭಾರತೀಯರ ಸರಾಸರಿ ನಿರೀಕ್ಷಿತ ಜೀವಿತಾವಧಿಯು 3.8 ವರ್ಷ ಕಡಿಮೆ ಇದೆ. ಜಗತ್ತಿನಲ್ಲಿಯೇ ನಿರೀಕ್ಷಿತ ಜೀವಿತಾವಧಿ ಅತಿ ಹೆಚ್ಚು ಇರುವ ದೇಶ ಹಾಂಗ್‌ಕಾಂಗ್. ಇಲ್ಲಿನ ಜನರ ಸರಾಸರಿ ನಿರೀಕ್ಷಿತ ಜೀವಿತಾವಧಿಯು 84.7 ವರ್ಷ.

4ನೇ ಪುಟ ನೋಡಿ

ಜೋಸ್ ಅಲುಕ್ಕಾಸ್‌ನಲ್ಲಿ ಕೊಡುಗೆಗಳು

ಬೆಂಗಳೂರು: ಜೋಸ್ ಅಲುಕ್ಕಾಸ್ ಕಂಪನಿಯು ಡಿಕನ್‌ಸನ್ ರಸ್ತೆಯಲ್ಲಿ ಹೊಸ ಮಳಿಗೆ ಆರಂಭಿಸಿದ್ದು, ಗ್ರಾಹಕರಿಗೆ ಕೊಡುಗೆಗಳನ್ನು ಪ್ರಕಟಿಸಿದೆ. ಅಕ್ಷಯ ತೃತೀಯಾ ಹಿನ್ನೆಲೆಯಲ್ಲಿ ಆಭರಣಗಳಿಗೆ ಮುಂಗಡ ಬುಕಿಂಗ್ ಆರಂಭಿಸಿದೆ.

ಗ್ರಾಹಕರು ₹ 35,000 ಮೌಲ್ಯದ-ಚಿನ್ನಾಭರಣ ಕೊಂಡರೆ ಚಿನ್ನದ ನಾಣ್ಯ ಉಚಿತವಾಗಿ ಸಿಗುತ್ತದೆ. ಗ್ರಾಹಕರು ತಮ್ಮ ಹಳೆಯ 22 ಕ್ಯಾರಟ್ ಚಿನ್ನವನ್ನು ಬಿಐಎಸ್ ಹಾಲ್‌ಮಾರ್ಕ್ ಚಿನ್ನಾಭರಣ ಜೊತೆ ಅಥವಾ ಐಜಿಐ ಪ್ರಮಾಣಪತ್ರ ಇರುವ ವಜ್ರಾಭರಣದ ಜೊತೆ ನಷ್ಟವಿಲ್ಲದೆ ವಿನಿಮಯ ಮಾಡಿಕೊಳ್ಳಬಹುದು. ಉಚಿತ ಕೊಡುಗೆಗಳು ಹಾಗೂ ವಜ್ರಗಳ ಖರೀದಿಗೆ ಶೇ 20ರವರೆಗೆ ರಿಯಾಯಿತಿ, ಪ್ಲಾಟಿನಂ ಆಭರಣಗಳ ಮೇಲೆ ಶೇ 7ರವರೆಗೆ ರಿಯಾಯಿತಿ ಕೂಡ ಇರಲಿದೆ.

ಶ್ರದ್ಧಾಂಜಲಿ



ಶ್ರೀ. ಕೆ.ಎ. ರಾಮಚಂದ್ರಾರೆಡ್ಡಿ
S/o ಲೇಟ್ ಗೌರಮ್ಮ ಶ್ರೀ ಅಶ್ವತ್ತಪ್ಪರೆಡ್ಡಿ,
(ಶ್ರೀಮತಿ ಶ್ರೀ ಚಿಕ್ಕಮುನಿಯಪ್ಪರೆಡ್ಡಿ ಮೊಮ್ಮಗ) ಕಾಚರಕನಹಳ್ಳಿ.
ದಿನಾಂಕ 24-04-2022 ರಂದು ದೈವಾದೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು ದಿನಾಂಕ 25-04-2022 ರಂದು 11.30 ಗಂಟೆಗೆ ನೆರವೇರಿಸಲಾಗುವುದು
ಶೋಕತಪ್ತ ಹೃದಯದೊಂದಿಗೆ
CMR ಕುಟುಂಬ, ಕಾಚರಕನಹಳ್ಳಿ, ಬೆಂಗಳೂರು ನಗರ
Ph:99864 22221

ಶಿವಮೊಗ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ,
ಬಾಲರಾಜ್ ಅರಸ್ ರಸ್ತೆ, ಪಿ.ಬಿ. ನಂ.62, ಶಿವಮೊಗ್ಗ – 577 201.
ಕ್ರ.ಸಂ.: ಆ ಮತ್ತು ಸಿ/233/2022–23 ದಿನಾಂಕ: 22.04.2022

ನೇಮಕಾತಿ ಪ್ರಕಟಣೆ

ಶಿವಮೊಗ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ, ಶಿವಮೊಗ್ಗ, ಇದರಲ್ಲಿ ಖಾಲಿಯಿರುವ ಈ ಕೆಳಕಂಡ 98 ವಿವಿಧ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇಚ್ಛೆಯುಳ್ಳ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯಲ್ಲಿ ಸ್ವಹಸ್ತದ/ಗಣಕಯಂತ್ರದಿಂದ ಮಾಡಿದ ಅರ್ಜಿಯನ್ನು ಪೂರ್ಣ ವಿವರ, ಅಗತ್ಯ ದಾಖಲೆಗಳನ್ನು ಸ್ವಯಂ ದೃಢೀಕೃತ ಪ್ರತಿ ಹಾಗೂ ಅರ್ಜಿ ಶುಲ್ಕದೊಂದಿಗೆ ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸಬೇಕು.

ಕ್ರ. ಸಂ.	ಹುದ್ದೆಯ ವಿವರ	ವೇತನ ಶ್ರೇಣಿ	ನೇಮಕಾತಿ ಮಾಡಿಕೊಳ್ಳಬೇಕಾದ ಹುದ್ದೆಗಳ ಸಂಖ್ಯೆ
1	ಆಪ್ತ ಸಹಾಯಕರು/ ಶೀಘ್ರಲಿಪಿಗಾರರು	ರೂ.33450–62600	01
2	ಕಿರಿಯ ಸಹಾಯಕರು/ ಕ್ಷೇತ್ರಾಧಿಕಾರಿಗಳು/ ನಗದು ಗುಮಾಸ್ತರು	ರೂ.30350–58250	73
3	ವಾಹನ ಚಾಲಕರು	ರೂ.27650–52650	01
4	ಅಟೆಂಡರ್ಸ್	ರೂ.23500–47650	22
5	ಜಲಗಾರರು	ರೂ.17000–28950	01
	ಒಟ್ಟು		98

ವಿಶೇಷ ಸೂಚನೆ: ಮೇಲ್ಕಂಡ ಹುದ್ದೆಗಳ ಭರ್ತಿಗಾಗಿ ಬ್ಯಾಂಕು ಈ ಹಿಂದೆ ನೀಡಿದ್ದ ಪತ್ರಿಕಾ ಪ್ರಕಟಣೆ ಸಂಖ್ಯೆ: ಆ ಮತ್ತು ಸಿ/ 3041/2018–19 ದಿನಾಂಕ 22–02–2019ರ ಅನ್ವಯ ಅರ್ಜಿ ಸಲ್ಲಿಸಿ ಬ್ಯಾಂಕಿನಿಂದ ಲಿಖಿತ ಪರೀಕ್ಷೆಗೆ 'ಪ್ರವೇಶ ಪತ್ರ' ಸ್ವೀಕರಿಸಿದ ಅಭ್ಯರ್ಥಿಗಳು ಈ ಪ್ರಕಟಣೆಯನ್ನನುಸರಿಸಿ ಪುನಃ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಹಿಂದಿನ ಅರ್ಜಿಯನ್ನೇ ಪರಿಗಣಿಸಲಾಗುವುದು.

ಅರ್ಜಿ ನಮೂನೆ/ಮೀಸಲಾತಿ ವರ್ಗೀಕರಣ/ ಒಳ ಮೀಸಲಾತಿ/ ವಯೋಮಿತಿ/ ವಿದ್ಯಾರ್ಹತೆ/ ಅರ್ಜಿ ಶುಲ್ಕ/ ಆಯ್ಕೆ ವಿಧಾನ, ಲಗತ್ತಿಸಬೇಕಾದ ಪ್ರಮಾಣ ಪತ್ರಗಳು ಮತ್ತು ಸೂಚನೆ/ನಿಬಂಧನೆ ವಿವರಗಳು ಬ್ಯಾಂಕಿನ ವೆಬ್‌ಸೈಟ್ www.shimogadccbank.comನಲ್ಲಿ ಲಭ್ಯವಿರುತ್ತದೆ. ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕವಾದ 16.05.2022ರಂದು ಸಂಜೆ 05.30 ಘಂಟೆಯೊಳಗಾಗಿ ಅಂಚೆ/ ಕೊರಿಯರ್ ಮುಖಾಂತರ ಅಥವಾ ಖುದ್ದಾಗಿ ಸದಸ್ಯ ಕಾರ್ಯದರ್ಶಿ, ನೇಮಕಾತಿ ಸಮಿತಿ ಹಾಗೂ ಮುಖ್ಯ ಕಾರ್ಯನಿರ್ವಾಹಕರು, ಶಿವಮೊಗ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಬಾಲರಾಜ್ ಅರಸ್ ರಸ್ತೆ, ಪಿ. ಬಿ. ನಂ. 62, ಶಿವಮೊಗ್ಗ–577201 ಇವರಿಗೆ ಕಳುಹಿಸತಕ್ಕದ್ದು.

ಸ್ಥಳ: ಶಿವಮೊಗ್ಗ
ದಿನಾಂಕ: 22.04.2022
ಸಹಿ/– ಸದಸ್ಯ ಕಾರ್ಯದರ್ಶಿ,
ನೇಮಕಾತಿ ಸಮಿತಿ ಹಾಗೂ ಮುಖ್ಯ ಕಾರ್ಯನಿರ್ವಾಹಕರು,
ಶಿವಮೊಗ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಶಿವಮೊಗ್ಗ.

ಕುಂದು ಕೊರತೆ | ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

'ಪ್ರಯಾಣಿಕರ ತಂಗುದಾಣ ನಿರ್ಮಿಸಿ'

ಹೊರವರ್ತುಲ ರಸ್ತೆಯಲ್ಲಿರುವ ನಾಗರಬಾವಿಯಲ್ಲಿ ಬಸ್ ತಂಗುದಾಣವೇ ಇಲ್ಲ. ಈ ಜಾಗದಲ್ಲಿ ಬಸ್ ನಿಲ್ಲುತ್ತವೆ ಎಂಬುದು ಸ್ಥಳೀಯರಿಗೆ ಮಾತ್ರ ತಿಳಿದಿದೆ. ಪ್ರಯಾಣಿಕರಿಗೆ ಇಲ್ಲಿ ಆಸನ ವ್ಯವಸ್ಥೆಯೂ ಇಲ್ಲ. ನೆರಳಿಗೆ ಆಶ್ರಯವೂ ಇಲ್ಲ. ವಿದ್ಯಾರ್ಥಿಗಳು, ಮಹಿಳೆಯರು, ನೌಕರರು ಬಿಸಿಲಿನಲ್ಲೇ ಬಸ್‌ಗಾಗಿ ಕಾಯಬೇಕಾಗಿದೆ. ಮಳೆ ಬಂದರೆ ಎಲ್ಲಿ ನಿಲ್ಲುವುದು ಎಂದು ದಿಕ್ಕು ತೋಚದೆ ಪರದಾಡುತ್ತಾರೆ. ರಸ್ತೆ ಬದಿ ಇರುವ ವಿದ್ಯುತ್ ಕಂಬವೂ ಹಾಳಾಗಿದೆ. ಇದಕ್ಕೆ ಹೊಂದಿಕೊಂಡಿರುವ ಸ್ವಿಚ್ ಪೆಟ್ಟಿಗೆಯು ಕೆಳಭಾಗದಲ್ಲೇ ತೆರೆದುಕೊಂಡಿದ್ದು, ಅದರ ಪಕ್ಕದಲ್ಲೇ ಜನ ಕುಳಿತಿರುತ್ತಾರೆ. ಮಳೆ ಬಂದರೆ ವಿದ್ಯುತ್ ಪ್ರವಹಿಸಿ ಅವಘಡ ಸಂಭವಿಸುವ ಅಪಾಯವೂ ಇದೆ. ಈ ಜಾಗದಲ್ಲೊಂದು ಸುಸಜ್ಜಿತವಾದ ಪ್ರಯಾಣಿಕರ ತಂಗುದಾಣ ನಿರ್ಮಿಸಿದರೆ ಪ್ರಯಾಣಿಕರಿಗೆ ಅನುಕೂಲವಾಗಲಿದೆ. ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಈ ಬಗ್ಗೆ ಗಮನಹರಿಸಬೇಕು.

ಅನಂತ ಕಲ್ಲಾಪುರ, ಸಾರ್ವಜನಿಕ

ನಾಗರಬಾವಿಯಲ್ಲಿ ಪ್ರಯಾಣಿಕರ ಪರದಾಟ

ರಸ್ತೆಯಲ್ಲಿ ನೀರು ನಿಂತು ದುರ್ನಾತ

ಗಾಂಧಿನಗರದ ಕಾಳಿದಾಸ ಮಾರ್ಗ ರಸ್ತೆಯಲ್ಲಿ ಪ್ರತಿನಿತ್ಯವೂ ಸಂಚಾರ ಮತ್ತು ವಾಹನ ದಟ್ಟಣೆ ಹೆಚ್ಚು. ಇಲ್ಲಿ ಕಾಲಕಾಲಕ್ಕೆ ಕಸ ವಿಲೇವಾರಿ ಆಗುವುದಿಲ್ಲ. ಸರಾಗವಾಗಿ ಹರಿಯದ ಮಳೆ ನೀರು ರಸ್ತೆಯ ಇಕ್ಕೆಲಗಳಲ್ಲಿ ನಿಂತು ದುರ್ನಾತ ಬೀರುತ್ತದೆ.

ವಾಹನಗಳು ವೇಗವಾಗಿ ಸಂಚರಿಸುವುದರಿಂದ ಗಲೀಜು ನೀರು ಜನರ ಮೇಲೆ ಚಿಮ್ಮುವುದು ಸಾಮಾನ್ಯ ಎಂಬಂತಾಗಿದೆ. ಇದು ಸಣ್ಣ ವಿಷಯವಾಗಿ ಕಂಡರೂ ಮಲಿನಗೊಂಡ ನೀರಿನಿಂದ ಹತ್ತಾರು ಆರೋಗ್ಯ ಸಮಸ್ಯೆಗಳನ್ನು ಎದುರಿಸಬೇಕು. ಗಾಂಧಿನಗರದಲ್ಲಿ ಶುಚಿತ್ವಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕಾಗಿದೆ.

ಶಿವಪ್ರಸಾದ್, ಸಾರ್ವಜನಿಕ

ಗಾಂಧಿನಗರದ ಕಾಳಿದಾಸ ಮಾರ್ಗ ರಸ್ತೆಯಲ್ಲಿ ನೀರು ನಿಂತಿರುವುದು



ಬಸವನಗುಡಿ ರಸ್ತೆಯಲ್ಲಿ ಪಾದಚಾರಿ ಮಾರ್ಗದಲ್ಲಿ ಬಿದ್ದಿರುವ ಕೇಬಲ್‌ಗಳು

ಕೇಬಲ್‌ಗಳನ್ನು ತೆರವುಗೊಳಿಸಿ

ಬಸವನಗುಡಿ ರಸ್ತೆಯಲ್ಲಿರುವ ಹೋಟೆಲ್ ವಿಜಯಲಕ್ಷ್ಮಿ ಬಳಿಯಿದ್ದ ಮರವೊಂದು ಮಳೆಯಿಂದಾಗಿ ನೆಲಕ್ಕುರುಳಿದೆ. ಅದನ್ನು ಆಶ್ರಯಿಸಿದ್ದ ಕೇಬಲ್ ತಂತಿಗಳು ಪಾದಚಾರಿ ಮಾರ್ಗದಲ್ಲೇ ರಾಶಿ ಬಿದ್ದಿವೆ. ಇವುಗಳನ್ನು ತೆರವು ಮಾಡಲು ಇಲ್ಲಿನ ಮಳಿಗೆಯವರಾಗಲೀ ಹಾಗೂ ಪಾಲಿಕೆ ಸಿಬ್ಬಂದಿಯಾಗಲೀ ಮುಂದಾಗಿಲ್ಲ. ಇದರಿಂದ ಪಾದಚಾರಿಗಳಿಗೆ ಬಹಳ ಸಮಸ್ಯೆಯಾಗಿದೆ. ವಾಹನಗಳನ್ನು ನಿಲ್ಲಿಸಲೂ ಪ್ರಯಾಸವಾಗಿದೆ. ಈ ಕೇಬಲ್‌ಗಳನ್ನು ತೆರವು ಮಾಡಿ, ಪಾದಚಾರಿ ಮಾರ್ಗವನ್ನು ಸಂಚಾರ ಮುಕ್ತ ಮಾಡಬೇಕು. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಬೇಕು.

ಮಂಜುನಾಥ, ಸಾರ್ವಜನಿಕ

ಸಂಪಂಗಿರಾಮ ನಗರದ ರಸ್ತೆ ಮಧ್ಯೆಯಲ್ಲಿ ಗುಂಡಿ ಬಿದ್ದಿರುವುದು

ರಸ್ತೆ ಮಧ್ಯದ ಗುಂಡಿ ಮುಚ್ಚಿ

ಜಲಮಂಡಳಿಯ ಕಳಪೆ ಕಾಮಗಾರಿಯಿಂದಾಗಿ ಸಂಪಂಗಿರಾಮನಗರದ 10ನೇ ಅಡ್ಡರಸ್ತೆಯಲ್ಲಿ ಗುಂಡಿಗಳು ಕಾಣಿಸಿಕೊಂಡಿವೆ. ರಸ್ತೆಯ ಮಧ್ಯಭಾಗದಲ್ಲೇ ಇರುವ ಗುಂಡಿ ಬಲಿಗಾಗಿ ಕಾದು ಕುಳಿತಿದೆ. ಜನವಸತಿ ಪ್ರದೇಶದಲ್ಲೇ ಈ ದುಃಸ್ಥಿತಿಯನ್ನು ಎದುರಿಸಬೇಕಾಗಿದೆ.

ಈ ಸಮಸ್ಯೆ ಬಗ್ಗೆ ಹಲವು ಬಾರಿ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ರಾತ್ರಿ ವೇಳೆ ಈ ರಸ್ತೆಯಲ್ಲಿ ಸಂಚರಿಸುವವರಿಗೆ ಗುಂಡಿ ಇರುವ ಬಗ್ಗೆ ತಿಳಿಯುವುದೇ ಇಲ್ಲ. ಬಾಯ್ತೆರೆದುಕೊಂಡಿರುವ ಗುಂಡಿಯಿಂದ ಅನಾಹುತಗಳು ನಡೆಯುವ ಮುನ್ನವೇ ಎಚ್ಚೆತ್ತುಕೊಳ್ಳಬೇಕು. ಗುಂಡಿಯಿಂದ ಮುಕ್ತಿ ನೀಡಲು ಅಧಿಕಾರಿಗಳು ಕ್ರಮ ಕೈಗೊಳ್ಳಲಿ.

ಗಣೇಶ ಬಾಬು, ಸ್ಥಳೀಯ ನಿವಾಸಿ

ರಸ್ತೆಯಲ್ಲಿ ಅನುಪಯುಕ್ತ ವಸ್ತುಗಳು

ರಾಜಾಜಿನಗರದ 14ನೇ ಮುಖ್ಯರಸ್ತೆಯಲ್ಲಿ ಅನುಪಯುಕ್ತ ವಸ್ತುಗಳು ರಾಶಿಬಿದ್ದಿವೆ. ಈ ರಸ್ತೆಯಲ್ಲಿ ಜನರು ನಡೆದಾಡಲು ಜಾಗವೇ ಇಲ್ಲ. ಕೆಟ್ಟು ನಿಂತ ವಾಹನಗಳು, ಪೇಪರ್‌ಗಳಿಂದ ಇದು ಕಸದ ರಸ್ತೆಯಾಗಿ ಬದಲಾಗಿದೆ.

ಇದು ರಸ್ತೆ ಎಂದು ಹೇಳಲು ಫಲಕವೊಂದೇ ಸಾಕ್ಷಿಯಾಗಿ ಉಳಿದಿದೆ. ಸ್ಥಳೀಯರು ಬಹಳ ದಿನಗಳಿಂದ ಈ ಸಮಸ್ಯೆ ಎದುರಿಸುತ್ತಿದ್ದೇವೆ. ದಯವಿಟ್ಟು ಕಸವನ್ನು ತೆರವು ಮಾಡುವ ಮೂಲಕ ರಸ್ತೆಯನ್ನು ಸಂಚಾರಕ್ಕೆ ಯೋಗ್ಯವನ್ನಾಗಿ ಮಾಡಬೇಕು.

ವಿಜಯ್‌ಕುಮಾರ್, ಸಾರ್ವಜನಿಕ

ರಾಜಾಜಿನಗರದ 14ನೇ ಮುಖ್ಯರಸ್ತೆಯಲ್ಲಿ ಕಸದ ರಾಶಿ

ರಸ್ತೆಯಲ್ಲಿ ಉದ್ಭವಿಸಿದ ಕೊಳವೆ

ಅಯ್ಯಪ್ಪನಗರದ ಕೆಎಫ್‌ಸಿ ಮಳಿಗೆ ಬಳಿ ರಸ್ತೆಯಲ್ಲಿ ಕೊಳವೆ ತಲೆ ಎತ್ತಿದೆ. ಈ ಅವೈಜ್ಞಾನಿಕ ನಿರ್ಮಾಣದ ಹೊಣೆ ಪಾಲಿಕೆಯದ್ದೋ ಅಥವಾ ಜಲಮಂಡಳಿಯೋ ಗೊತ್ತಿಲ್ಲ. ವಾಹನಗಳು ಸಂಚರಿಸುವಾಗ ಆಯತಪ್ಪಿ ಬೀಳುವ ಸಾಧ್ಯತೆ ಇದೆ. ಕೊಳವೆ ಇರುವುದು ದೂರಕ್ಕೆ ಕಾಣುವುದಿಲ್ಲ. ಸಂಚಾರದ ವೇಳೆ ಕೊಳವೆಗೆ ಸಿಲುಕಿ ಜೀವಕ್ಕೆ ಕುತ್ತು ಉಂಟಾಗುವ ಅಪಾಯವೂ ಇದೆ. ರಸ್ತೆಯಲ್ಲಿರುವ ಕೊಳವೆ ಮುಚ್ಚಿ, ಗುಂಡಿಮುಕ್ತಗೊಳಿಸಬೇಕೆಂದು ವಿನಂತಿ.

ಕೋದಂಡರಾಮ, ಸಾರ್ವಜನಿಕ

ಅಯ್ಯಪ್ಪನಗರದ ಮುಖ್ಯರಸ್ತೆಯಲ್ಲಿರುವ ಕೊಳವೆ

ಮೊಬೈಲ್ ಕಳ್ಳತನ: ಬಂಧನ

ಬೆಂಗಳೂರು: ವಾಯು ವಿಹಾರ ಮಾಡುತ್ತಿದ್ದ ಮಹಿಳೆಯನ್ನು ಬೈಕ್‌ನಲ್ಲಿ ಹಿಂಬಾಲಿಸಿ ದುಬಾರಿ ಬೆಲೆಯ ಮೊಬೈಲ್ ಕದ್ದೊಯ್ದ ಆರೋಪಿಯನ್ನು ಕೊಡಿಗೆಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮೈಸೂರಿನ ಸೊಹೈಲ್ ಪಾಷಾ ಯಾನೆ ಸೊಹೈಲ್ (28) ಬಂಧಿತ. ಈತನಿಂದ ₹43 ಸಾವಿರ ಮೌಲ್ಯದ ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ. 'ಸಹಕಾರನಗರ ಎಫ್ ಬ್ಲಾಕ್ ನಿವಾಸಿಯಾದ ಮಹಿಳೆಯು 15ನೇ ಮುಖ್ಯ ರಸ್ತೆಯಲ್ಲಿ ಮಾರ್ಚ್ 31ರ ಮುಂಜಾನೆ ವಾಯುವಿಹಾರ ಮಾಡುತ್ತಿದ್ದಾಗ, ಬೈಕ್‌ನಲ್ಲಿ ಹೆಲ್ಮೆಟ್ ಧರಿಸಿಕೊಂಡು ಬಂದಿದ್ದ ಆರೋಪಿ ಮೊಬೈಲ್ ಕಸಿದು ಪರಾರಿಯಾಗಿದ್ದ.

'ಗ್ರಾಮೀಣ ಭಾರತದ ತಲ್ಲಣಗಳನ್ನು ಬಿಂಬಿಸಿ'

'ಡಾಕ್ಟರ್ ಹೆಂಡತಿ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಸಾಹಿತಿ ಮಿರ್ಜಾ ಬಷೀರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರಾಮೀಣ ಭಾರತದ ಕನಸುಗಳು ಮುರುಟಿ ಹೋಗುತ್ತಿರುವ ಈ ಸಮಯದಲ್ಲಿ ಅದರ ತಲ್ಲಣಗಳಿಗೆ ಲೇಖಕರು ಕನ್ನಡಿ ಹಿಡಿಯಬೇಕು' ಎಂದು ಸಾಹಿತಿ ಹಾಗೂ ವೈದ್ಯ ಡಾ. ಮಿರ್ಜಾ ಬಷೀರ್ ಅಭಿಪ್ರಾಯಪಟ್ಟರು.

'ಬಹುರೂಪಿ' ಪ್ರಕಾಶನ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸರೋಜಿನಿ ಪಡಸಲಗಿ ಅವರ 'ಡಾಕ್ಟರ್ ಹೆಂಡತಿ' ಕೃತಿಯನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

'ಗ್ರಾಮೀಣ ಭಾರತದಲ್ಲಿಯೇ ಸೇವೆ ಮಾಡಬೇಕೆಂದು ಆಯ್ಕೆ ಮಾಡಿಕೊಂಡು ಹೊರಟ ವೈದ್ಯರ ಅನುಭವ, ಹಾಗೆಯೇ ಅವರ ಕುಟುಂಬದ ಆತಂಕ, ತಲ್ಲಣಗಳು ಕೃತಿಯಲ್ಲಿವೆ' ಎಂದು ತಿಳಿಸಿದರು.

ಕೃತಿ ಕುರಿತು ಮಾತನಾಡಿದ ಲೇಖಕಿ ವಾಸಂತಿ ಪ್ರಭಾಕರ ನಾಯಕ್, 'ವೈದ್ಯ ವೃತ್ತಿ ವ್ಯಾಪಾರವಾಗಿರುವ ಇಂದಿನ ಸಂದರ್ಭದಲ್ಲಿ ಗ್ರಾಮೀಣ ಜನರ ಬದುಕು ಉಳಿಸಲು ಹೊರಟ ಈ ವೈದ್ಯ ಕುಟುಂಬದ ತಲ್ಲಣಗಳನ್ನು ಕಟ್ಟಿಕೊಡುವ ಈ ಪ್ರಯತ್ನ ಶ್ಲಾಘನೀಯ' ಎಂದು ಅಭಿಪ್ರಾಯಪಟ್ಟರು.

'ಆರೋಗ್ಯದ ಬೆಳಕಿನ ಕಿರಣಗಳು ಇಂದು ಎಲ್ಲರಿಗೂ ಸಿಗದ ಹತಾಶ ಪರಿಸ್ಥಿತಿ ಇದೆ. ಇಂತಹ ಸಮಯದಲ್ಲಿ ಈ ಕೃತಿ ಭರವಸೆ ಮೂಡಿಸುತ್ತದೆ' ಎಂದರು.

ಲೇಖಕಿ ಸರೋಜಿನಿ ಪಡಸಲಗಿ, 'ಇಲ್ಲಿ ನನ್ನ ಸಂಭ್ರಮ, ತಲ್ಲಣ ಎರಡೂ ಮಡುಗಟ್ಟಿವೆ' ಎಂದರು.

'ಬಹುರೂಪಿ' ಮುಖ್ಯಸ್ಥ ಜಿ.ಎನ್. ಮೋಹನ್, ವೈದ್ಯ ಡಾ.ಸುರೇಶ್ ಪಡಸಲಗಿ ಇದ್ದರು.

ಕಾರ್ಯಕ್ರಮದಲ್ಲಿ 'ಡಾಕ್ಟರ್ ಹೆಂಡತಿ' ಕೃತಿಯನ್ನು ಡಾ. ಮಿರ್ಜಾ ಬಷೀರ್ ಬಿಡುಗಡೆ ಮಾಡಿದರು. ಜಿ.ಎನ್. ಮೋಹನ್, ಸರೋಜಿನಿ ಪಡಸಲಗಿ ಮತ್ತು ವಾಸಂತಿ ಪ್ರಭಾಕರ ನಾಯಕ್ ಇದ್ದಾರೆ

ಕೃತಿ ವಿವರ
- ಕೃತಿ : ಡಾಕ್ಟರ್ ಹೆಂಡತಿ
- ಲೇಖಕರು : ಸರೋಜಿನಿ ಪಡಸಲಗಿ
- ಪುಟ : 144
- ಬೆಲೆ : ₹ 180
- ಪ್ರಕಾಶಕರು : ಬಹುರೂಪಿ

ವಿವಿಧೆಡೆ ವಿದ್ಯುತ್ ವ್ಯತ್ಯಯ ಇಂದಿನಿಂದ

ಬೆಂಗಳೂರು: ನಗರದ ವಿವಿಧೆಡೆ ಏ.25ರಿಂದ 29ರವರೆಗೆ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಏ.25ರಂದು ಜುನ್ನಸಂದ್ರ, 26ರಂದು ಅನುಗ್ರಹ ಲೇಔಟ್, ಕೋಡಿಚಿಕ್ಕನಹಳ್ಳಿ, ಬಿಳೇಕಹಳ್ಳಿ, 27ರಂದು ಬಿ.ಎನ್. ರಾಮಸ್ವಾಮಿ ಬಡಾವಣೆ, ಲಕ್ಷ್ಮಿ ಬಡಾವಣೆ, ಜಿ.ಬಿ. ಪಾಳ್ಯ, 28ರಂದು ಜಿ.ಬಿ. ಪಾಳ್ಯ, ಹೊಸೂರು ಸರ್ವಿಸ್ ರಸ್ತೆ, ಪಾಪಣ್ಣ ರೆಡ್ಡಿ ಬಡಾವಣೆ, 29ರಂದು ಸನ್ ಸಿಟಿ ಬಡಾವಣೆ, 30ರಂದು ವೀವರ್ಸ್ ಕಾಲೋನಿ ಸುತ್ತಮುತ್ತ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಕೃತಿ ಬಿಡುಗಡೆಗೆ ಅಡ್ಡಿ, ನಿಂದನೆ

ಕಲಬುರಗಿ: ಸಾಹಿತಿ ಮಲ್ಲಿಕಾರ್ಜುನ ಕಡಕೋಳ ಅವರ 'ಕಡಕೋಳ ನೆಲದ ನೆನಪುಗಳು' ಕೃತಿಯ ಬಿಡುಗಡೆಗೆ ಗುಂಪೊಂದು ಅಡ್ಡಿಪಡಿಸಿದ್ದು, ಮನ ಸೋಇಚ್ಛೆ ನಿಂದಿಸಿದ ಘಟನೆ ಶನಿವಾರ ಯಡ್ರಾಮಿ ತಾಲ್ಲೂಕಿನ ಕಡಕೋಳದಲ್ಲಿ ನಡೆದಿದೆ.

ಕಡಕೋಳ ಮಡಿವಾಳಪ್ಪನವ ಮಠದಲ್ಲಿ ಆಯೋಜಿಸಲಾಗಿದ್ದ ಮಡಿವಾಳಪ್ಪನವರ ದ್ವಿಶತಮಾನೋತ್ಸವ ಮತ್ತು ಮಠದ ಮಹಾದ್ವಾರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಕೃತಿ ಬಿಡುಗಡೆಗೊಳಿಸಲು ಉದ್ದೇಶಿಸಲಾಗಿತ್ತು.

'ಇನ್ನೇನು ಕೃತಿ ಬಿಡುಗಡೆಯಾಗಬೇಕು ಎನ್ನುವಷ್ಟರಲ್ಲಿ ಗುಂಪು ಕಟ್ಟಿಕೊಂಡ ಬಂದ ಕೆಲವರು ವೇದಿಕೆಯೇರಿ ಅಡ್ಡಿಪಡಿಸಿದರು. ಯಾವುದೇ ಕಾರಣಕ್ಕೂ ಕೃತಿ ಬಿಡುಗಡೆಯಾಗಬಾರದು ಎಂದು ಪಟ್ಟು ಹಿಡಿದರು. ಅಷ್ಟಕ್ಕೆ ಸುಮ್ಮನಾಗದ ಅವರು ಅತ್ಯಂತ ಕೆಟ್ಟ ಪದಗಳನ್ನು ಬಳಸಿ ನಿಂದಿಸಿದರು. ವೇದಿಕೆಯಿಂದ ಕೆಳಗಿಳಿಯುವಂತೆ ಎಳೆದಾಡಿದರು' ಎಂದು ಮಲ್ಲಿಕಾರ್ಜುನ ಕಡಕೋಳ 'ಪ್ರಜಾವಾಣಿ'ಗೆ ತಿಳಿಸಿದರು.

'ಕೃತಿಯಲ್ಲಿ ಯಾವ ಪುಟದಲ್ಲಿ ಏನು ತಪ್ಪಾಗಿದೆ ಎಂಬುದನ್ನು ತಿಳಿಸಿ. ಸಂವಾದದ ಮೂಲಕ ಬಗೆಹರಿಸಿಕೊಳ್ಳೋಣ ಎಂದು ಬೇಡಿಕೊಂಡರೂ ಗುಂಪಿಗೆ ಕೇಳುವ ಮನಸ್ಥಿತಿ ಇರಲಿಲ್ಲ. ನನ್ನೂರಲ್ಲಿ ಕೃತಿ ಬಿಡುಗಡೆಯಾಗಬೇಕೆಂದು ತುಂಬಾ ಆಸೆಪಟ್ಟಿದ್ದೆ. ಆದರೆ, ಕಾರ್ಯಕ್ರಮವನ್ನೇ ರದ್ದುಪಡಿಸಬೇಕಾಯಿತು. ತುಂಬಾ ನೋವಾಯಿತು' ಎಂದು ಅವರು ನೊಂದು ನುಡಿದರು.

ಅವರು ತಮಗಾದ ನೋವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದು, ಘಟನೆ ಕುರಿತು ಜನರು ತೀವ್ರವಾಗಿ ಖಂಡಿಸಿದ್ದಾರೆ. ಇಂಥ ಘಟನೆ ನಡೆದಿರುವುದು ಖೇದಕರ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಅಹಿಂಸಾ' ಮನವಿ: ಮುಖ್ಯ ಕಾರ್ಯದರ್ಶಿಗೆ ಟಿಪ್ಪಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬಡ್ತಿ ಮೀಸಲಾತಿ ಸಂಬಂಧ 'ಅಹಿಂಸಾ'(ಅಲ್ಪಸಂಖ್ಯಾತ, ಹಿಂದುಳಿದ, ಸಾಮಾನ್ಯ) ನೌಕರರ ಒಕ್ಕೂಟದ ಅಧ್ಯಕ್ಷ ಎಂ. ನಾಗರಾಜ್ ಸಲ್ಲಿಸಿದ್ದ ಮನವಿ ಕುರಿತು ಮುಖ್ಯಮಂತ್ರಿ ಸೂಚನೆಯಂತೆ ಪರಿಶೀಲಿಸಿ ಕ್ರಮ ಕೈಗೊಳ್ಳಲು ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ ಪ್ರಸಾದ್ ಟಿಪ್ಪಣಿ ಕಳುಹಿಸಿದ್ದಾರೆ.

ಬಡ್ತಿ ಮೀಸಲಾತಿ ಕುರಿತು ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪುಗಳನ್ನು ಮನವಿಯಲ್ಲಿ ಉಲ್ಲೇಖಿಸಿದ್ದ ನಾಗರಾಜ್, ರಾಜ್ಯದಲ್ಲಿ ಹಾಲಿ ಇರುವ ಬಡ್ತಿ ಮೀಸಲಾತಿ ನೀತಿಗಳ ಪರಿಷ್ಕರಣೆಗೆ ಒತ್ತಾಯಿದ್ದರು. ಮನವಿಯಲ್ಲಿದ್ದ ಅಂಶಗಳನ್ನು ಉಲ್ಲೇಖಿಸಲಾಗಿದೆ.

ಬಡ್ತಿ ಮೀಸಲಾತಿ ನಿಗದಿಪಡಿಸಲು ಸದ್ಯ ಇರುವ ವೃಂದವಾರು ಎಸ್‌ಸಿ, ಎಸ್‌ಟಿ ಪ್ರಾತಿನಿಧ್ಯ ನಿರ್ಣಯಿಸುವ ಅರ್ಹ ದತ್ತಾಂಶ ಸಂಗ್ರಹಿಸಬೇಕು. ಎಸ್‌ಸಿ, ಎಸ್‌ಟಿ ಪ್ರಾತಿನಿಧ್ಯವನ್ನು ಮೀಸಲಾತಿ ಪ್ರಮಾಣ ತಲುಪುವವರೆಗೆ ಜಾರಿಗೊಳಿಸಬೇಕು. ಬಳಿಕ ರೋಸ್ಟರ್ ಪದ್ಧತಿ ನಿಲ್ಲಿಸಿ, 'ರಿಪ್ಲೇಸ್‌ಮೆಂಟ್ ಥಿಯರಿ' ಅನುಸರಿಸಬೇಕು ಎಂದು ನಾಗರಾಜ್ ಮನವಿ ಸಲ್ಲಿಸಿದ್ದರು.

'ಸಾಮಾನ್ಯ ವರ್ಗದ ನೌಕರರಿಂದ ಹುದ್ದೆ ತೆರವಾದರೆ ಸಾಮಾನ್ಯ ವರ್ಗದ ನೌಕರರಿಗೆ ಪದೋನ್ನತಿ ನೀಡಿ ಭರ್ತಿ ಮಾಡಬೇಕು. ಎಸ್‌ಸಿ, ಎಸ್‌ಟಿ ವರ್ಗದ ನೌಕರರಿಗೂ ಇದೇ ಮಾದರಿ ಅನುಸರಿಸಬೇಕು. ಹಿಂಬಾಕಿ ಮೀಸಲಾತಿ ಹುದ್ದೆಗಳ ಸಂಖ್ಯೆ ಗುರುತಿಸಿ ಶೇಕಡಾವಾರು ಪ್ರಾತಿನಿಧ್ಯಕ್ಕೆ ಬಡ್ತಿ ಸೀಮಿತಗೊಳಿಸಬೇಕು. ಯಾವುದೇ ಸಂದರ್ಭದಲ್ಲೂ ಮೀಸಲಾತಿ ಪ್ರಮಾಣ ಮೀರದಂತೆ ನೋಡಿಕೊಳ್ಳಬೇಕು. ಎಲ್ಲ ಇಲಾಖೆಗಳಲ್ಲಿ ಕೆಳಮಟ್ಟದಿಂದ ಅತ್ಯುನ್ನತ ಹುದ್ದೆಯ ವರೆಗೂ ಬಡ್ತಿಯಲ್ಲಿ ವರ್ಗವಾರು ಮೀಸಲಾತಿ ಪ್ರಮಾಣ ಮೀರದಂತೆ ನೋಡಿಕೊಂಡು ಸಾಮಾನ್ಯ ವರ್ಗ ಮತ್ತು ಎಸ್‌ಸಿ, ಎಸ್‌ಟಿ ವರ್ಗಗಳ ಮಧ್ಯೆ ಸಮತೋಲನ ಕಾಯ್ದುಕೊಳ್ಳಬೇಕು ಎಂದು ಮನವಿಯಲ್ಲಿದ್ದ ಅಂಶಗಳನ್ನೂ ಟಿಪ್ಪಣಿಯಲ್ಲಿ ಉಲ್ಲೇಖಿಸಲಾಗಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

BUSINESS

Business to Business

Finance

"URGENT LOANS Avail @ 3.5% per Annum Personal, Business, take over agriculture projects all type loan in just 5 days MONEY DUNIYA. Call/ WhatsApp:: 8826494700."

WANTED INVESTOR 12Cr, 16 Flats Buy Back After 48 Months 10Cr with Flat: 8892501007/ 9606701007

Business Offers

Finance

NRI'S INVESTMENT And Finance Available On Low Interest Against Properties,Land & Building,Sites,Flats, Converted& Agriculture Lands Call: 7411265189

EDUCATIONAL

Admission

DIRECT FINAL: LLB (Can Practice) B.Tech/M.Tech Diploma, MBA/MSc, BCA, BBA, BSc, B.Com, D.Pharm/ B.Pharm, PU/ SSLC. Recognised Govt /UGC. Asha Academy, Bangalore. Ph: 9448460103/ 08026699786

PERSONAL

Change of Name

I, BINA SHARMA Residing at B18-582 BDA Flats Austin town Layout near Makka Masjid Shanthinagar Neelasandra, Viveknagar Post Bengaluru- 560047 have changed my name to BINA JAIN vide affidavit dated 06.04.2022, before notary S.I. Balaguru, Bengaluru. Henceforth I shall be called BINA JAIN only.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information contact:
9880856233 /9845114560
9886213331

ಸಪ್ನ ಬುಕ್ ಹೌಸ್‌ನಲ್ಲಿ ಕಾರ್ಯಕ್ರಮ ಆಯೋಜನೆ

'ಪುಸ್ತಕ ಲೋಕ'ದಲ್ಲಿ ಓದುಗರ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಪುಸ್ತಕ ದಿನವಾದ ಶನಿವಾರ ಗಾಂಧಿನಗರದ 'ಸಪ್ನ ಬುಕ್ ಹೌಸ್'ನಲ್ಲಿ ಸಾಹಿತಿಗಳು ಮತ್ತು ಸಾಹಿತ್ಯಾಸ್ತಕರ ದಂಡೇ ಸೇರಿತ್ತು. ಪುಸ್ತಕಗಳ ಜತೆಗಿನ ಪ್ರೀತಿ, ಮಧುರ ಅನುಭವಗಳನ್ನು ಅವರು ಹಂಚಿಕೊಂಡರು. ಕವನಗಳನ್ನು ಓದಿ ಸಂಭ್ರಮಪಟ್ಟರು.

ಬದಲಾಗುತ್ತಿರುವ ಪುಸ್ತಕೋದ್ಯಮ, ಓದುಗರ ಅಭಿರುಚಿ ಸೇರಿದಂತೆ ಜಗತ್ತಿನಾದ್ಯಂತ ಇರುವ ಪುಸ್ತಕ ಲೋಕದ ವಿವಿಧ ಆಯಾಮಗಳನ್ನು ನಗರದ ಸಪ್ನ ಬುಕ್ ಹೌಸ್‌ನಲ್ಲಿ ಆಯೋಜಿಸಿದ್ದ 'ಪುಸ್ತಕ ಲೋಕ' ಕಾರ್ಯಕ್ರಮ ತೆರೆದಿಟ್ಟಿತು. ನಿರ್ದೇಶಕ ಟಿ.ಎನ್. ಸೀತಾರಾಮ್ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, 'ಪುಸ್ತಕಗಳು ಸಹ ಡಿಜಿಟಲೀಕರಣವಾಗುತ್ತಿವೆ. ಬದಲಾವಣೆಗೆ ತಕ್ಕಂತೆ ಹೊಂದುಕೊಳ್ಳುವುದು ಅನಿವಾರ್ಯ. ತಂತ್ರಜ್ಞಾನ ಬದಲಾದರೂ ಪುಸ್ತಕಗಳು ಈ ಕಾಲದ ಅಗತ್ಯ. ಉತ್ತಮ ಗ್ರಂಥಾಲಯಗಳಿದ್ದರೆ ಅದುವೇ ಶ್ರೀಮಂತ ದೇಶ' ಎಂದು ಪ್ರತಿಪಾದಿಸಿದರು.

'ನಾವು ಪುಸ್ತಕ ಮುಟ್ಟದ ಅಥವಾ ಓದದ ದಿನವೇ ಇಲ್ಲ. ಪತ್ರಿಕೆಗಳನ್ನು ಓದುವುದು ಸಹ ಸಾಹಿತ್ಯದ ಜತೆಗಿನ ಸಾಂಗತ್ಯವನ್ನು ಬೆಳೆಸುತ್ತದೆ' ಎಂದರು.

'ನಮ್ಮ ಊರಿನಲ್ಲಿ ಗ್ರಂಥಾಲಯ ಸ್ಥಾಪಿಸಲು ಮುಂದಾದಾಗ ಕೆಲವರು ದೇವಸ್ಥಾನ ನಿರ್ಮಿಸುವಂತೆ ಒತ್ತಾಯಿಸಿದ್ದರು. ಜನರನ್ನು ಓದಿಗೆ ಹಚ್ಚಬೇಕು ಎನ್ನುವುದು ಮುಖ್ಯ ಆಶಯವಾಗಿತ್ತು. ಈಗ ನಮ್ಮೂರಿನ ಗ್ರಂಥಾಲಯದಲ್ಲಿ 10 ಸಾವಿರ ಪುಸ್ತಕಗಳಿವೆ. ಹಳ್ಳಿಗಳಲ್ಲಿ ಏನೂ ಇಲ್ಲದಿದ್ದರೂ ಪುಟ್ಟ ಗ್ರಂಥಾಲಯ ಇರಬೇಕು' ಎಂದು ಅಭಿಪ್ರಾಯಪಟ್ಟರು.

'ವಿಶ್ವವಾಣಿ' ಸಂಪಾದಕ ವಿಶ್ವೇಶ್ವರ ಭಟ್, 'ಕನ್ನಡ ಪುಸ್ತಕೋದ್ಯಮಕ್ಕೆ ಈಗ ಸುವರ್ಣ ಯುಗ. ಕನ್ನಡ ಲೇಖಕರು ಸಂಭ್ರಮಪಡುವಷ್ಟು ದೊಡ್ಡ ಓದುಗ ಬಳಗವೇ ಇದೆ. ಕನ್ನಡ ಲೋಕದಲ್ಲಿ ಪುಸ್ತಕಗಳಿಗೆ ಉತ್ತಮ ಮಾರುಕಟ್ಟೆ ಇದೆ' ಎಂದರು.

ಕಾರ್ಯಕ್ರಮದಲ್ಲಿ ಕವಯತ್ರಿ ನಂದಿನಿ ಹೆದ್ದುರ್ಗ, ಕವಿ ಬಿ.ಆರ್. ಲಕ್ಷ್ಮಣರಾವ್, ಟಿ.ಎನ್. ಸೀತಾರಾಮ್, ಕನ್ನಡಪ್ರಭ ಪುರವಣಿ ಸಂಪಾದಕ ಜೋಗಿ, ವಿಶ್ವೇಶ್ವರ ಭಟ್, ನಾಗತಿಹಳ್ಳಿ ಚಂದ್ರಶೇಖರ್ ಹಾಗೂ ನಟಿ ಆರೋಹಿ ನಾರಾಯಣ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಸಂಚಾರ ದಂತ ವಾಹನ, ಎಸ್. ರಾಮಚಂದ್ರ ಪ್ರತಿಮೆ ಲೇಸರ್ ಸಂಶೋಧನಾ ಕೇಂದ್ರ ಹಾಗೂ ಪ್ರಯೋಗಾಲಯಗಳ ಉದ್ಘಾಟನೆ: ಅತಿಥಿಗಳು–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಕೆ.ಸುಧಾಕರ್, ಅಧ್ಯಕ್ಷತೆ–ಶಾಸಕ ಜಮೀರ್ ಅಹಮದ್ ಖಾನ್, ಆಯೋಜನೆ ಮತ್ತು ಸ್ಥಳ–ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಳಿಗ್ಗೆ 10

ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿ ಅನಾವರಣ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸ್ಥಳ–ವಿಭಾಗೀಯ ರೈಲ್ವೆ ವ್ಯವಸ್ಥಾಪಕರ ಕಚೇರಿ ಆವರಣ, ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ, ಮಧ್ಯಾಹ್ನ 12

ಗೊ.ರು.ಚನ್ನಬಸಪ್ಪ ಅವರು ಕನ್ನಡಕ್ಕೆ ಅನುವಾದಿಸಿರುವ 'ಭಯೋತ್ಪಾದನೆ ಮತ್ತು ಭಯೋತ್ಪಾದಕ ಬೆದರಿಕೆಗೆ ಪ್ರತಿರೋಧ' ಪುಸ್ತಕ ಬಿಡುಗಡೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೃತಿ ಪರಿಚಯ–ಡಿ.ವಿ. ಗುರುಪ್ರಸಾದ್, ಅಧ್ಯಕ್ಷತೆ–ಸಿ.ವೀರಣ್ಣ, ಆಯೋಜನೆ–ಕರ್ನಾಟಕ ಸಾಹಿತ್ಯ ಪರಿಷತ್ತು, ಸ್ಥಳ–ಕೃಷ್ಣಾ, ಕುಮಾರಕೃಪಾ ರಸ್ತೆ, ಸಂಜೆ 4

ಜಯತೀರ್ಥ ಮೇವುಂಡಿ

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಹಿಂದೂಸ್ತಾನಿ ಸಂಗೀತ ಕಾರ್ಯಕ್ರಮ–ಜಯತೀರ್ಥ ಮೇವುಂಡಿ, ವ್ಯಾಸಮೂರ್ತಿ ಕಟ್ಟಿ, ಓಜಸ್ ಅಧಿಯಾ, ಆಯೋಜನೆ–ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ–ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 5ರಿಂದ

'ಹರಿದಾಸ ಹಬ್ಬ'ದ ಉದ್ಘಾಟನೆ: ಅಧ್ಯಕ್ಷತೆ–ವಿದ್ಯಾಶ್ರೀಶತೀರ್ಥ ಸ್ವಾಮೀಜಿ, ಅತಿಥಿ–ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ಪ್ರಸನ್ನ ವೆಂಕಟ ಪುರಸ್ಕಾರ–ಜಯಲಕ್ಷ್ಮೀ ಮಂಗಳಮೂರ್ತಿ, ಆಯೋಜನೆ–ಹರಿದಾಸ ಸಂಪದ ಟ್ರಸ್ಟ್, ಸ್ಥಳ–ಬೆಂಗಳೂರು ಗಾಯನ ಸಮಾಜ, ಸಂಜೆ 5

ನಳಿನ್ ಕುಮಾರ್ ಕಟೀಲ್ ಅವರು ರಾಜ್‌ಕುಮಾರ್ ಸ್ಮಾರಕಕ್ಕೆ ತೆರಳಿ ಭಾನುವಾರ ಗೌರವ ಅರ್ಪಿಸಿದರು. ಸಚಿವ ಕೆ.ಗೋಪಾಲಯ್ಯ ಇದ್ದಾರೆ (ಎಡಚಿತ್ರ). ಕಮಲಾನಗರದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಎಸ್‌ನಾರಾಯಣ್ ಮಾತನಾಡಿದರು. ಎಂ.ಶಿವರಾಜು ಇದ್ದಾರೆ

ವಿವಿಧೆಡೆ ರಕ್ತದಾನ, ನೇತ್ರದಾನ ಜಾಗೃತಿ ಶಿಬಿರ • ಕೆಲವೆಡೆ ರಾಜ್ ರಥೋತ್ಸವ

ವರನಟನ ಜನ್ಮದಿನ: ಅಭಿಮಾನಿಗಳ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರನಟ ದಿವಂಗತ ಡಾ.ರಾಜ್ ಕುಮಾರ್ ಅವರ 94ನೇ ಜನ್ಮದಿನವನ್ನು ಅಭಿಮಾನಿಗಳು ಭಾನುವಾರ ಸಡಗರದಿಂದ ಆಚರಿಸಿದರು. ಅವರ ಪ್ರತಿಮೆಗಳಿಗೆ ಹೂವಿನ ಹಾರ ಹಾಕಿ, ಕೇಕ್ ಕತ್ತರಿಸಿ ಸಂಭ್ರಮಿಸಿದರು. ಜನ್ಮದಿನದ ಅಂಗವಾಗಿ ನಗರದ ವಿವಿಧೆಡೆ ರಕ್ತದಾನ ಮತ್ತು ನೇತ್ರದಾನ ಜಾಗೃತಿ ಶಿಬಿರಗಳನ್ನು ಹಮ್ಮಿಕೊಳ್ಳಲಾಯಿತು.

ಕಮಲನಗರ ಇಂದಿರಾ ಹೆಲ್ತ್ ಕೇರ್‌ನಲ್ಲಿ ಮಹದೇವಪ್ಪ ಪ್ರತಿಷ್ಠಾನ ಮತ್ತು ಅಕ್ಷಯ ಟ್ರಸ್ಟ್, ವಿಜಯ ನೇತ್ರಾಲಯ, ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆಯ ಸಹಯೋಗದಲ್ಲಿ ಕಣ್ಣಿನ ತಪಾಸಣೆ ಹಾಗೂ ಶಸ್ತ್ರಚಿಕಿತ್ಸಾ ಶಿಬಿರ ಆಯೋಜಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಚಲನಚಿತ್ರ ನಿರ್ದೇಶಕ ಎಸ್. ನಾರಾಯಣ್, 'ರಾಜ್ ಕುಮಾರ್ ನಟಿಸಿದ ಪ್ರಥಮ ಚಲನಚಿತ್ರ ಬೇಡರ ಕಣಪ್ಪ. ಚಿತ್ರದ ಸಾರದಂತೆ ಸಾವಿನ ನಂತರವೂ ನೇತ್ರದಾನ ಮಾಡುವ ಮೂಲಕ ಅವರು ಅಂಧರ ಬಾಳಿಗೆ ಬೆಳಕಾದರು. ನೇತ್ರದಾನದ ಮಹತ್ವ ಬಗ್ಗೆ ಅರಿವು ಮೂಡಿಸಿದರು' ಎಂದು ಸ್ಮರಿಸಿದರು. ಸ್ಥಳೀಯ ಮುಖಂಡ ಎಂ.ಶಿವರಾಜು, ಮೋಹನ್ ಕುಮಾರ್ ಮತ್ತು ವೈದ್ಯರಾದ ರಾಘವೇಂದ್ರ, ರಾಮಕೃಷ್ಣ ಭಾಗವಹಿಸಿದರು.

ಮಲ್ಲೇಶ್ವರದ 18ನೇ ಅಡ್ಡರಸ್ತೆ ಬಳಿಯ ಗೋಕಾಕ್ ಚಳವಳಿ ವೃತ್ತ ಮತ್ತು ಸುಬ್ರಹ್ಮಣ್ಯ ನಗರದ ಸಂಗೊಳ್ಳಿ ರಾಯಣ್ಣ ಉದ್ಯಾನದಲ್ಲಿ ರಾಜಕುಮಾರ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ, ಕೇಕ್ ಕತ್ತರಿಸಲಾಯಿತು. ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಭಾಗವಹಿಸಿದರು.

ರಥೋತ್ಸವ: ಅಖಿಲ ಕರ್ನಾಟಕ ಡಾ. ರಾಜ್ ಕುಮಾರ್ ಅಭಿಮಾನಿ ಸಂಘಗಳ ಒಕ್ಕೂಟದ ವತಿಯಿಂದ ಡಾ.ರಾಜ್ ಕುಮಾರ್ ರಥೋತ್ಸವ ಏರ್ಪಡಿಸಲಾಯಿತು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ರಥೋತ್ಸವಕ್ಕೆ ಚಾಲನೆ ನೀಡಿದರು. ಒಕ್ಕೂಟದ ಗೌರವಾಧ್ಯಕ್ಷ ಎನ್.ಆರ್. ರಮೇಶ್ ಭಾಗವಹಿಸಿದ್ದರು.

ಕಂಠೀರವ ಸ್ಟುಡಿಯೋದ ಡಾ.ರಾಜ್‌ಕುಮಾರ್ ಸ್ಮಾರಕಕ್ಕೂ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸಚಿವರಾದ ಮುನಿರತ್ನ, ಗೋಪಾಲಯ್ಯ ಸಂಸದರಾದ ಮುನಿಸ್ವಾಮಿ, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಸಿದ್ಧರಾಜು, ಬೆಂಗಳೂರು ಕೇಂದ್ರ ಜಿಲ್ಲಾ ಅಧ್ಯಕ್ಷರಾದ ಮಂಜುನಾಥ್, ಒಬಿಸಿ ಮೋರ್ಚಾ ಅಧ್ಯಕ್ಷರಾದ ನೆ.ಲ.ನರೇಂದ್ರಬಾಬು ಭೇಟಿ ನೀಡಿ ಗೌರವ ಸಮರ್ಪಿಸಿದರು.

ಬಿಬಿಎಂಪಿ ನೌಕರರ ಕನ್ನಡ ಸಂಘದ ವತಿಯಿಂದ ರಾಜ್ ಕುಮಾರ್ ಅವರ ಹುಟ್ಟುಹಬ್ಬವನ್ನು ಸರಳವಾಗಿ ಆಚರಿಸಲಾಯಿತು.

ಡಾ.ರಾಜ್ ನೆನಪಲ್ಲಿ ರಥ ಎಳೆದ ಅಭಿಮಾನಿಗಳು

ಬೆಂಗಳೂರು: ನಟ ಸಾರ್ವಭೌಮ, ವರನಟ ಡಾ.ರಾಜ್‌ಕುಮಾರ್ ಅವರ 94ನೇ ಜನ್ಮದಿನ ನಿಮಿತ್ತ ಭಾನುವಾರ ಡಾ.ರಾಜ್ ಕುಟುಂಬದ ಸದಸ್ಯರು ನಗರದ ಕಂಠೀರವ ಸ್ಟುಡಿಯೊದಲ್ಲಿರುವ ಡಾ.ರಾಜ್ ಸಮಾಧಿಗೆ ಪೂಜೆ ಸಲ್ಲಿಸಿ ಗೌರವ ಅರ್ಪಿಸಿದರು.

ಕಂಠೀರವ ಸ್ಟುಡಿಯೊದ ಮುಂಭಾಗ ಅಭಿಮಾನಿಗಳು ಡಾ.ರಾಜ್ ಅವರು ಬಾಲಕ ಪುನೀತ್ ಅವರನ್ನು ಎತ್ತಿ ಕೊಂಡಿರುವ ಭಾವಚಿತ್ರದ ಕಟೌಟ್ ಹಾಕಿದ್ದರು.

ಹಂಸ ಮಾದರಿಯ ಪಲ್ಲಕ್ಕಿಯನ್ನು ಹೂವಿನಿಂದ ಅಲಂಕರಿಸಿ ಡಾ.ರಾಜ್‌ಕುಮಾರ್ ಭಾವಚಿತ್ರದ ಮೆರವಣಿಗೆ ಮಾಡಿದರು. ಅಲಂಕೃತ ಬೆಳ್ಳಿರಥದಲ್ಲಿ ಡಾ.ರಾಜ್ ಪುತ್ಥಳಿ ಇಟ್ಟು ಅಭಿಮಾನಿಗಳು ರಥ ಎಳೆದರು. ರಥದ ಮೆರವಣಿಗೆ ಲಗ್ಗೆರೆ ಸೇತುವೆವರೆಗೆ ತೆರಳಿ ವಾಪಸಾಯಿತು. ಸಮಾಧಿ ಬಳಿ ಅಭಿಮಾನಿಗಳಿಗೆ ಅನ್ನಪ್ರಸಾದ ವಿತರಿಸಲಾಯಿತು.

'ಕೋವಿಡ್‌ನಿಂದಾಗಿ ಮೂರು ವರ್ಷ ಅಣ್ಣಾವ್ರ ಹುಟ್ಟುಹಬ್ಬ ಆಚರಿಸಲು ಆಗಿರಲಿಲ್ಲ. ರಥೋತ್ಸವಕ್ಕೆ 6 ತಿಂಗಳಿಂದ ಸಿದ್ಧತೆ ಆಗಿತ್ತು. ಕೋವಿಡ್ ಆತಂಕ ಕಡಿಮೆ ಯಾಗಿದ್ದು, ಈಗ ಅದ್ದೂರಿಯಾಗಿಯೇ ಜನ್ಮದಿನ ಆಚರಿಸಿದ್ದೇವೆ' ಎಂದು ಅಭಿಮಾನಿಗಳು ಹೇಳಿದರು.

ಯುವ ರಾಜ್‌ಕುಮಾರ್ ಅವರು ರಾಜ್ ರಥದಲ್ಲಿ ಪುತ್ಥಳಿಗೆ ಪೂಜೆ ಸಲ್ಲಿಸಿದರು. ರಾಜ್ ಪುತ್ರ ರಾಘವೇಂದ್ರ ರಾಜ್‌ಕುಮಾರ್, ಸಾಹಿತಿ ಬರಗೂರು ರಾಮಚಂದ್ರಪ್ಪ ಸೇರಿದಂತೆ ಚಿತ್ರರಂಗದ ಗಣ್ಯರು ಸಮಾಧಿಗೆ ಪೂಜೆ ಸಲ್ಲಿಸುವ ಸಂದರ್ಭ ಇದ್ದರು.

ಡಾ.ರಾಜ್ ಹಾಗೂ ಪುನೀತ್ ರಾಜ್‌ಕುಮಾರ್ ನೆನಪಿಗೆ ಅಭಿಮಾನಿಗಳೇ ರೂಪಿಸಿದ 'ಶಕ್ತಿ ನಕ್ಷತ್ರ' ಪುಸ್ತಕವನ್ನು ರಾಘವೇಂದ್ರ ರಾಜ್‌ಕುಮಾರ್ ಬಿಡುಗಡೆ ಮಾಡಿದರು.

'ಅಪ್ಪಾಜಿ ಅವರ ಆದರ್ಶವನ್ನು ಸ್ಮರಿಸಬೇಕು. ಆ ಬದುಕು, ದಾನದ ಮೌಲ್ಯಗಳೇ ನಮ್ಮನ್ನು, ಅಭಿ ಮಾನಿಗಳನ್ನು ಒಂದಾಗಿಸಿ ಮುನ್ನಡೆಸಿದೆ. ಈ ಬಾಂಧವ್ಯ ನಿರಂತರವಾದುದು' ಎಂದು ರಾಘವೇಂದ್ರ ರಾಜ್‌ಕುಮಾರ್ ಹೇಳಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಾಂಗ್ರೆಸ್ ಮುಖಂಡರಾದ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಸೇರಿ ಹಲವು ಪ್ರಮುಖರು ಸಾಮಾಜಿಕ ಜಾಲತಾಣಗಳಲ್ಲಿ ರಾಜ್ ಅವರನ್ನು ಸ್ಮರಿಸಿದ್ದಾರೆ.

ಕನ್ನಡದಲ್ಲೇ ಗ್ರಾಹಕ ಸೇವೆಗೆ ಕನ್ನಡಿಗರ ಹಕ್ಕೊತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಅಭಿವೃದ್ಧಿ ಪ್ರಾಧಿಕಾರವು ದಿವಂಗತ ರಾಜ್ ಕುಮಾರ್ ಹುಟ್ಟುಹಬ್ಬವನ್ನು 'ಕನ್ನಡ ಅಭಿಮಾನ ದಿನ'ವನ್ನಾಗಿ ಆಚರಿಸಲು ನೀಡಿದ್ದ ಕರೆಗೆ ಕನ್ನಡಿಗರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಈ ದಿನಾ ಚರಣೆ ಅಂಗವಾಗಿ ಗ್ರಾಹಕ ಸೇವೆಯನ್ನು ಕನ್ನಡದಲ್ಲೇ ಪಡೆಯಲು ಟ್ವಿಟರ್‌ನಲ್ಲಿ ಹಮ್ಮಿಕೊಂಡ ಅಭಿಯಾನಕ್ಕೂ ಭಾರಿ ಬೆಂಬಲ ವ್ಯಕ್ತವಾಯಿತು.

ಗ್ರಾಹಕ ಸೇವೆಯನ್ನು ಕನ್ನಡದಲ್ಲೇ ನೀಡುವುದರ ಮಹತ್ವವನ್ನು ವಿವರಿಸಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವು #ಕನ್ನಡ_ಅಭಿಮಾನಿ_ದಿನ ಹಾಗೂ #ಕನ್ನಡದಲ್ಲಿ_ಗ್ರಾಹಕ_ಸೇವೆ ಹ್ಯಾಷ್‌ಟ್ಯಾಗ್ ಬಳಸಿ ಸರಣಿ ಟ್ವೀಟ್‌ಗಳನ್ನು ಮಾಡಿತು. ಪ್ರಾಧಿಕಾರದ ಈ ಕರೆಗೆ ಓಗೊಟ್ಟ ಕನ್ನಡ ಹೋರಾಟಗಾರರು ರಾಜ್ಯಾದ್ಯಂತ ಮಾಲ್‌ಗಳು, ಕಂಪನಿಗಳು, ವಾಣಿಜ್ಯ ಮಳಿಗೆಗಳು, ಸೇರಿದಂತೆ ಹಲವು ವ್ಯಾಪಾರಿ ಅಂಗಡಿಗಳಿಗೆ ತೆರಳಿ ಕನ್ನಡಕ್ಕೆ ಆದ್ಯತೆ ನೀಡುವಂತೆ ಹಕ್ಕೊತ್ತಾಯ ಮಂಡಿಸಿದರು.

'ಕರ್ನಾಟಕದಲ್ಲಿ ಕನ್ನಡ ಆಯ್ಕೆಯಲ್ಲ ಕಡ್ಡಾಯ. ಕನ್ನಡಿಗರಿಗೆ ಕನ್ನಡದಲ್ಲಿ ಸೇವೆ ನೀಡಿ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಸ್ಪಷ್ಟ ಸಂದೇಶ ಸಾರಿತು. ಕೈಪಿಡಿಗಳು, ಸುರಕ್ಷತಾ ಮಾರ್ಗಸೂಚಿಗಳು ಗ್ರಾಹಕರ ಭಾಷೆಯಲ್ಲೇ ಲಭ್ಯವಿರಬೇಕು. ಭಾರತೀಯ ಅಂಚೆ ಗ್ರಾಹಕ ಸೇವೆಗಳನ್ನು ಎಲ್ಲಾ ಭಾರತೀಯ ಭಾಷೆಗಳಲ್ಲಿ ಒದಗಿಸಬೇಕು ಎಂದು ಪ್ರಾಧಿಕಾರವು ಒತ್ತಾಯಿಸಿತು.

ಅಂಗಡಿ ಮುಂಗಟ್ಟಿನ ನಾಮಫಲಕದಲ್ಲಿ ಕನ್ನಡ ಪ್ರಧಾನವಾಗಿರಲಿ ಎಂದು ವ್ಯಾಪಾರಸ್ಥರನ್ನು ಪ್ರಾಧಿಕಾರವು ಮನವಿ ಮಾಡಿತು. ಇದನ್ನು ಅನುಸರಿಸದ ಅಂಗಡಿ ಮಾಲೀಕರ ವಿರುದ್ಧ ಕ್ರಮಕೈಗೊಳ್ಳುವಂತೆ ಬಿಬಿಎಂಪಿಗೆ ಸೂಚಿಸಿತು.

ಕನ್ನಡದಲ್ಲಿ ಸೇವೆ ನೀಡದ ಕೆಲವು ಆಸ್ಪತ್ರೆಗಳ ಹೆಸರು ಟ್ಯಾಗ್ ಮಾಡಿದ ಪ್ರಾಧಿಕಾರವು, 'ರೋಗಿಗಳಿಗೆ ನೀವು ದೈವ ಸಮಾನರು. ಅವರಿಗೆ ನೀಡುವ ಚಿಕಿತ್ಸೆ, ಔಷಧಿ ವಿವರಣೆಯನ್ನ ಕನ್ನಡದಲ್ಲೇ ಕೊಡಿ. ಅವರೊಂದಿಗೆ ಕನ್ನಡದಲ್ಲಿ ಮಾತನಾಡಿ. ಕನ್ನಡಾಭಿಮಾನದ ಮೂಲಕ ಇತರರಿಗೆ ಮಾದರಿಯಾಗಿ' ಎಂದು ಕೋರಿತು.

ಕನ್ನಡ ಪರ ಹೋರಾಟದಲ್ಲಿ ತೊಡಗಿರುವ ಅನೇಕರು ಕನ್ನಡ ನಾಡಿನಲ್ಲಿ ಕನ್ನಡದಲ್ಲೇ ಸೇವೆ ನೀಡುವುದರ ಅಗತ್ಯವನ್ನು ಸಾರುವ ನೂರಾರು ಸಂದೇಶಗಳನ್ನು ಟ್ವಿಟರ್‌ನಲ್ಲಿ ಹಂಚಿಕೊಂಡರು.

'ಅಡುಗೆ ಅನಿಲದ ಸಿಲಿಂಡರ್ ಮೇಲೆ ಕನ್ನಡದಲ್ಲಿ ಯಾವುದೇ ಮಾಹಿತಿ ಇಲ್ಲ. ಇದು ಕನ್ನಡಲ್ಲಿ ಬೇಡುತ್ತಿರುವ ಸೇವೆ ಅಷ್ಟೇ ಅಲ್ಲ, ಕನ್ನಡಿಗರ ಸುರಕ್ಷತೆ ಮತ್ತು ಜೀವದ ಪ್ರಶ್ನೆ. ಇನ್ನು ಮುಂದೆ ಆದರೂ ಕನ್ನಡದಲ್ಲಿ ಎಲ್ಲ ಸುರಕ್ಷತಾ ಮಾಹಿತಿ ಸಿಗಲಿ' ಎಂದು ಸಂದೀಪ್ ಕಂಬಿ ಒತ್ತಾಯಿಸಿದರು.

'ಯಾವುದೇ ಮಾರಾಟಗಾರರು ಗ್ರಾಹಕರನ್ನು ಕಡೆಗಣಿಸಿ ಗೆಲ್ಲಲಾರರು. ಕನ್ನಡಿಗರು ಗ್ರಾಹಕರಾಗಿ ಕನ್ನಡದಲ್ಲಿ ಸೇವೆ ಕೇಳುವುದನ್ನು ರೂಢಿ ಮಾಡಿಕೊಳ್ಳಬೇಕು. ಇದರಿಂದ ಆಗುವ ಬದಲಾವಣೆಗಳು ಅಚ್ಚರಿ ಮೂಡಿಸುವಂತಹವು' ಎಂದು ಜೆ.ಎಸ್. ಪ್ರಶಾಂತ ಟ್ವೀಟ್ ಮಾಡಿದರು.

'ಮಾರುಕಟ್ಟೆ ಮತ್ತು ವ್ಯವಹಾರದಲ್ಲಿ ಭಾಷೆ ಬಳಕೆಯಲ್ಲಿದ್ದರೆ ಭಾಷೆಗೆ ಉಳಿವು. ನಮ್ಮ ಸುತ್ತ ಕಾಣುವ, ನಾವು ಕೊಳ್ಳುವ ಎಲ್ಲ ಕಡೆ ಕನ್ನಡದಲ್ಲಿ ಸೇವೆಗೆ ಆಗ್ರಹಿಸೋಣ' ಎಂದು ಅಮರನಾಥ ಶಿವಶಂಕರ್ ಒತ್ತಾಯಿಸಿದರು.

'ಬ್ಯಾಕಿಂಗ್‌ನ ಮೂಲಭೂತ ಸೇವೆಯನ್ನು ಕನ್ನಡದಲ್ಲೇ ಪಡೆಯಲು ಸಾವಿರಾರು ಕನ್ನಡಿಗರು ಪಡಿಪಾಟಲು ಎದುರಿಸುತ್ತಿದ್ದಾರೆ' ಎಂದು ಗಮನ ಸೆಳೆದ ಕಿರಣ್ ಕೊಡ್ಲಾಡಿ, ಈ ಕುರಿತು ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಗಳನ್ನು ಟ್ವಿಟರ್‌ನಲ್ಲಿ ಹಂಚಿಕೊಂಡರು.

ಗಮನ ಸೆಳೆದ ಟ್ವೀಟ್‌ಗಳು

ನಾನು ಇತ್ತೀಚೆಗೆ ಎನ್‌ಪಿಎಸ್ ಖಾತೆಯನ್ನು ತೆರೆದೆ. ಮಾಹಿತಿ ಕೈಪಿಡಿ ಇಂಗ್ಲಿಷ್, ಹಿಂದಿಗಳಲ್ಲಿ ಮಾತ್ರ ಇದೆ. ಅವರ ಯೂಟ್ಯೂಬ್ ವಿಡಿಯೊಗಳಲ್ಲೂ ಇದೇ ಕತೆ. ಮಾಹಿತಿ ಹಾಗೂ ಸೇವೆಯನ್ನು ಕನ್ನಡ ಹಾಗೂ ಭಾರತದ ಇತರ ಭಾಷೆಗಳಲ್ಲೂ ನೀಡಿ

ವಿಕಾಸ್ ಹೆಗಡೆ

ಅಣ್ಣಾವ್ರ ಹೆಗ್ಗಳಿಕೆಯನ್ನು ಆಚರಿಸುವ ಅತ್ಯಂತ ಶ್ರೇಷ್ಠ ಮಾರ್ಗವೆಂದರೆ ಸರ್ಕಾರಿ ಹಾಗೂ ಖಾಸಗಿ ರಂಗದ ಎಲ್ಲ ಗ್ರಾಹಕ ಸೇವೆಗಳನ್ನು ಸದಾ ಕನ್ನಡದಲ್ಲೇ ನೀಡುವಂತೆ ಒತ್ತಾಯಿಸುವುದು. ಕನ್ನಡದಲ್ಲಿ ಸೇವೆ ಒದಗಿಸದವರಲ್ಲಿ ವ್ಯಾಪಾರವೂ ಬೇಡ.

ಅಭಿನಂದನ್

ಡಾ. ರಾಜ್ ಅವರು ಎಷ್ಟೇ ಎತ್ತರಕ್ಕೆ ಏರಿದರೂ ತಮಗೆ ಬದುಕು ಕಟ್ಟಿಕೊಟ್ಟ ಕನ್ನಡವನ್ನು ತಮ್ಮ ಕೊನೆ ಉಸಿರಿರುವವರೆಗೂ ಅತ್ಯಂತ ಗೌರವದಿಂದ ಕಂಡವರು. ಕನ್ನಡಕ್ಕೆ ಕಿಂಚಿತ್ತು ಅವಮಾನವಾದರೂ ಸೆಟೆದು ನಿಂತವರು. ಇದು ನಮಗೆಲ್ಲರಿಗೂ ಮಾದರಿ, ಕನ್ನಡಕ್ಕೆ ಎಲ್ಲೆಡೆಯೂ ಗೌರವ ದಕ್ಕುವಂತೆ ಮಾಡುವುದೇ ನಮ್ಮ ಕರ್ತವ್ಯ

ಗಿರೀಶ್ ಕಾರ್ಗದ್ದೆ

ಹೂವಿನ ಪಲ್ಲಕ್ಕಿ

ಹಲಸೂರಿನಲ್ಲಿ ಭಾನುವಾರ ಸೋಮೇಶ್ವರ ದೇವಸ್ಥಾನದ ಹೂವಿನ ಪಲ್ಲಕ್ಕಿ ಉತ್ಸವ ಸಂಭ್ರಮದಿಂದ ನೆರವೇರಿತು –ಪ್ರಜಾವಾಣಿ ಚಿತ್ರ/ಬಿ.ಎಚ್. ಶಿವಕುಮಾರ್

ಕೆಆರ್‌ಎಸ್ ಪಕ್ಷದ 'ಕರ್ನಾಟಕ ಜನಚೈತನ್ಯ ಯಾತ್ರೆ' ಆರಂಭ

ಬೆಂಗಳೂರು: ಭ್ರಷ್ಟಾಚಾರದ ವಿರುದ್ಧ ಜನಜಾಗೃತಿ ಮೂಡಿಸುವ ಉದ್ದೇಶದಿಂದ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷ ಆರಂಭಿಸಿರುವ 'ಕರ್ನಾಟಕ ಜನಚೈತನ್ಯ ಯಾತ್ರೆಗೆ' ಫ್ರೀಡಂ ಪಾರ್ಕ್‌ನಲ್ಲಿ ಸಂಯುಕ್ತ ಜನತಾದಳ (ಜೆಡಿಯು) ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಮಹಿಮಾ ಪಟೇಲ್ ಅವರು ಭಾನುವಾರ ಚಾಲನೆ ನೀಡಿದರು.

ಕೆಆರ್‌ಎಸ್ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ರವಿಕೃಷ್ಣಾರೆಡ್ಡಿ ಈ ಯಾತ್ರೆಯ ನೇತೃತ್ವ ವಹಿಸಿದ್ದಾರೆ. ಚಾಲನಾ ಸಮಾವೇಶದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದ ಕೆಆರ್‌ಎಸ್ ಪಕ್ಷದ ನೂರಾರು ಪದಾಧಿಕಾರಿಗಳು, ಕಾರ್ಯಕರ್ತರು ಭಾಗವಹಿಸಿದರು.

ಮಹಿಮಾ ಪಟೇಲ್ ಮಾತನಾಡಿ, 'ಈ ಯಾತ್ರೆ ಯಶಸ್ವಿಯಾಗಿ ಸುವರ್ಣ ಕರ್ನಾಟಕ ಕಟ್ಟುವಲ್ಲಿ ನಾವೆಲ್ಲರೂ ಶ್ರಮಿಸೋಣ' ಎಂದು ಕರೆ ನೀಡಿದರು.

ರವಿಕೃಷ್ಣಾರೆಡ್ಡಿ ಮಾತನಾಡಿ, 'ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಪಕ್ಷ ಒಂದೇ ನಾಣ್ಯದ ಎರಡು ಮುಖಗಳು ಇದ್ದಂತೆ. ಹಿಂದಿನಿಂದಲೂ ಭ್ರಷ್ಟಾಚಾರ ನಡೆದೇ ಇದೆ. ಈ ಭ್ರಷ್ಟಾಚಾರ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಈ ಯಾತ್ರೆ ಹಮ್ಮಿಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಇಡೀ ರಾಜ್ಯದಲ್ಲಿ ಈ ಯಾತ್ರೆ ನಡೆಯಲಿದೆ' ಎಂದರು.

ರಾಷ್ಟ್ರಕವಿ ಕುವೆಂಪು ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಯಾತ್ರೆಗೆ ಚಾಲನೆ ನೀಡಲಾಯಿತು. ಯಾತ್ರೆಯು ಯಲಹಂಕ, ದೊಡ್ಡಬಳ್ಳಾಪುರ, ಗೌರಿಬಿದನೂರು ಮುಖಾಂತರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ವಿದುರಾಶ್ವತ್ಥ ಕಡೆಗೆ ತೆರಳಿತು.

ಸಮಾವೇಶದಲ್ಲಿ 50 ಕ್ಕೂ ಹೆಚ್ಚು ಜನರು ಕೆಆರ್‌ಎಸ್ ಪಕ್ಷ ಸೇರಿದರು. ಅಲ್ಲದೆ, ಯಾತ್ರೆಗೆ 45 ಸಾವಿರಕ್ಕೂ ಹೆಚ್ಚು ದೇಣಿಗೆ ಕೂಡಾ ಸಂಗ್ರಹವಾಯಿತು.

ವಿಮಾನದಲ್ಲಿ ಮಹಿಳೆಗೆ ಲೈಂಗಿಕ ಕಿರುಕುಳ: ಬಂಧನ

ಬೆಂಗಳೂರು: ವಿಮಾನದಲ್ಲಿ ಮಹಿಳೆಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿದ್ದ ಆರೋಪದಡಿ ಚೆನ್ನೈನ ಕೃಷ್ಣನ್ ಎಂಬಾತನನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

'ಇದೇ 18ರಂದು ಮಹಿಳೆಯೊಬ್ಬರು ಚೆನ್ನೈನಿಂದ ಬೆಂಗಳೂರಿಗೆ ಇಂಡಿಗೊ ವಿಮಾನದಲ್ಲಿ ಪ್ರಯಾಣಿಸಿದ್ದರು. ಸಂತ್ರಸ್ತೆಯ ಹಿಂಬದಿ ಸೀಟಿನಲ್ಲಿ (ಆಸನ ಸಂಖ್ಯೆ 20ಎ) ಕುಳಿತಿದ್ದ ಆರೋಪಿ ಅವರ ಮೈ ಕೈ ಮುಟ್ಟಿ ಅಸಭ್ಯವಾಗಿ ವರ್ತಿಸಿದ್ದ. ಎಚ್ಚರಿಕೆ ನೀಡಿದರೂ ಲೆಕ್ಕಿಸದೇ ತನ್ನ ಕುಚೇಷ್ಟೆ ಮುಂದುವರಿಸಿದ್ದ. ಇದರಿಂದ ನೊಂದ ಮಹಿಳೆ ವಿಮಾನದಲ್ಲಿದ್ದ ಸಿಬ್ಬಂದಿಗೆ ದೂರು ನೀಡಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.'ವಿಮಾನ ಇಳಿದ ಬಳಿಕ ಠಾಣೆಗೆ ಬಂದಿದ್ದ ಮಹಿಳೆ ಆತನ ವಿರುದ್ಧ ದೂರು ದಾಖಲಿಸಿದ್ದರು. ಆರೋಪಿಯನ್ನು ಬಂಧಿಸಿ ಹೇಳಿಕೆ ಪಡೆಯಲಾಗಿದ್ದು, ಠಾಣೆ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದೇವೆ' ಎಂದು ಹೇಳಿದ್ದಾರೆ.



ಮರುಮುದ್ರಣಗೊಂಡ 'ಸಮಯದ ಗೊಂಬೆ' ಕಾದಂಬರಿಯನ್ನು ನಿರ್ದೇಶಕ ಭಗವಾನ್ ಅವರು ಬೆಂಗಳೂರಿನಲ್ಲಿ ಭಾನುವಾರ ಲೋಕಾರ್ಪಣೆ ಮಾಡಿದರು. ಹರಿಪ್ರಸಾದ್ ಇದ್ದರು.

'ಸಮಯದ ಗೊಂಬೆ' ಮರುಮುದ್ರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡದ ಲೇಖಕಿ ಚಿತ್ರಲೇಖ ಅವರ 'ಸಮಯದ ಗೊಂಬೆ' ಕಾದಂಬರಿಯು ಮರುಮುದ್ರಣಗೊಂಡಿದ್ದು, ಡಾ. ರಾಜ್‌ಕುಮಾರ್ ಅವರ 94ನೇ ಜನ್ಮ ದಿನವಾದ ಭಾನುವಾರ ಸಿನಿಮಾ ನಿರ್ದೇಶಕ ಭಗವಾನ್ ಅವರು ಈ ಕೃತಿಯನ್ನು ಲೋಕಾರ್ಪಣೆ ಮಾಡಿದರು.

'ಸಮಯದ ಗೊಂಬೆ' 1984 ರಲ್ಲಿ ತೆರೆಕಂಡ ಸಿನಿಮಾ. ಡಾ.ರಾಜ್ ಕುಮಾರ್ ಅವರ ಅಭಿನಯದ 188 ನೇ ಚಿತ್ರ. 'ಸಮಯದ ಗೊಂಬೆ' ಕಾದಂಬರಿ ಆಧರಿಸಿ ನಿರ್ಮಾಣವಾದ ಚಲನಚಿತ್ರ. ದೊರೆ-ಭಗವಾನ್ ಅವರು ಈ ಚಿತ್ರ ನಿರ್ದೇಶಿಸಿದ್ದರು

ವಿಕ್ರಂ ಪ್ರಕಾಶನದ ಹರಿಪ್ರಸಾದ್ ಮತ್ತು ನವೀನ್ ಅವರು ಇದ್ದರು. ಈ ಕೃತಿಯನ್ನು ಪವರ್ ಸ್ಟಾರ್ ಪುನೀತ್ ರಾಜ್ ಕುಮಾರ್ ಅವರಿಗೆ ಅರ್ಪಿಸಲಾಗಿದೆ.

ಬೈಕ್ ತಾಗಿದ್ದಕ್ಕೆ ಜಗಳ: ಯುವಕನ ಕೊಲೆ

ಬೆಂಗಳೂರು: ಬೈಕ್ ತಾಗಿದ್ದಕ್ಕಾಗಿ ನಡೆದ ಗಲಾಟೆಯಿಂದ ಸಿಟ್ಟಿಗೆದ್ದ ಯುವಕನೊಬ್ಬ ತನ್ನ ಸ್ನೇಹಿತರ ಜೊತೆ ಸೇರಿ ಭರತ್ ಕುಮಾರ್ (23) ಎಂಬಾತನನ್ನು ಕೊಲೆ ಮಾಡಿ ಪರಾರಿಯಾಗಿದ್ದಾನೆ. ನಗರ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕೆಂಗೇರಿ ಉಪನಗರದ ಎಂಟಿಎಸ್ ಕಾಲೊನಿ ನಿವಾಸಿ ಭರತ್, ಶನಿವಾರ ರಾತ್ರಿ ನಡೆದ ಕರಗ ವೀಕ್ಷಿಸಲು ಸ್ನೇಹಿತರೊಂದಿಗೆ ಕೆಂಗೇರಿಗೆ ಹೋಗಿದ್ದ. ಬೈಕ್‌ನಲ್ಲಿ ಮನೆಗೆ ಹೊರಟಿದ್ದಾಗ ಆರೋಪಿಯು ಅದೇ ಮಾರ್ಗವಾಗಿ ಡಿಯೊ ಬೈಕ್‌ನಲ್ಲಿ ಬಂದಿದ್ದ. ಆತನ ಸ್ಕೂಟರ್ ಭರತನ ಕೈಗೆ ತಾಗಿತ್ತು. ಇದರಿಂದ ಕೆರಳಿದ್ದ ಭರತ್, ಸ್ಕೂಟರ್ ನಿಲ್ಲಿಸಿ ನಿಧಾನವಾಗಿ ಹೋಗುವಂತೆ ಸೂಚಿಸಿದ್ದ. ಇದರಿಂದ ಕುಪಿತಗೊಂಡಿದ್ದ ಆರೋಪಿಯು ಜಗಳವಾಡಿದ್ದ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಕೆಲ ನಿಮಿಷಗಳ ಬಳಿಕ ಸ್ನೇಹಿತರೊಂದಿಗೆ ಭರತ್ ಇದ್ದಲ್ಲಿಗೆ ಬಂದಿದ್ದ ಆರೋಪಿಯು ಭರತ್‌ನನ್ನು ಅವರು ಕೆಂಗೇರಿ ರೈಲ್ವೆ ನಿಲ್ದಾಣದ ಪ್ಲ್ಯಾಟ್‌ಫಾರಂ-4ರ ಬಳಿ ಕರೆದುಕೊಂಡು ಹೋಗಿ ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾರೆ. ಭದ್ರತಾ ಸಿಬ್ಬಂದಿ ತಮ್ಮತ್ತ ಬರುತ್ತಿರುವುದನ್ನು ಗಮನಿಸಿದ್ದ ಆರೋಪಿಗಳು ಶವವನ್ನು ಹಳಿಯ ಮೇಲೆ ಬಿಸಾಕಿ ಪರಾರಿಯಾಗಿದ್ದಾರೆ' ಎಂದು ವಿವರಿಸಿದ್ದಾರೆ.

ಮಹಿಳೆಯ ಚಿಕಿತ್ಸೆಗೆ ನೆರವು: ಪೊಲೀಸ್ ಸಿಬ್ಬಂದಿಗೆ ಮೆಚ್ಚುಗೆ

ಬೆಂಗಳೂರು: ಶಸ್ತ್ರಚಿಕಿತ್ಸೆಗೆ ಒಳಗಾಗಿ ಹಣ ಪಾವತಿಸಲಾಗದೆ ಪರದಾಡಿದ್ದ ಮಹಿಳೆಗೆ ಪೊಲೀಸ್ ಸಿಬ್ಬಂದಿಯೊಬ್ಬರು ನೆರವಾಗಿದ್ದು, ಅವರ ಮಾನವೀಯ ಕಾರ್ಯಕ್ಕೆ ಪ್ರಶಂಸೆ ವ್ಯಕ್ತವಾಗಿದೆ.

ಮೂಡಲಪಾಳ್ಯ ನಿವಾಸಿ ರೂಬಿ ಎಂಬುವರು ಗರ್ಭಕೋಶದ ಸಮಸ್ಯೆಯಿಂದ ಬಳಲುತ್ತಿದ್ದರು. ಖಾಸಗಿ ಆಸ್ಪತ್ರೆಗೆ ದಾಖಲಾಗಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದರು. ಅದಕ್ಕೆ ₹1.25 ಲಕ್ಷ ವೆಚ್ಚವಾಗಿತ್ತು. ಅಷ್ಟೊಂದು ಹಣ ಅವರ ಬಳಿ ಇರಲಿಲ್ಲ. ಆಗ ವಿಜಯನಗರ ಪೊಲೀಸ್ ಠಾಣೆಯ ಹೊಯ್ಸಳ-87ನ ಎಎಸ್‌ಐ ಬಿ.ಎಸ್. ಜಗದೀಶ್ ಹಾಗೂ ಮೋಹನ್ ಅವರು ಆಕೆಗೆ ನೆರವು ನೀಡಿದ್ದಾರೆ.

'ರೂಬಿ 112ಗೆ ಕರೆಮಾಡಿ ಸಹಾಯ ಮಾಡಲು ಮನವಿ ಮಾಡಿದರು. ಕೂಡಲೇ ಆಸ್ಪತ್ರೆಗೆ ಹೋಗಿ ನನ್ನ ಬಳಿ ಇದ್ದ ₹10 ಸಾವಿರ ಪಾವತಿಸಿದೆ. ಕಾಂಗ್ರೆಸ್ ಮುಖಂಡ ಪ್ರಿಯಾ ಕೃಷ್ಣ ಅವರ ಮನೆಗೆ ಹೋಗಿ ಮಹಿಳೆಗೆ ನೆರವಾಗುವಂತೆ ಕೋರಿದೆ. ಅವರು ₹20 ಸಾವಿರ ಪಾವತಿಸಿದರು. ಮಾರುತಿ ಮೆಡಿಕಲ್‌ನ ಮಾಲೀಕರು ಹಾಗೂ ಕಿರಣ್ ಎಂಬುವರು ತಲಾ ₹5 ಸಾವಿರ ನೀಡಿದರು. ಹೀಗೆ ಆಸ್ಪತ್ರೆಯಿಂದ ಬಿಡುಗಡೆ ಮಾಡಿಸಲು ನೆರವಾದೆ' ಎಂದು ಜಗದೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಮೂವರು ಉಗ್ರರ ಹತ್ಯೆ

ಶ್ರೀನಗರ: ಪುಲ್ವಾಮಾ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಭಾನುವಾರ ನಡೆಸಿದ ಎನ್‌ಕೌಂಟರ್‌ನಲ್ಲಿ ಲಷ್ಕರ್-ಎ-ತಯಬಾ (ಎಲ್‌ಇಟಿ) ಡೆಪ್ಯುಟಿ ಕಮಾಂಡರ್ ಆರಿಫ್ ಅಹ್ಮದ್ ಹಜಾರ್ ಸೇರಿ ಮೂವರು ಉಗ್ರರನ್ನು ಹತ್ಯೆ ಮಾಡಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೋದಿಗೆ 'ಲತಾ ಮಂಗೇಶ್ಕರ್' ಪ್ರಶಸ್ತಿ ಪ್ರದಾನ

ಮುಂಬೈ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರಿಗೆ ಭಾನುವಾರ 'ಲತಾ ದೀನಾನಾಥ್ ಮಂಗೇಶ್ಕರ್' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮಾಸ್ಟರ್ ದೀನಾನಾಥ್ ಮಂಗೇಶ್ಕರ್ ಸ್ಮೃತಿ ಪ್ರತಿಷ್ಠಾನ ಚಾರಿಟಬಲ್ ಟ್ರಸ್ಟ್ ಈ ಪ್ರಶಸ್ತಿಯನ್ನು ಸ್ಥಾಪಿಸಿದೆ. ಮೊದಲ ವರ್ಷದ ಪ್ರಶಸ್ತಿಗೆ ಮೋದಿ ಭಾಜನರಾಗಿದ್ದಾರೆ.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಮೋದಿ, ಹಲವು ದಶಕಗಳ ಬಳಿಕ ದೀದಿ ಇಲ್ಲದೆಯೇ ಮೊದಲ ರಾಖಿ ಹಬ್ಬ ನಡೆಯಲಿದೆ' ಎಂದು ಅವರನ್ನು ನೆನಪಿಸಿಕೊಂಡರು.

ದೂರ ಉಳಿದ ಉದ್ಧವ್: ಪ್ರಧಾನಿ ಮೋದಿ ಅವರಿಗೆ 'ಲತಾ ದೀನಾನಾಥ್ ಮಂಗೇಶ್ಕರ್' ಪ್ರಶಸ್ತಿ ಪ್ರದಾನ ಕಾರ್ಯಕ್ರಮದಿಂದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ದೂರ ಉಳಿದರು

ಗೆಲುವಿನತ್ತ ಮ್ಯಾಕ್ರಾನ್

ಪ್ಯಾರಿಸ್ (ಎಪಿ): ಫ್ರಾನ್ಸ್‌ನ ಅಧ್ಯಕ್ಷೀಯ ಚುನಾವಣೆಯಲ್ಲಿ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರಾನ್ ಅವರು ತಮ್ಮ ಪ್ರತಿಸ್ಪರ್ಧಿ ಮರೀನ್ ಲಿ ಪೆನ್ ಅವರನ್ನು ಪರಾಭವಗೊಳಿಸಿ, ಎರಡನೇ ಬಾರಿಗೆ ಆಡಳಿತ ಚುಕ್ಕಾಣಿ ಹಿಡಿಯುವುದು ಬಹುತೇಕ ಖಚಿತವಾಗಿದೆ. ಭಾನುವಾರ ಮತ ಎಣಿಕೆ ನಡೆದಿದ್ದು, ಮ್ಯಾಕ್ರಾನ್ ಅವರು ಶೇ 57.0–58.5ರಷ್ಟು ಮತಗಳನ್ನು ಪಡೆಯುವ ಮೂಲಕ ಗೆಲುವು ಸಾಧಿಸುವ ಹಾದಿಯಲ್ಲಿದ್ದಾರೆ ಎಂದು ಚುನಾವಣೋತ್ತರ ಸಮೀಕ್ಷೆ ನಡೆಸುವ ಸಂಸ್ಥೆಗಳು ಅಂದಾಜು ಮಾಡಿವೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಚಿತ್ರಾವಳಿ

ಬೆಂಗಳೂರು ಪ್ರೆಸ್ ಕ್ಲಬ್‌ಗೆ ಭಾನುವಾರ ಭೇಟಿ ನೀಡಿದ್ದ ಉಪ ರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಅವರು ಕ್ಲಬ್ ಆವರಣದಲ್ಲಿ ಗಿಡ ನೆಟ್ಟರು. ಕ್ಲಬ್ ಅಧ್ಯಕ್ಷ ಕೆ. ಸದಾಶಿವ ಶೆಣೈ, ಸಂಸದ ಪಿ.ಸಿ. ಮೋಹನ್, ಕ್ಲಬ್ ಪ್ರಧಾನ ಕಾರ್ಯದರ್ಶಿ ಎಚ್.ವಿ. ಕಿರಣ್ ಮತ್ತು ಕ್ಲಬ್‌ನ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ವತಿಯಿಂದ ಕೋರಮಂಗಲದಲ್ಲಿ ಭಾನುವಾರ ಆಯೋಜಿಸಿದ್ದ 'ಸ್ವರಾನುಭೂತಿ' ಕಾರ್ಯಕ್ರಮದಲ್ಲಿ ರಾಜೇಶ್ ಕೃಷ್ಣನ್ ತಂಡದವರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು ಪ್ರಜಾವಾಣಿ ಚಿತ್ರ

'ಸ್ವಜನ ಪಕ್ಷಪಾತ': ಡಿಎಇ ಕಾರ್ಯದರ್ಶಿ ಸಂಬಂಧಿಗೆ ರಾಜಾರಾಮಣ್ಣ ಫೆಲೋಶಿಪ್

• ಕಲ್ಯಾಣ್ ರೇ

ನವದೆಹಲಿ: ಅಣುಶಕ್ತಿ ಇಲಾಖೆ (ಡಿಎಇ) ನೀಡುವ ಪ್ರತಿಷ್ಠಿತ ರಾಜಾ ರಾಮಣ್ಣ ಫೆಲೋಶಿಪ್‌ಗೆ ಭಾಭಾ ಅಣು ಸಂಶೋಧನಾ ಕೇಂದ್ರದ (ಬಿಎಆರ್‌ಸಿ) ಹಿರಿಯ ವಿಜ್ಞಾನಿ ರಮೇಶ ಚಂದ್ ರನ್ನೋತ್ ಅವರು ಆಯ್ಕೆಯಾಗಿದ್ದು, ಚರ್ಚೆಗೆ ಗ್ರಾಸವಾಗಿದೆ.

ಈ ಫೆಲೋಶಿಪ್‌ಗೆ ರಮೇಶಚಂದ್ ಅವರ ಆಯ್ಕೆ 'ಹಿತಾಸಕ್ತಿ ಸಂಘರ್ಷ' ಹಾಗೂ 'ಸ್ವಜನ ಪಕ್ಷಪಾತ'ಕ್ಕೆ ನಿದರ್ಶನವಾಗಿದೆ ಎಂದು ಡಿಎಇಯ ಕೆಲವು ವಿಜ್ಞಾನಿಗಳು ಆರೋಪಿಸಿದ್ದಾರೆ.

ಅಣುಶಕ್ತಿ ಇಲಾಖೆ ಕಾರ್ಯದರ್ಶಿ ಹಾಗೂ ಅಣುಶಕ್ತಿ ಆಯೋಗದ ಚೇರಮನ್ ಕೆ.ಎನ್.ವ್ಯಾಸ್ ಹಾಗೂ ವಿಜ್ಞಾನಿ ರಮೇಶಚಂದ್ ರನ್ನೋತ್ ಬೀಗರು. ವ್ಯಾಸ್ ಅವರ ಪುತ್ರ ವಿನಯ್ ಅವರು ರನ್ನೋತ್ ಪುತ್ರಿ ಪಾರುಲ್ ಅವರನ್ನು 2016ರಲ್ಲಿ ವಿವಾಹವಾಗಿದ್ದಾರೆ ಎಂದು ಇಲಾಖೆಯ ಸಿಬ್ಬಂದಿ ಹೇಳಿದ್ದಾರೆ.

ಈ ಆರೋಪಗಳ ಬಗ್ಗೆ ಪ್ರತಿಕ್ರಿಯೆ ಪಡೆಯುವ ಸಲುವಾಗಿ ವ್ಯಾಸ್ ಹಾಗೂ ರನ್ನೋತ್ ಅವರಿಗೆ 'ಪ್ರಜಾವಾಣಿ' ಇ-ಮೇಲ್ ಹಾಗೂ ಎಸ್‌ಎಂಎಸ್ ಕಳುಹಿಸಿತ್ತು. ಆದರೆ, ಇಬ್ಬರೂ ಪ್ರತಿಕ್ರಿಯೆ ನೀಡಿಲ್ಲ.

2017ರಿಂದ 2021ರ ನಡುವೆ ರಾಜಾ ರಾಮಣ್ಣ ಫೆಲೋಶಿಪ್‌ಗೆ ಆಯ್ಕೆಯಾದವರ ಹೆಸರುಗಳನ್ನು ಒದಗಿಸುವಂತೆ 'ಪ್ರಜಾವಾಣಿ' ಆರ್‌ಟಿಐನಡಿ ಅರ್ಜಿ ಸಲ್ಲಿಸಿತ್ತು. ಏಳು ತಿಂಗಳು ನಂತರ ಇಲಾಖೆಯು ಪಟ್ಟಿಯನ್ನು ಒದಗಿಸಿದೆ. 2021ರಲ್ಲಿ ಈ ಫೆಲೋಶಿಪ್‌ಗೆ ಬಿಎಆರ್‌ಸಿಯ ಎಂಟು ಜನ ವಿಜ್ಞಾನಿಗಳು ಭಾಜನರಾಗಿದ್ದಾರೆ.

'ಉನ್ನತ ಸಂಶೋಧನೆಯಲ್ಲಿ ತೊಡಗಿರುವ ನಿವೃತ್ತ ವಿಜ್ಞಾನಿಗಳು/ಎಂಜಿನಿಯರ್‌ಗಳು ಹಾಗೂ ತಂತ್ರಜ್ಞರ ಸೇವೆಯನ್ನು ಬಳಸಿಕೊಳ್ಳುವ ಉದ್ದೇಶದಿಂದ 2000ರಲ್ಲಿ ರಾಜಾ ರಾಮಣ್ಣ ಫೆಲೋಶಿಪ್ ನೀಡುವುದನ್ನು ಆರಂಭಿಸಲಾಯಿತು. ಆದರೆ, ಈ ಫೆಲೋಶಿಪ್‌ಗೆ ಆಯ್ಕೆಯಾದವರ ಹೆಸರುಗಳನ್ನು ಇಲಾಖೆಯು ಸಾರ್ವಜನಿಕವಾಗಿ ಯಾವತ್ತೂ ಪ್ರಕಟಿಸಿಲ್ಲ' ಎಂದು ಇಲಾಖೆಯ ಮೂಲಗಳು ಹೇಳಿವೆ.

ಈ ಫೆಲೋಶಿಪ್‌ಗೆ ಆಯ್ಕೆಯಾಗುವವರಿಗೆ ಪಿಂಚಣಿ ಜೊತೆಗೆ ತಿಂಗಳಿಗೆ ₹ 1 ಲಕ್ಷ ಗೌರವ ಧನ ಹಾಗೂ ಇತರ ಸೌಲಭ್ಯಗಳನ್ನು ನೀಡಲಾಗುತ್ತದೆ.

ದೌರ್ಜನ್ಯ ತಡೆ ಕಾಯ್ದೆಯಡಿ ಕ್ರಮ ಕೈಗೊಳ್ಳುವಂತೆ ವಿಧಾನಸೌಧ ಪೊಲೀಸ್ ಠಾಣೆಗೆ ದೂರು

ಬ್ಯಾಕ್‌ಲಾಗ್ ಎಂಜಿನಿಯರ್‌ಗಳಿಗೆ ಬಡ್ತಿ ವಂಚನೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕೋಪಯೋಗಿ, ಜಲಸಂಪನ್ಮೂಲ ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ಪಂಚಾಯತ್‌ರಾಜ್ ಇಲಾಖೆಯ ಒಟ್ಟು 846 ಬ್ಯಾಕ್‌ಲಾಗ್ ಸಹಾಯಕ ಎಂಜಿನಿಯರ್‌ಗಳ ಸೇವೆ ಮತ್ತು ಜ್ಯೇಷ್ಠತೆಯನ್ನು 2003-2004 ರಿಂದಲೇ ಪರಿಗಣಿಸುವಂತೆ ಸುಪ್ರೀಂ ಕೋರ್ಟ್ ತೀರ್ಪು ನೀಡಿದ್ದರೂ ಪದೋನ್ನತಿ ಪರಿಗಣಿಸದೆ ವಂಚಿಸಲಾಗಿದೆ' ಎಂದು ಎಂಜಿನಿಯರ್‌ಗಳು ಆರೋಪಿಸಿದ್ದಾರೆ. ಈ ಸಂಬಂಧ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ದೌರ್ಜನ್ಯ ತಡೆ ಕಾಯ್ದೆಯಡಿ ಕ್ರಮ ಕೈಗೊಳ್ಳುವಂತೆ ವಿಧಾನಸೌಧ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

'ನಮಗೆ ಆಗಿರುವ ಅನ್ಯಾಯದಲ್ಲಿ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ ಕೆ.ಎಸ್. ಕೃಷ್ಣಾರೆಡ್ಡಿ, ಜಂಟಿ ಕಾರ್ಯದರ್ಶಿ ಸಿ.ಐಚ್. ಹನುಮಂತಯ್ಯ, ಮತ್ತು ಅಧೀನ ಕಾರ್ಯದರ್ಶಿ ಐ.ಎಸ್. ರುದ್ರಯ್ಯ, ಜಲಸಂಪನ್ಮೂಲ ಇಲಾಖೆಯ ಅಧೀನ ಕಾರ್ಯದರ್ಶಿ ಸುರೇಂದ್ರ ಭಾಗಿಯಾಗಿದ್ದಾರೆ. ಈ ಅಧಿಕಾರಿಗಳು ಜಾತಿ ಕಾರಣದಿಂದ ವ್ಯವಸ್ಥಿತವಾಗಿ ಪಿತೂರಿ ಮಾಡಿ ಸಾಮಾಜಿಕ ನ್ಯಾಯವನ್ನು ನಿರಾಕರಿಸಿದ್ದಾರೆ ಹಾಗೂ ಆರ್ಥಿಕವಾಗಿ ನಷ್ಟ ಉಂಟು ಮಾಡಲು ಸಂಚು ಮಾಡಿದ್ದಾರೆ' ಎಂದು ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳಾದ ಡಿ. ಮೂರ್ತಿ, ವಾಸುದೇವ್ ಬಿ.ಎಚ್., ಜಿ. ಲೋಕೇಶ್ ಮತ್ತಿತರರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಏನಿದು ಪ್ರಕರಣ: 2003–04ರಲ್ಲಿ ಗುತ್ತಿಗೆ ಆಧಾರದಲ್ಲಿ ನೇಮಕಗೊಂಡ ಸಹಾಯಕ ಎಂಜಿನಿಯರ್‌ಗಳನ್ನು 2005 ರಲ್ಲಿ ಕಾಯಂ ಹುದ್ದೆಗೆ ವಿಲೀನಗೊಳಿಸಲಾಗಿತ್ತು. 2014 ರಲ್ಲಿ ಅಂತಿಮ ಜ್ಯೇಷ್ಠತಾ ಪಟ್ಟಿ ಪ್ರಕಟಿಸಲಾಗಿದೆ. ಬಳಿಕ ಸುಪ್ರೀಂಕೋರ್ಟ್‌ನ ಅಂತಿಮ ತೀರ್ಪಿನ ನಂತರ ಕೆಎಟಿ ಮೂಲಕ ಮತ್ತೆ ಅರ್ಹತೆ ಪರಿಶೀಲಿಸಿ ಈ ಬ್ಯಾಕ್‌ಲಾಗ್ ಎಂಜಿನಿಯರ್‌ಗಳ ಸೇವೆ ಮತ್ತು ಜ್ಯೇಷ್ಠತೆಯನ್ನು 2003-04 ರಿಂದ ನಿಗದಿಪಡಿಸಿ 2017ರಲ್ಲಿ ಪರಿಷ್ಕೃತ ಜ್ಯೇಷ್ಠತಾ ಪಟ್ಟಿ ಪ್ರಕಟಿಸಲಾಗಿದೆ.'ಆದರೆ, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹುದ್ದೆಗೆ ಪದೋನ್ನತಿ ನೀಡಲು 1978ರ ಬಡ್ತಿ ಮೀಸಲಾತಿ ನಿಯಮ ಪಾಲಿಸಿಲ್ಲ. 2006-07ರಿಂದಲೇ ಎಲ್ಲರೂ ಬಡ್ತಿಗೆ ಅರ್ಹರಿದ್ದೇವೆ. ಈ ಬಗ್ಗೆ ಹಲವು ಬಾರಿ ಮನವಿ ಸಲ್ಲಿಸಿದರೂ ನಾನಾ ಕಾರಣಗಳನ್ನು ನೀಡಿ ಪದೋನ್ನತಿಗೆ ಪರಿಗಣಿಸಿಲ್ಲ. ಬಡ್ತಿ ಮೀಸಲಾತಿಗೆ ಸಂಬಂಧಿಸಿದಂತೆ 2017ರ ಜ್ಯೇಷ್ಠತಾ ಸಂರಕ್ಷಣೆ ಕಾಯ್ದೆ ಹಾಗೂ 2019 ರ ಮೇ 10 ರಂದು ಸುಪ್ರೀಂಕೋರ್ಟ್ ತೀರ್ಪಿನಂತೆ ತತ್ಪರಿಣಾಮದ ಜ್ಯೇಷ್ಠತೆ ಹಾಗೂ ಮೀಸಲಾತಿ ನೀಡದೆ ವಂಚಿಸಲಾಗಿದೆ' ಎಂದು ಈ ಎಂಜಿನಿಯರ್‌ಗಳು ದೂರಿನಲ್ಲಿ ತಿಳಿಸಿದ್ದಾರೆ.

'ಲೋಕೋಪಯೋಗಿ ಇಲಾಖೆ 2022ರ ಜ. 31ರಂದು ಹೊರಡಿಸಿರುವ ಅಧಿಸೂಚನೆಯಲ್ಲಿ ಬ್ಯಾಕ್‌ಲಾಗ್ ಜ್ಯೇಷ್ಠತೆಯನ್ನು 2019ರ ನ. 8ಕ್ಕೆ ನಿಗದಿಪಡಿಸಲಾಗಿದೆ. ಆದರೆ, 1978ರ ಬಡ್ತಿ ನಿಯಮ ಪಾಲಿಸಿಲ್ಲ. ಹೀಗಾಗಿ, ಕಾರ್ಯಪಾಲಕ ಎಂಜಿನಿಯರ್ 719 ಹುದ್ದೆಗಳಿಗೆ ಪದೋನ್ನತಿಗೆ ಸಿದ್ಧಪಡಿಸಿದ ಅಧಿಕಾರಿಗಳ ಪಟ್ಟಿಯಲ್ಲಿ ಕೇವಲ ಮೂರು ಎಸ್‌ಸಿ, ಎಸ್‌ಟಿ ಅಧಿಕಾರಿಗಳ ಹೆಸರು ಮಾತ್ರ, ಈ ಬಗ್ಗೆ ಎಸ್‌ಸಿ, ಎಸ್‌ಟಿ ನೌಕರರ ಸಂಘ ಮತ್ತು ವೈಯಕ್ತಿಕವಾಗಿ ಆಕ್ಷೇಪಣೆ ಸಲ್ಲಿಸಿದರೂ ಯಾವುದೇ ಬದಲಾವಣೆ ಮಾಡಿಲ್ಲ. ಆ ಮೂಲಕ ವಂಚನೆ ಮಾಡಲಾಗಿದೆ' ಎಂದೂ ದೂರಿನಲ್ಲಿ ಎಂಜಿನಿಯರ್‌ಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

> ಬ್ಯಾಕ್‌ಲಾಗ್ ಸಹಾಯಕ ಎಂಜಿನಿಯರ್‌ಗಳ ಪೈಕಿ ಕೆಲವರಿಗೆ ಪದೋನ್ನತಿ ನೀಡಲಾಗಿದೆ. ಉಳಿದವರ ಬೇಡಿಕೆಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು
> **ಕೆ.ಎಸ್. ಕೃಷ್ಣಾರೆಡ್ಡಿ**, ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ

> ಪದೋನ್ನತಿ ಪಡೆಯದಂತೆ ವಂಚಿಸುವ ವ್ಯವಸ್ಥಿತ ಹುನ್ನಾರ ಮಾಡಲಾಗಿದೆ. ಈ ಉದ್ದೇಶಪೂರ್ವಕ ತಂತ್ರದ ವಿರುದ್ಧ ಹೋರಾಟ ಹಮ್ಮಿಕೊಳ್ಳುತ್ತೇವೆ
> **ಡಿ. ಚಂದ್ರಶೇಖರಯ್ಯ**, ಅಧ್ಯಕ್ಷ, ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘ

ಅಣ್ಣಾವ್ರ ಹುಟ್ಟುಹಬ್ಬ

ಡಾ. ರಾಜಕುಮಾರ್ ಅವರ ಜನ್ಮದಿನದ ಪ್ರಯುಕ್ತ ಬೆಂಗಳೂರಿನಲ್ಲಿ ಇರುವ ಅವರ ಸಮಾಧಿ ಬಳಿ ಭಾನುವಾರ ಅಭಿಮಾನಿಗಳು ಸೇರಿದ್ದರು –ಪ್ರಜಾವಾಣಿ ಚಿತ್ರ

ರಾಜ್ ಜನ್ಮದಿನ; ಪ್ರಶಸ್ತಿ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ.ರಾಜ್‌ಕುಮಾರ್ ಅವರ ಹಾಡುಗಳ ರಸಧಾರೆ, ಗಂಧದ ಗುಡಿಯಿಂದ ರಾಜಕುಮಾರನವರೆಗಿನ ನೃತ್ಯಗಳ ಝಲಕ್, ನಟಸಾರ್ವಭೌಮನ ಗುಣಗಾನದ ನಡುವೆ 2017ನೇ ಸಾಲಿನ ಚಲನಚಿತ್ರ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಭಾನುವಾರ ನಡೆಯಿತು.

ನಟಿ ಲಕ್ಷ್ಮೀ ಅವರು ತಮ್ಮ ಜೀವಮಾನದ ಸಾಧನೆಗಾಗಿ ಡಾ.ರಾಜ್ ಕುಮಾರ್ ಪ್ರಶಸ್ತಿಗೆ ಪಾತ್ರರಾದರು. ಪ್ರಶಸ್ತಿ ₹ 5 ಲಕ್ಷ ನಗದು ಚಿನ್ನದ ಪದಕ ಮತ್ತು ಫಲಕವನ್ನು ಒಳಗೊಂಡಿದೆ. ನಿರ್ಮಾಪಕ, ನಿರ್ದೇಶಕ ಎಸ್.ನಾರಾಯಣ್ ಅವರ ಚಿತ್ರರಂಗದ ಕೊಡುಗೆಗಾಗಿ ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ, 'ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಡಾ.ರಾಜ್‌ಕುಮಾರ್ ಜನ್ಮದಿನವನ್ನು ಆಚರಿಸುವಂತೆ ಶೀಘ್ರ ಆದೇಶ ಹೊರಡಿಸಲಾಗುವುದು. ಡಾ.ರಾಜ್ ಅವರು ಜೀವಮಾನ ಪೂರ್ತಿ ಒಂದೇ ರೀತಿಯ ಮುಗ್ಧ ವ್ಯಕ್ತಿತ್ವವನ್ನು ಹೊಂದಿದ್ದರು. ಈ ಬಗ್ಗೆ ವೈಜ್ಞಾನಿಕ ಅಧ್ಯಯನ ನಡೆಯಬೇಕು' ಎಂದರು.

ಪುಣ್ಯ ಮಾಡಿದ್ದೇನೆ: ಲಕ್ಷ್ಮೀ

'ಚಿತ್ರರಂಗದಲ್ಲಿ ಮುಂದೆ ಬರಲು ಅದೃಷ್ಟ ಮಾಡಿರಬೇಕು. ಅದಕ್ಕೆ ಇಲ್ಲಿರುವವರ ಪಾದಮುಟ್ಟಿ ನಮಸ್ಕರಿಸುತ್ತೇನೆ. ಡಾ.ರಾಜ್‌ಕುಮಾರ್ ಹೆಸರಿನಲ್ಲಿಯೇ ನೀಡುವ ಈ ಪ್ರಶಸ್ತಿ ಪಡೆಯಲು ನಾನು ಪುಣ್ಯ ಮಾಡಿದ್ದೇನೆ' ಎಂದು ನಟಿ ಲಕ್ಷ್ಮೀ ಭಾವುಕರಾಗಿ ನುಡಿದರು.

ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ನಟ, ನಿರ್ದೇಶಕ ಎಸ್. ನಾರಾಯಣ್, 'ಕಣಗಾಲ್ ಅವರ ಜೊತೆ ಕೆಲಸ ಮಾಡುವ ಆಸೆ ಇತ್ತು. ಅದು ಕೈಗೂಡಲಿಲ್ಲ. ಆದರೆ, ಅವರ ಹೆಸರಿನ ಪ್ರಶಸ್ತಿ ಪಡೆಯುವ ಭಾಗ್ಯ ಸಿಕ್ಕಿದೆ. ಇದು ನನ್ನ ಪಾಲಿನ ಸುದಿನ' ಎಂದು ಹರ್ಷ ವ್ಯಕ್ತಪಡಿಸಿದರು.

ಪ್ರಶಸ್ತಿ ಪುರಸ್ಕೃತರ ವಿವರಗಳಿಗೆ ಇಲ್ಲಿ ಸ್ಕ್ಯಾನ್ ಮಾಡಿ
ಪ್ರಜಾವಾಣಿ

ಸುದ್ದಿ 2 ನಿಮಿಷ

'ಪ್ರಿಯಾಂಕ್‌ರನ್ನು ತನಿಖೆಗೆ ಒಳಪಡಿಸಿ'

ಬೆಂಗಳೂರು: 'ಪಿಎಸ್‌ಐ ನೇಮಕದಲ್ಲಿ ನಡೆದಿದೆ ಎನ್ನಲಾದ ಅಕ್ರಮದಲ್ಲಿ 'ತಾನು ಕಳ್ಳ, ಪರರ ನಂಬ' ಎಂಬಂತೆ ಕಾಂಗ್ರೆಸ್ ನಾಯಕರು ವರ್ತಿಸುತ್ತಿದ್ದಾರೆ. ಈ ಪ್ರಕರಣದ ತನಿಖೆ ಪೂರ್ಣವಾಗ ಬೇಕಾದರೆ ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಅವರನ್ನು ತನಿಖೆಗೆ ಒಳಪಡಿಸಬೇಕು' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್ ಅವರು ಆಗ್ರಹಿಸಿದ್ದಾರೆ.

'ಅಕ್ರಮಕ್ಕೆ ಸಂಬಂಧಿಸಿದಂತೆ ಹೊರಬರುತ್ತಿರುವ ದಾಖಲೆಗಳು, ಶಾಮೀಲಾದ ವ್ಯಕ್ತಿಗಳು, ಬಂಧನಕ್ಕೆ ಒಳಗಾದ ವ್ಯಕ್ತಿಗಳ ಹಿನ್ನೆಲೆ ಎಲ್ಲವೂ ಕಾಂಗ್ರೆಸ್ ಮಯವಾಗಿದೆ. ಅದರಲ್ಲೂ ಕಲ್ಯಾಣ ಕರ್ನಾಟಕ ಭಾಗದ ಕಾಂಗ್ರೆಸ್ ಮುಖಂಡರೇ ಈ ಜಾಲದಲ್ಲಿ ಸಕ್ರಿಯವಾಗಿರುವುದನ್ನು ನೋಡಿದರೆ, ಇದರಲ್ಲಿ ರಾಷ್ಟ್ರ ಮಟ್ಟದ ಕಾಂಗ್ರೆಸ್ ನಾಯಕರು ಭಾಗಿಯಾಗಿರಬಹುದು ಎಂಬ ಅನುಮಾನ ದಟ್ಟವಾಗುತ್ತಿದೆ' ಎಂದಿದ್ದಾರೆ.

'ಈ ಪ್ರಕರಣದಲ್ಲಿ ಆಡಿಯೊ ಬಾಂಬ್ ಸ್ಫೋಟಿಸಿದ್ದೇನೆಂದು ಪ್ರಿಯಾಂಕ್ ಖರ್ಗೆ ಹೇಳುತ್ತಿದ್ದಾರೆ. ಆದರೆ, ಈ ಹಗರಣದಲ್ಲಿ ಸಿಕ್ಕಿಬೀಳುತ್ತಿರುವ ಆರೋಪಿಗಳೆಲ್ಲರೂ ಅವರ ಮನೆ ಸುತ್ತ ಗಿರಕಿ ಹೊಡೆಯುವವರೇ ಆಗಿದ್ದಾರೆ. ಮಹಾಂತೇಶ್ ಪಾಟೀಲ ಮತ್ತು ಅವರ ಸೋದರ, ಖರ್ಗೆ ಕುಟುಂಬ ಹಾಗೂ ಕಾಂಗ್ರೆಸ್ ಜತೆಗೆ ಹೊಂದಿರುವ ನಂಟು ಎಂಥದ್ದು ಎಂಬುದನ್ನು ಪ್ರಿಯಾಂಕ್ ಖರ್ಗೆ ಸ್ಪಷ್ಟಪಡಿಸಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

'ವಿಮಾನ ನಿಲ್ದಾಣಕ್ಕೆ ನನ್ನ ಹೆಸರು ಬೇಡ'

ಬೆಂಗಳೂರು: ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ತಮ್ಮ ಹೆಸರಿಡುವ ನಿರ್ಧಾರವನ್ನು ಕೈಬಿಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಪತ್ರ ಬರೆದಿದ್ದಾರೆ.

ಇತ್ತೀಚೆಗೆ ಶಿವಮೊಗ್ಗ ಜಿಲ್ಲಾ ಪ್ರವಾಸ ಕೈಗೊಂಡಿದ್ದ ಮುಖ್ಯಮಂತ್ರಿ, 'ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಬಿ.ಎಸ್. ಯಡಿಯೂರಪ್ಪ ಅವರ ಹೆಸರನ್ನು ನಾಮಕರಣ ಮಾಡಲು ತೀರ್ಮಾನಿಸಲಾಗಿದೆ' ಎಂದು ಪ್ರಕಟಿಸಿದ್ದರು. ಈ ಕುರಿತು ಭಾನುವಾರ ಪತ್ರ ಬರೆದಿರುವ ಯಡಿಯೂರಪ್ಪ, 'ನಿಮ್ಮ ನಿರ್ಧಾರವನ್ನು ಪುನರ್ ಪರಿಶೀಲಿಸಿ, ರಾಷ್ಟ್ರದ, ನಾಡಿನ ಅಭಿವೃದ್ಧಿ, ಇತಿಹಾಸಕ್ಕೆ ಕೊಡುಗೆ ನೀಡಿರುವ ಮಹನೀಯರ ಹೆಸರನ್ನು ವಿಮಾನ ನಿಲ್ದಾಣಕ್ಕೆ ಇಡಬೇಕು' ಎಂದು ಕೋರಿದ್ದಾರೆ.

'ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ನನ್ನ ಹೆಸರನ್ನು ಇಡುವುದಾಗಿ ಪ್ರಕಟಿಸಿದ್ದೀರಿ. ನಿಮ್ಮ ಪ್ರೀತಿ, ಅಭಿಮಾನಕ್ಕೆ ಧನ್ಯವಾದಗಳು. ನನ್ನನ್ನು ಸತತವಾಗಿ ಬೆಂಬಲಿಸಿದ ಜಿಲ್ಲೆಯ ಜನರ ಸೇವೆ ಮಾಡಿದ್ದೇನೆ ಎಂಬ ಧನ್ಯತಾ ಭಾವವಿದೆ. ವಿಮಾನ ನಿಲ್ದಾಣಕ್ಕೆ ನನ್ನ ಹೆಸರು ಸೂಕ್ತವಲ್ಲವೆಂದು ಭಾವಿಸುತ್ತೇನೆ' ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'10ಕ್ಕೂ ಹೆಚ್ಚು ಶಾಸಕರು ಬಿಜೆಪಿ ಸಂಪರ್ಕದಲ್ಲಿದ್ದಾರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇತರ ಪಕ್ಷಗಳ ಹತ್ತಕ್ಕೂ ಹೆಚ್ಚು ಶಾಸಕರು ಬಿಜೆಪಿ ಸಂಪರ್ಕದಲ್ಲಿದ್ದು, ವರಿಷ್ಠರ ಜತೆ ಚರ್ಚಿಸಿದ ಬಳಿಕ ಪಕ್ಷ ಸೇರ್ಪಡೆಗೆ ಅವಕಾಶ ನೀಡಲಾಗುವುದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

ಭಾನುವಾರ ಬಿಜೆಪಿ ಬೆಂಗಳೂರು ಉತ್ತರ ಜಿಲ್ಲಾ ಘಟಕದ ಪ್ರಮುಖರ ಸಮಿತಿ ಸಭೆಗೂ ಮೊದಲು ಸುದ್ದಿಗಾರರ ಜತೆ ಮಾತನಾಡಿದ ಅವರು, 'ಹಳೆ ಮೈಸೂರು ಭಾಗದಲ್ಲಿ ಇತರ ಪಕ್ಷಗಳ ಹೆಚ್ಚು ಶಾಸಕರು ಬಿಜೆಪಿ ಸೇರಲು ಕಾತರರಾಗಿದ್ದಾರೆ. ಅವರೆಲ್ಲರೂ ನನ್ನ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಂಪರ್ಕದಲ್ಲಿದ್ದಾರೆ' ಎಂದು ಹೇಳಿದರು.

ಹೆಚ್ಚಿನ ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲುವ ಸಾಮರ್ಥ್ಯವಿರುವ ಅಭ್ಯರ್ಥಿಗಳನ್ನು ಹೊಂದಿದೆ. ಉಳಿದ ಕ್ಷೇತ್ರಗಳಲ್ಲಿ ಅನ್ಯ ಪಕ್ಷಗಳಿಂದ ಬಂದವರಿಗೆ ಅವಕಾಶ ಕಲ್ಪಿಸಬಹುದು. ಆ ರೀತಿಯಲ್ಲಿ ನೋಡಿದರೆ ಹೆಚ್ಚು ಮಂದಿಯೇನೂ ಬಿಜೆಪಿಗೆ ಬೇಕಾಗುವುದಿಲ್ಲ. ಪಕ್ಷದ ರಾಷ್ಟ್ರೀಯ ನಾಯಕರ ಒಪ್ಪಿಗೆ ದೊರಕಿದ ಬಳಿಕ ಮುಖ್ಯಮಂತ್ರಿ ಸಮ್ಮುಖದಲ್ಲೇ ಅಂತಹ ಶಾಸಕರನ್ನು ಬಿಜೆಪಿಗೆ ಸೇರಿಸಿಕೊಳ್ಳಲಾಗುವುದು ಎಂದು ಹೇಳಿದರು.

ಸರ್ಕಾರ ಮತ್ತು ಪಕ್ಷ ಒಟ್ಟಾಗಿ ಚುನಾವಣೆ ಎದುರಿಸಲಿವೆ. ಚುನಾವಣಾ ಸಿದ್ಧತೆ ಮತ್ತು ಅಭ್ಯರ್ಥಿಗಳ ಬಲಾಬಲಕ್ಕೆ ಸಂಬಂಧಿಸಿದಂತೆ ಹಲವು ಸುತ್ತಿನ ಸಮೀಕ್ಷೆ ನಡೆಸಲಾಗುವುದು. ಜನಾಭಿಪ್ರಾಯವನ್ನು ಆಧರಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಸ್ವಾಮೀಜಿ ಜತೆ ಚರ್ಚಿಸುವೆ: 'ರಾಜ್ಯದ 50 ಕ್ಷೇತ್ರಗಳಲ್ಲಿ ಸ್ವಾಮೀಜಿಗಳು ಸ್ಪರ್ಧೆ ಮಾಡುತ್ತಾರೆ' ಎಂಬ ಧರ್ಮಸ್ಥಳದ ಕನ್ಯಾಡಿ ಶ್ರೀರಾಮ ಕ್ಷೇತ್ರದ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ನಳಿನ್, 'ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ ನಮ್ಮ ಗುರುಗಳು. ರಾಜಕಾರಣದ ಕುರಿತು ಅವರು ಏನು ಹೇಳಿದ್ದಾರೆ ಎಂಬುದು ಗೊತ್ತಿಲ್ಲ. ಅವರ ಜತೆ ಈ ಬಗ್ಗೆ ಚರ್ಚಿಸುವೆ' ಎಂದರು.

ಗಲಭೆ ನಡೆಸುವವರ ಅಕ್ರಮ ಕಟ್ಟಡಗಳನ್ನು 'ಬುಲ್ಡೋಜರ್' ಬಳಸಿ ನೆಲಸಮಗೊಳಿಸುವ ಕಾನೂನು ರಾಜ್ಯದಲ್ಲೂ ಜಾರಿಯಾಗಬೇಕು. ಇಂತಹ ಕ್ರಮಗಳಿಂದ ಮಾತ್ರ ಗಲಭೆ ನಿಯಂತ್ರಣ ಸಾಧ್ಯ ಎಂದು ಒತ್ತಾಯಿಸಿದರು.

ತಾವು ದೆಹಲಿ ಪ್ರವಾಸ ಕೈಗೊಳ್ಳುತ್ತಿರುವುದರ ಹಿಂದೆ ಯಾವುದೇ ಉದ್ದೇಶವಿಲ್ಲ. ಇತ್ತೀಚೆಗೆ ತಾವು ದೆಹಲಿಗೆ ಹೋದಾಗ ದೊಡ್ಡ ಮಟ್ಟದಲ್ಲಿ ಸುದ್ದಿಯಾಗಿತ್ತು. ಅದು ಏಕೆ ಎಂಬುದು ತಿಳಿದಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕಾಂಗ್ರೆಸ್ ವಿರುದ್ಧ ವಾಗ್ದಾಳಿ

'ಕಾಂಗ್ರೆಸ್ ಪಕ್ಷವು ಅಲ್ಪಸಂಖ್ಯಾತರು ತಪ್ಪು ಮಾಡಿದಾಗ ಮಾತನಾಡುವುದಿಲ್ಲ. ಕಾಂಗ್ರೆಸ್ ಪಕ್ಷವು ಅಲ್ಪಸಂಖ್ಯಾತರ ತುಷ್ಟೀಕರಣ ಮಾಡುತ್ತಿರುವುದರಿಂದಲೇ ಹುಬ್ಬಳ್ಳಿಯಲ್ಲಿ ಗಲಭೆ ನಡೆದಿದೆ' ಎಂದು ಶಾಸಕ ಜಗದೀಶ ಶೆಟ್ಟರ್ ಅವರು ವಾಗ್ದಾಳಿ ನಡೆಸಿದರು.

'ಕೇರಳ ಮುಸ್ಲಿಮರ ಅಂಗಡಿಗಳಲ್ಲಿ ಚಿನ್ನ ಖರೀದಿಸಬೇಡಿ'

ಬಾಗಲಕೋಟೆ: 'ರಾಜ್ಯದಲ್ಲಿರುವ ಕೇರಳ ಮೂಲದ ಮುಸ್ಲಿಮರ ಚಿನ್ನಾಭರಣ ಮಳಿಗೆಗಳಲ್ಲಿ ಹಿಂದೂಗಳು ಚಿನ್ನ ಖರೀದಿಸಬೇಡಿ' ಎಂದು ಶ್ರೀರಾಮ ಸೇನೆ ಅಧ್ಯಕ್ಷ ಪ್ರಮೋದ ಮುತಾಲಿಕ್ ಅವರು ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೇರಳದಲ್ಲಿ 800 ಹಿಂದೂಗಳ ಕೊಲೆಯಾಗಿದೆ. ನೀವು ಅಲ್ಲಿನವರ ಮಳಿಗೆಗಳಲ್ಲಿ ಚಿನ್ನ ಖರೀದಿಸಿದರೆ, ಅದರ ಲಾಭವು ಕೇರಳದ ಮುಸ್ಲಿಂ ಸಂಘಟನೆಗಳಿಗೆ ಹೋಗುತ್ತೆ' ಎಂದು ಎಚ್ಚರಿಸಿದರು.

'ಅಕ್ಷಯ ತೃತೀಯಕ್ಕೆ ಹಿಂದೂಗಳ ಮಳಿಗೆಗಳಲ್ಲಿಯೇ ಚಿನ್ನ ಖರೀದಿಸಿ ಎಂಬ ಟ್ವಿಟರ್ ಅಭಿಯಾನಕ್ಕೆ ಶ್ರೀರಾಮ ಸೇನೆಯ ಸಂಪೂರ್ಣ ಬೆಂಬಲವಿದೆ' ಎಂದು ತಿಳಿಸಿದರು.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಆಪಾದಿತರ ಆಸ್ತಿ ಧ್ವಂಸ ವಿವಾದದ ತಿರುಳೇನು?
ಸಂವಾದ
ಭಾಗವಹಿಸುವವರು:
ರಿಜ್ವಾನ್ ಅರ್ಷದ್, ಕಾಂಗ್ರೆಸ್ ಶಾಸಕ
ಅಶ್ವತ್ಥನಾರಾಯಣಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ, ಬಿಜೆಪಿ
ಯಮುನಾ ಗಾಂವ್ಕರ್, ಸಿಪಿಎಂ ನಾಯಕಿ
ಬೆಳಿಗ್ಗೆ 11 ರಿಂದ 12
ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಎಐಎಂಐಎಂ ಮತ್ತೊಬ್ಬ ಮುಖಂಡ ಬಂಧನ

ಹುಬ್ಬಳ್ಳಿ: ಹಳೇ ಹುಬ್ಬಳ್ಳಿ ಗಲಭೆ ಪ್ರಕರಣಕ್ಕೆ ಸಂಬಂಧಿಸಿ ಎಐಎಂಐಎಂ ಹುಬ್ಬಳ್ಳಿ ಘಟಕದ ಅಧ್ಯಕ್ಷ ದಾದಾಪೀರ್ ಬೆಟಗೇರಿ ಸೇರಿ ಎಂಟು ಜನರನ್ನು ಭಾನುವಾರ ಪೊಲೀಸರು ಬಂಧಿಸಿದ್ದಾರೆ. ಹಳೇ ಹುಬ್ಬಳ್ಳಿಯಲ್ಲಿ ನಿಷೇಧಾಜ್ಞೆ ತೆರವುಗೊಳಿಸಲಾಗಿದೆ.

ದಾದಾಪೀರ್ ಬೆಟಗೇರಿ

ಶನಿವಾರ ಮಹಾನಗರ ಪಾಲಿಕೆಯ ಎಐಎಂಐಎಂ ಸದಸ್ಯ ನಜೀರ್‌ಅಹ್ಮದ್ ಹೊನ್ಯಾಳ ಅವರನ್ನು ಬಂಧಿಸಲಾಗಿತ್ತು. ಗಲಭೆಗೆ ಪ್ರಚೋದನೆ ನೀಡಿದ ಆರೋಪದ ಮೇಲೆ ದಾದಾಪೀರ್ ಬಂಧಿಸಲಾಗಿದ್ದು, ಬಂಧಿತರ ಸಂಖ್ಯೆ 146ಕ್ಕೆ ಏರಿದೆ.

ಮೇಲ್ ಐಡಿ ಜಾಡು ಹಿಡಿದು: ಪ್ರಮುಖ ಆರೋಪಿ ಎನ್ನಲಾದ ವಸೀಂ ಪಠಾಣ್‌ನನ್ನು ವಿಚಾರಣೆಗೆ ಒಳಪಡಿಸಿರುವ ಪೊಲೀಸರು, ಅತನ ಟ್ಯಾಬ್‌ನಿಂದ ಮಹತ್ವದ ಮಾಹಿತಿ ಸಂಗ್ರಹಿಸಿದ್ದಾರೆ.

ವಸೀಂ ಬಂಧನದ ವೇಳೆ ಟ್ಯಾಬ್, ಮೊಬೈಲ್ ಫೋನ್ ವಶಕ್ಕೆ ಪಡೆಯಲಾಗಿತ್ತು. ಟ್ಯಾಬ್ ಬಳಸಿ ಕೆಲವರಿಗೆ ಮೇಲ್ ಕಳುಹಿಸಲಾಗಿದೆ. ಅವರು ಸ್ಥಳೀಯರೇ, ಹೊರಗಿನವರೇ ಎಂಬ ಮಾಹಿತಿ ಕಲೆಹಾಕಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಿಮ್ ಖರೀದಿ: ಗಲಭೆ ನಡೆದ ನಂತರ ವಸೀಂ ಬಳಸುತ್ತಿದ್ದ ಮೊಬೈಲ್ ನಂಬರ್ ಸ್ವಿಚ್ಡ್ ಆಫ್ ಆಗಿದೆ. ಬದಲಾಗಿ ಬೇರೆಯವರ ಹೆಸರಿನಲ್ಲಿ ಎರಡು ಸಿಮ್ ಖರೀದಿಸಿ ಅವುಗಳನ್ನು ಬೇರೆ ಫೋನ್‌ಗೆ ಹಾಕಿಕೊಂಡು ಬಳಕೆ ಮಾಡುತ್ತಿದ್ದ ಎನ್ನಲಾಗಿದೆ.

ಪ್ರಶ್ನೆಪತ್ರಿಕೆ ಸೋರಿಕೆ: ಎಫ್‌ಐಆರ್ ದಾಖಲು

ಬೆಂಗಳೂರು: ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ನೇರ ನೇಮಕಾತಿಗೆ ನಡೆದ ಭೂಗೋಳ ವಿಜ್ಞಾನ ಪರೀಕ್ಷೆಯ ಸುಮಾರು 18 ಪ್ರಶ್ನೆಗಳು ಸೌಮ್ಯಾ ಆರ್. ಎಂಬುವವರ ಮೊಬೈಲ್ ಸಂಖ್ಯೆಯಿಂದ ಬೇರೆ ಬೇರೆ ಮೊಬೈಲ್‌ಗಳಿಗೆ ವಾಟ್ಸ್‌ಆ್ಯಪ್ ಮೂಲಕ ರವಾನೆ ಆಗಿದೆಯೇ ಎಂಬುದರ ತನಿಖೆ ನಡೆಸುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ಅವರು ನೀಡಿದ ದೂರಿನ ಅನ್ವಯ ಮಲ್ಲೇಶ್ವರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಪ್ರಕರಣದಲ್ಲಿ ಮೈಸೂರಿನ ಸೌಮ್ಯಾ ಆರ್. ಅವರನ್ನು ಮೊದಲ ಆರೋಪಿಯಾಗಿ ಹೆಸರಿಸಲಾಗಿದೆ.

ಮಾರ್ಚ್ 14ರಂದು ಭೂಗೋಳ ವಿಜ್ಞಾನ ಪರೀಕ್ಷೆ ನಡೆದಿತ್ತು. ಅಂದು ಬೆಳಿಗ್ಗೆ 8.30ರ ವೇಳೆಗೆ ಸೌಮ್ಯಾ ತನ್ನ ಮೊಬೈಲ್‌ನಿಂದ ವಾಟ್ಸ್‌ಆ್ಯಪ್ ಮೂಲಕ ರವಾನಿಸಿದ್ದ ನಾಲ್ಕು ಚಿತ್ರಗಳಲ್ಲಿ 18 ಬಹು ಆಯ್ಕೆಯ ಪ್ರಶ್ನೆಗಳು ಉತ್ತರದ ಸಹಿತ ಪ್ರಶ್ನೆ ಪತ್ರಿಕೆಯಲ್ಲಿ ಬಂದಿವೆ ಎಂದು ಕೆಲವು ಅಭ್ಯರ್ಥಿಗಳು ಕೆಇಎಗೆ ದೂರು ನೀಡಿದ್ದರು. ಈ ದೂರಿನ ಸತ್ಯಾಸತ್ಯತೆ ತಿಳಿಯಲು ತನಿಖೆ ನಡೆಸುವಂತೆ ರಮ್ಯಾ ಅವರು ದೂರು ನೀಡಿದ್ದರು.

ಬೆಳಗಾವಿಯ ಡಾ.ಬೆಟಗೇರಿ ಕೃಷ್ಣಶರ್ಮ ಟ್ರಸ್ಟ್‌ನ 2021–22ನೇ ಸಾಲಿನ ಪ್ರಶಸ್ತಿಗಳನ್ನು ಡಾ.ಸಿ.ಎನ್‌.ರಾಮಚಂದ್ರನ್ (ವಿಮರ್ಶೆ– ಸಂಶೋಧನೆ), ಪದ್ಮರಾಜ ದಂಡಾವತಿ (ಡಾ.ಬೆಟಗೇರಿ ಕೃಷ್ಣಶರ್ಮ ಪತ್ರಕರ್ತ ಪ್ರಶಸ್ತಿ) ಮತ್ತು ಡಾ.ಎನ್‌.ಆರ್‌. ನಾಯಕ್ (ಜಾನಪದ) ಅವರಿಗೆ ಮೈಸೂರಿನಲ್ಲಿ ಭಾನುವಾರ ಪ್ರದಾನ ಮಾಡಲಾಯಿತು. ಪ್ರಶಸ್ತಿ ತಲಾ ₹ 50 ಸಾವಿರ ನಗದು ಮತ್ತು ಫಲಕ ಒಳಗೊಂಡಿದೆ. ಟ್ರಸ್ಟ್ ಸದಸ್ಯ ಸರಜೂ ಕಾಟ್ಕರ್, ಅಧ್ಯಕ್ಷ ಪ್ರೊ.ರಾಘವೇಂದ್ರ ಪಾಟೀಲ, ಮೈಸೂರು ವಿ.ವಿ ಸಿಂಡಿಕೇಟ್ ಸದಸ್ಯ ಇ.ಸಿ.ನಿಂಗರಾಜಗೌಡ, ಡಾ.ಕಮಲಾ ಹಂಪನಾ, ಮೈಸೂರು ವಿ.ವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಡಾ.ಎಂ.ಜಿ.ಮಂಜುನಾಥ, ಸಂಶೋಧಕ ಡಾ.ಹಂ.ಪ.ನಾಗರಾಜಯ್ಯ ಹಾಗೂ ಕಸಾಪ ಮಾಜಿ ಅಧ್ಯಕ್ಷ ಮನು ಬಳಿಗಾರ್ ಇದ್ದಾರೆ –ಪ್ರಜಾವಾಣಿ ಚಿತ್ರ

ಪರಿಶಿಷ್ಟರಿಗೆ ಆಯುಷ್ಯ ಕಡಿಮೆ

ಒಂದನೇ ಪುಟದಿಂದ

ಆದರೆ, ಮಹಿಳೆಯರ ವಿಚಾರಕ್ಕೆ ಬಂದಾಗ ಪರಿಶಿಷ್ಟ ಪಂಗಡದ ಮಹಿಳೆಯರ ನಿರೀಕ್ಷಿತ ಜೀವಿತಾವಧಿಯು ಪರಿಶಿಷ್ಟ ಜಾತಿಯ ಮಹಿಳೆಯರಿಗಿಂತ ಸ್ವಲ್ಪ ಹೆಚ್ಚು ಇದೆ. ಪರಿಶಿಷ್ಟ ಜಾತಿಯ ಮಹಿಳೆಯರು 67.8 ವರ್ಷ ಬದುಕುತ್ತಾರೆ ಎಂಬ ನಿರೀಕ್ಷೆ ಇದ್ದರೆ, ಪಂಗಡದ ಮಹಿಳೆಯರ ನಿರೀಕ್ಷಿತ ಜೀವಿತಾವಧಿಯು 68 ವರ್ಷ.

ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಜಾತಿಗಳು ಮತ್ತು ಮುಸ್ಲಿಂ ಸಮುದಾಯಕ್ಕೆ ಸೇರಿದ ಮಹಿಳೆಯರ ನಿರೀಕ್ಷಿತ ಜೀವಿತಾವಧಿಯಲ್ಲಿ ವ್ಯತ್ಯಾಸ ಇಲ್ಲ. ಎರಡೂ ವರ್ಗಗಳ ಮಹಿಳೆಯರು 69.4 ವರ್ಷ ಬದುಕುತ್ತಾರೆ ಎಂಬ ನಿರೀಕ್ಷೆ ಇದೆ. ಪ್ರಬಲ ಎಂದು ಪರಿಗಣಿಸಲಾಗುವ ಜಾತಿಗಳ ಮಹಿಳೆಯರು ಇತರ ವರ್ಗಗಳ ಮಹಿಳೆಯರಿಗಿಂತ ಹೆಚ್ಚು ವರ್ಷ ಬದುಕುತ್ತಾರೆ ಎಂಬ ನಿರೀಕ್ಷೆ ಇದೆ. ಇವರ ನಿರೀಕ್ಷಿತ ಜೀವಿತಾವಧಿಯು 72.2 ವರ್ಷ.

ಮಹಿಳೆಯರ ಸರಾಸರಿ ನಿರೀಕ್ಷಿತ ಜೀವಿತಾವಧಿಯು 69.6 ವರ್ಷ ಇದೆ. ಪ್ರಬಲ ಜಾತಿ ಎಂದು ಪರಿಗಣಿತವಾದ ಜಾತಿಗಳ ಮಹಿಳೆಯರು ಬದುಕುವ ಅವಧಿಯು ಇದಕ್ಕಿಂತಲೂ 2.6 ವರ್ಷ ಹೆಚ್ಚು. ಅತ್ಯಂತ ಕಡಿಮೆ ನಿರೀಕ್ಷಿತ ಜೀವಿತಾವಧಿ ಇರುವ ಪರಿಶಿಷ್ಟ ಜಾತಿಯ ಮಹಿಳೆಯರಿಗಿಂತ ಪ್ರಬಲ ಎಂದು ಪರಿಗಣಿಸಲಾಗುವ ಮಹಿಳೆಯರ ನಿರೀಕ್ಷಿತ ಜೀವಿತಾವಧಿಯು 4.4 ವರ್ಷ ಹೆಚ್ಚು ಎಂದು ಅಂದಾಜಿಸಲಾಗಿದೆ.

ಮೈಸೂರು ಭಾಗದ ವಿವಿಧೆಡೆ ಮಳೆ

ಮೈಸೂರು: ಮೈಸೂರು ಜಿಲ್ಲೆಯ ತಲಕಾಡು ಹೋಬಳಿಯ ವಿವಿಧೆಡೆ ಭಾನುವಾರ ಗುಡುಗು ಸಮೇತ ಮಳೆಯಾಗಿದೆ.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಬೆಳಕವಾಡಿ ಆಸುಪಾಸು, ಚಾಮರಾಜನಗರ ಜಿಲ್ಲೆಯ ಯಳಂದೂರಿನಲ್ಲಿ ಮಳೆಯಾಗಿದೆ.

ಹನೂರು ತಾಲ್ಲೂಕಿನಲ್ಲಿ ಶನಿವಾರ ರಾತ್ರಿ ಗಾಳಿಗೆ ಕೆವಿಎನ್ ದೊಡ್ಡಿ ಗ್ರಾಮದಲ್ಲಿ ರೇಷ್ಮೆ ಸಾಕಣೆ ಶೆಡ್ ನೆಲಕ್ಕುರುಳಿದೆ.

ಒಳನೋಟ

'ಬರಡಾಗುವತ್ತ ಭತ್ತದ ನೆಲ'

ಬೆಂಗಳೂರು:'ಬರಡಾಗುವತ್ತ ಭತ್ತದ ನೆಲ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಏ.24) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಭೂಮಿ ಉಳಿಯಬೇಕು

ಕೃಷಿಕರು ಮುಂದೆ ಆಗುವ ಅನಾಹುತದ ಅರಿವಿದ್ದರೂ ಭತ್ತ ಬೆಳೆದಿರುವುದು ದುರಂತವೇ ಸರಿ. ಅತಿಯಾದ ಸೋಡಿಯಂ ಮತ್ತು ಕ್ಯಾಲ್ಸಿಯಂ ಮನುಷ್ಯನ ಒಡಲನ್ನು ಸೇರಿ ದೇಹವನ್ನೇ ರೋಗದ ಕೂಪಕ್ಕೆ ತಳ್ಳುವಾಗ ಭೂಮಿಯ ಒಡಲನ್ನು ಬಿಟ್ಟಿತೇ? ಈಗಲೂ ಕಾಲ ಮಿಂಚಿಲ್ಲ. ಆರೋಗ್ಯ ಭೂಮಿಯನ್ನು ಮುಂದಿನ ಪೀಳಿಗೆಗೆ ಉಳಿಸಿಕೊಡುವ ಕಾರ್ಯ ನಡೆಯಲಿ.

ಕಾವ್ಯಶ್ರೀ, ಬೆಂಗಳೂರು

ರೈತರಿಗೆ ಮಾರ್ಗದರ್ಶನ ಇಲ್ಲ

ರಾಯಚೂರು ಭಾಗ ಮೊದಲಿನಂತೆ ಭತ್ತದ ನಾಡಾಗಿ ಉಳಿದಿಲ್ಲ. ಕೃಷಿಕರಿಗೆ ಸರಿಯಾದ ಮಾರ್ಗದರ್ಶನವಿಲ್ಲದೆ ಹೊಲಕ್ಕೆ ಅತಿಯಾದ ನೀರು ಹರಿಸುವುದು, ರಾಸಾಯನಿಕಗಳನ್ನು ಹಾಕುತ್ತಾರೆ. ಸರ್ಕಾರ ಜಲಾನಯನ ಭಾಗದಲ್ಲಿ ಸಮೀಕ್ಷೆ ನಡೆಸಿ, ಆ ಭಾಗಕ್ಕೆ ಸೂಕ್ತ ಬೆಳೆಗಳನ್ನು ಬೆಳೆಯಲು ಮಾರ್ಗದರ್ಶನ ನೀಡಬೇಕು. ರೈತರು ಇಳುವರಿಗೆ ಪೂರಕವಾದ ಬೆಳೆ ಪದ್ಧತಿಯನ್ನು ರೂಢಿಸಿಕೊಳ್ಳಬೇಕು.

ಆಂಜನೇಯ ಭೂಮನಗುಂಡ, ರಾಯಚೂರು

ರೈತರು ಎಚ್ಚೆತ್ತುಕೊಳ್ಳಲಿ

ಜಲಾನಯನ ಪ್ರದೇಶಗಳು ಸವಳು ಭೂಮಿಯಾಗಿ ಪರಿವರ್ತನೆ ಆಗುತ್ತಿದ್ದು, ಈಗಲಾದರೂ ನಾವೆಲ್ಲ ಎಚ್ಚೆತ್ತುಕೊಳ್ಳಬೇಕು. ರೈತರು ಸಾಂಪ್ರದಾಯಿಕ ಕೃಷಿ ವಿಧಾನ ಕೈಬಿಟ್ಟು, ಸಾವಯವ ಹಾಗೂ ಆಧುನಿಕ ಮಿಶ್ರ ಬೇಸಾಯ ಪದ್ಧತಿಗಳನ್ನು ರೂಢಿಸಿಕೊಳ್ಳಬೇಕು. ಇದಕ್ಕೆ ಪೂರಕವಾದ ವ್ಯವಸ್ಥೆಗಳನ್ನು ಸರ್ಕಾರ ಕಲ್ಪಿಸಬೇಕು. ಆಗ ಮಾತ್ರ ಕೃಷಿ ಕ್ಷೇತ್ರ ಅಭಿವೃದ್ಧಿ ಹೊಂದಲು ಸಾಧ್ಯ.

ಚಂದ್ರಶೇಖರ, ಗದಗ

ರಾಸಾಯನಿಕ ರಹಿತ ಕೃಷಿಗೆ ಮುಂದಾಗಿ

'ಒಳನೋಟ'ದ ಲೇಖನ ಮುಂದಿನ ಅಪಾಯದ ಬಗ್ಗೆ ಮುನ್ಸೂಚನೆ ನೀಡುವಂತಿದೆ. ರಾಷ್ಟ್ರೀಯ ಮಣ್ಣು ಸರ್ವೇಕ್ಷಣಾ ಮತ್ತು ಭೂಬಳಕೆ ಯೋಜನಾ ಸಂಸ್ಥೆ ಸಮೀಕ್ಷೆ ನಡೆಸಿ ಮುಂದಾಗುವ ದುರಂತದ ಎಚ್ಚರಿಕೆ ನೀಡಿದ್ದರೂ, ಅದನ್ನು ಪರಿಗಣಿಸದಿರುವುದು ದೊಡ್ಡ ಲೋಪ. ಇದು ರೈತರು ಮಾತ್ರವಲ್ಲದೆ, ಗ್ರಾಹಕರಾಗಿರುವ ಸಾಮಾನ್ಯ ಜನರಿಗೂ ಕಣ್ತೆರೆಸುವ ಲೇಖನ. ರಾಜ್ಯದ ಜಲಾಶಯ ಆಶ್ರಿತ ಕೃಷಿಕರು ಈಗಲಾದರೂ ರಾಸಾಯನಿಕರಹಿತ ಕೃಷಿ ಪದ್ಧತಿಗಳತ್ತ ಮುಖ ಮಾಡಬೇಕು.

ವಾಸು ಶ್ರೀನಿವಾಸ್, ಮುಳಬಾಗಿಲು

ಭವಿಷ್ಯದ ಚಿಂತನೆ ಅಗತ್ಯ

ಬೆಳೆಗಳಿಗೆ ಪೋಷಕಾಂಶಗಳ ಕೊರತೆ ಹಾಗೂ ಮಿತಿಯಿಲ್ಲದೆ ರಸಗೊಬ್ಬರ ಬಳಸಿದ್ದರಿಂದ ಮಣ್ಣಿನ ರಚನೆ ಹಾಳಾಗಿ, ನಿರೀಕ್ಷಿತ ಬೆಳೆ ಬಾರದೆ ರೈತರು ನಷ್ಟದಲ್ಲಿ ಸಿಲುಕುವಂತಾಗಿದೆ. ಸರ್ಕಾರ ಈಗ ರೈತರನ್ನು ರಕ್ಷಿಸುವ ಕೆಲಸಕ್ಕೆ ಮುಂದಾದರೆ, ರೈತರಿಂದಾಗಿ ಭವಿಷ್ಯವೂ ಉಳಿಯಲಿದೆ. ಭವಿಷ್ಯದ ಉಳಿವು ನಮ್ಮ ಕೈಯಲ್ಲೇ ಇದೆ.

ಗಂಗಾಂತರಂಗ, ಚಿತ್ರದುರ್ಗ

'ಧರ್ಮದ ಹೆಸರಿನ ಹೋರಾಟ ಆತಂಕಕಾರಿ'

ಹಾಸನ: 'ದೇಶದಲ್ಲಿ ಪ್ರತಿನಿತ್ಯ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಜಗಳ, ಹೋರಾಟ ಹಾಗೂ ಗಲಾಟೆ ಆತಂಕಕಾರಿ ಬೆಳವಣಿಗೆ' ಎಂದು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಭಾನುವಾರ ಬೇಸರ ವ್ಯಕ್ತಪಡಿಸಿದರು.

ಇಲ್ಲಿ ನಡೆದ ಶಿವಕುಮಾರ ಸ್ವಾಮೀಜಿ 115ನೇ ಜಯಂತಿ, ತಣ್ಣೀರುಹಳ್ಳ ಮಠಾಧೀಶ ಲಿಂಗೈಕ್ಯ ಶಿವಲಿಂಗ ಸ್ವಾಮೀಜಿಯ 88ನೇ ಜಯಂತಿ, ತಣ್ಣೀರುಹಳ್ಳ ಮಠಾಧೀಶ ವಿಜಯಕುಮಾರ ಸ್ವಾಮೀಜಿ ನಿರಂಜನ ನಿರಾಭಾರಿ ಜಂಗಮ ಪಟ್ಟಾಧಿಕಾರ ಅಷ್ಟ ಮಾಸ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

'ಯಾವುದು ಎಲ್ಲರನ್ನು ಸೇರಿಸುತ್ತದೋ ಅದು ಧರ್ಮ. ವಿಭಜನೆ ಮಾಡುತ್ತದೆಯೋ ಅದು ಅಧರ್ಮ. ಧರ್ಮದ ಬಗ್ಗೆ ವಾದ ಮಾಡುವುದೇ ತಪ್ಪು' ಎಂದರು.

ಸಂಕ್ಷಿಪ್ತ ಸುದ್ದಿ

ದೇವೇಗೌಡರಿದ್ದ ಹೆಲಿಕಾಪ್ಟರ್ ಬಳಿ ಡ್ರೋನ್ ಹಾರಾಟ

ದಾಬಸ್‌ಪೇಟೆ: ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡರು ಇದ್ದ ಹೆಲಿಕಾಪ್ಟರ್ ಬಳಿಯೇ ಡ್ರೋನ್ ಹಾರಾಟ ನಡೆಸಿದ್ದರಿಂದ ಭಾನುವಾರ ಕೆಲ ಕಾಲ ಆತಂಕ ಸೃಷ್ಟಿಯಾಯಿತು.

ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ದೇವೇಗೌಡರು ಇಲ್ಲಿಗೆ ಸಮೀಪದ ನಿಡವಂದಕ್ಕೆ ಬಂದಿದ್ದರು. ಗ್ರಾಮದಲ್ಲಿ ನಿರ್ಮಿಸಲಾಗಿದ್ದ ಹೆಲಿಪ್ಯಾಡ್‌ನಲ್ಲಿ ಅವರು ಹೆಲಿಕಾಪ್ಟರ್‌ನಿಂದ ಇಳಿಯುವ ಸಂದರ್ಭದಲ್ಲೇ ಡ್ರೋನ್‌ವೊಂದು ಸಮೀಪದಲ್ಲಿ ಹಾರಾಟ ನಡೆಸಿತು.

ಭದ್ರತಾ ಸಿಬ್ಬಂದಿ ತಕ್ಷಣವೇ ಡ್ರೋನ್ ಹಾರಾಟ ನಡೆಸುತ್ತಿದ್ದ ವ್ಯಕ್ತಿಯನ್ನು ಪತ್ತೆ ಮಾಡಿ, ಹಾರಾಟವನ್ನು ನಿಲ್ಲಿಸುವಂತೆ ಸೂಚಿಸಿದರು. ಡ್ರೋನ್ ಹಾರಾಟ ನಿಂತ ಬಳಿಕ ದೇವೇಗೌಡರು ಹೆಲಿಕಾಪ್ಟರ್‌ನಿಂದ ಕೆಳಗಿಳಿದು, ಕಾರ್ಯಕ್ರಮಕ್ಕೆ ತೆರಳಿದರು.

ರಥಕ್ಕೆ ಸಿಲುಕಿ ಸಾವು

ವಾಡಿ (ಕಲಬುರಗಿ ಜಿಲ್ಲೆ): ಚಿತ್ತಾಪುರ ತಾಲ್ಲೂಕಿನ ರಾವೂರು ಗ್ರಾಮದಲ್ಲಿ ಭಾನುವಾರ ಸಂಜೆ ಸಿದ್ಧಲಿಂಗೇಶ್ವರ ಸಂಸ್ಥಾನ ಮಠದ ರಥೋತ್ಸವದ ವೇಳೆ ರಥದ ಚಕ್ರಕ್ಕೆ ಯುವಕನೊಬ್ಬ ಮೃತಪಟ್ಟು, ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ರಾವೂರು ಗ್ರಾಮದ ಲಕ್ಷ್ಮಿಕಾಂತ ವೆಂಕಪ್ಪ ಕೆಸಬಾಳ (25) ಮೃತರು. ಅದೇ ಗ್ರಾಮದ ನಿವಾಸಿಗಳಾದ ಯಂಕಪ್ಪ ನಾಗಪ್ಪ ರಾಮಪಲ್ಲಿ ಮತ್ತು ಭೀಮಾಶಂಕರ ಹೊಸಮನಿ (30) ಗಾಯಗೊಂಡಿದ್ದಾರೆ ಎಂದು ವಾಡಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ನಕಲಿ ಜಾತಿ ಪ್ರಮಾಣಪತ್ರ ಕ್ರಮಕ್ಕೆ ಸ್ವಾಮೀಜಿ ಆಗ್ರಹ

ಶಿವಮೊಗ್ಗ: 'ಪರಿಶಿಷ್ಟ ಜಾತಿ ಹೆಸರಿನಲ್ಲಿ ನಕಲಿ ಜಾತಿ ಪ್ರಮಾಣಪತ್ರ ಪಡೆದವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಇಲ್ಲದಿದ್ದರೆ ಹೋರಾಟ ನಡೆಸಬೇಕಾಗುತ್ತದೆ' ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಎಚ್ಚರಿಸಿದರು.

ಇಲ್ಲಿನ ಎನ್‌ಇಎಸ್ ಮೈದಾನದಲ್ಲಿ ಭಾನುವಾರ ನಡೆದ ಭೋವಿ ಸಮಾಜದ ಜಿಲ್ಲಾ ಸಮಾವೇಶದಲ್ಲಿ ಅವರು, 'ವೀರಶೈವ ಸಮುದಾಯದ ಕೆಲವರು ಬೇಡ ಜಂಗಮ ಹೆಸರಿನಲ್ಲಿ ಪ್ರಮಾಣಪತ್ರ ಪಡೆಯುತ್ತಿರುವುದು ಹೆಚ್ಚುತ್ತಿದೆ. ಇವುಗಳನ್ನು ರದ್ದುಪಡಿಸಬೇಕು. ಈ ಸಂಬಂಧ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಬೆಲ್ಲದ– ಸಿ.ಎಂ ಭೇಟಿ: ಚರ್ಚೆಗೆ ಗ್ರಾಸ

ಹುಬ್ಬಳ್ಳಿ: ಸಚಿವ ಸ್ಥಾನದ ಆಕಾಂಕ್ಷಿ, ಧಾರವಾಡ ಪಶ್ಚಿಮ ಕ್ಷೇತ್ರದ ಶಾಸಕ ಅರವಿಂದ ಬೆಲ್ಲದ ಅವರ ಮನೆಗೆ ಭಾನುವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭೇಟಿ ನೀಡಿದ್ದು, ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ಬೆಲ್ಲದ ಅವರ ಮನೆಯಲ್ಲಿ ಅರ್ಧಗಂಟೆಗೂ ಹೆಚ್ಚು ಸಮಯ ಕಳೆದರು. ಅಲ್ಲಿಯೇ ಉಪಾಹಾರ ಸವಿದರು. ಈ ಬಗ್ಗೆ ಪ್ರತಿಕ್ರಿಯಿಸಿದ ಬೊಮ್ಮಾಯಿ, 'ರಾಜಕೀಯ ಚರ್ಚಿಸಲು ಬಂದಿಲ್ಲ. ವ್ಯಾಪಾರದ ಬಗ್ಗೆ ಚರ್ಚಿಸಿದ್ದೇವೆ. ಇದು ಔಪಚಾರಿಕ ಭೇಟಿ' ಎಂದರು.

ಬೆಲ್ಲದ ಅವರು, 'ರಾಜಕೀಯ ಚರ್ಚಿಸಿಲ್ಲ. ನನ್ನನ್ನು ಮಂತ್ರಿ ಮಾಡುವುದು ಹೈಕಮಾಂಡ್‌ಗೆ ಬಿಟ್ಟದ್ದು' ಎಂದು ಪ್ರತಿಕ್ರಿಯಿಸಿದರು.

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಕಲಿಕಾ ಸಾಮರ್ಥ್ಯ ವೃದ್ಧಿಗೆ 'ಪಠ್ಯೇತರ' ಟಾನಿಕ್

ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ ಮಕ್ಕಳು, ಪೋಷಕರಿಗೆ ಸಲಹೆ

ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಮಕ್ಕಳಿಗೆ ಪಠ್ಯ, ಪರೀಕ್ಷೆ ಜೊತೆಗೆ ಪಠ್ಯೇತರ ಚಟುವಟಿಕೆಯೂ ಅಗತ್ಯ ಎಂಬ ವಿಷಯದ ಬಗ್ಗೆ ಕಳೆದ ವಾರದ ಲೇಖನದಲ್ಲಿ ವಿವರಿಸಲಾಗಿತ್ತು. ಇಂದಿನ ಲೇಖನದಲ್ಲಿ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗೆ ಎಷ್ಟು ಸಮಯ ಮೀಸಲಿಡಬೇಕು, ಎರಡನ್ನೂ ಹೇಗೆ ನಿರ್ವಹಿಸಬೇಕು ಎಂಬುದರ ಬಗ್ಗೆ ತಜ್ಞರ ಅನಿಸಿಕೆಗಳು ಏನು ಎಂದು ತಿಳಿಯೋಣ.

ವೆಂಕಟಸುಬ್ಬರಾವ್. ವಿ

ಭಾಗ – 2

ಕಳೆದ ಸಂಚಿಕೆಯ ಲೇಖನದಲ್ಲಿ ತಜ್ಞರು, ದ್ವಿತೀಯ ಪಿಯುಸಿ- ಎಸ್ಸೆಸ್ಸೆಲ್ಸಿ ಓದುವ ಮಕ್ಕಳು ಓದಿನ ಜೊತೆಗೆ, ಪಠ್ಯೇತರ ಚಟುವಟಿಕೆಗಳಲ್ಲೂ ತೊಡಗಿ ಕೊಳ್ಳಬೇಕು ಎಂದು ಸಲಹೆ ನೀಡಿದ್ದರು. ಅವರು ಹೇಳುವುದೇನೋ ಸರಿ. ಆದರೆ, ಆ ಚಟುವಟಿಕೆಗಳಿಂದ ವಿದ್ಯಾರ್ಥಿಗಳ ಕಲಿಕೆಯ ಏಕಾಗ್ರತೆಗೆ ಭಂಗ ಬರುವುದಿಲ್ಲವೇ? ಸಮಯದ ಅಭಾವವಾಗುವುದಿಲ್ಲವೇ' ಎಂಬುದು ಕೆಲವು ಪೋಷಕರ ಪ್ರಶ್ನೆ.

ಈ ಪ್ರಶ್ನೆಗೆ ಬೆಂಗಳೂರಿನ ಸುರಾನಾ ವಿದ್ಯಾಲಯದ ಪ್ರಾಚಾರ್ಯ ಸಂದೀಪ್ ಪೈ ಹೀಗೆ ಹೇಳುತ್ತಾರೆ; 'ನೋಡಿ, ಮಕ್ಕಳು ಎಷ್ಟು ಹೊತ್ತು ಓದುತ್ತಾರೆ ಎನ್ನುವುದು ಮುಖ್ಯವಲ್ಲ, ಓದಿದ್ದು ಸಮರ್ಪಕವಾಗಿ ಅರ್ಥವಾಗಿ, ನೆನಪಿನಲ್ಲಿ ಉಳಿಯುವ ಹಾಗೆ ಓದುವಂತೆ ಮಕ್ಕಳಿಗೆ ತಿಳಿವಳಿಕೆ ನೀಡಬೇಕು. ಶಿಕ್ಷಕರು/ಪೋಷಕರು ಆ ಓದುವ ತಂತ್ರ/ವಿಧಾನವನ್ನು ಹೇಳಿಕೊಡಬೇಕು. ಮಕ್ಕಳೂ ಅದನ್ನು ಅನುಸರಿಸಬೇಕು. ವೇಳಾಪಟ್ಟಿಯ ಪ್ರಕಾರ ಓದುತ್ತಾ, ಓದಿದ್ದನ್ನು ಅರ್ಥಮಾಡಿಕೊಳ್ಳುತ್ತಾ, ನೋಟ್ಸ್ ಮಾಡಿಟ್ಟುಕೊಂಡರೆ, ಖಂಡಿತಾ ಸಮಯ ಉಳಿಯುತ್ತದೆ. ಆ ಸಮಯವನ್ನೇ ಜನರೊಟ್ಟಿಗೆ ಬೆರೆಯಲು, ಸಮಾರಂಭಗಳಲ್ಲಿ ಭಾಗವಹಿಸುವುದಕ್ಕೆ ಬಳಸಿ. ಇವೆಲ್ಲ ನಿಮ್ಮ ಕಲಿಕೆಯ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ. ಯಾವುದೇ ಪಠ್ಯೇತರ ಚಟುವಟಿಕೆಗಳು ತಿಂಗಳಿಗೊಮ್ಮೆ ಇದ್ದರೆ ಸಾಕು'.

ಏಕಾಗ್ರತೆಗೆ ಭಂಗ ತರುವುದು ಜನರೊಡನೆ ಬೆರೆಯುವುದರಿಂದಲ್ಲ, ಸಮಾರಂಭಗಳಲ್ಲಿ ಪಾಲ್ಗೊಳ್ಳುವು ದರಿಂದಲ್ಲ. ಬದಲಿಗೆ ಮೊಬೈಲ್, ಟಿ.ವಿಯಂತಹ ಗ್ಯಾಜೆಟ್ ಗಳ ಬಳಕೆಯಿಂದ. ಈ ದೃಶ್ಯ ಮಾಧ್ಯಮಗಳು ಓದಿದ ವಿಷಯಗಳ ಸ್ಥಳವನ್ನು ಆಕ್ರಮಿಸಿ, ವಿಷಯಗಳನ್ನು ಮರೆಯುವಂತೆ ಮಾಡಬಹುದು. ಹಾಗಾಗಿ, ಅವುಗಳಿಂದ ದೂರವಿರಬೇಕು.

'ಪಠ್ಯೇತರ ಚಟುವಟಿಕೆಗಳು, ತರಗತಿಯಲ್ಲಿ ಕಲಿತ ಪಾಠಗಳನ್ನು ಗಟ್ಟಿಯಾಗಿ ಮನಸ್ಸಿನಲ್ಲಿ ಉಳಿಸಲು ನೆರವು ನೀಡುತ್ತವೆ. ಪ್ರಾಯೋಗಿಕವಾಗಿ ತರಗತಿಯಲ್ಲಿ ಕಲಿತ ವಿಷಯಗಳನ್ನು, ಕೌಶಲಗಳನ್ನು, ವಾಸ್ತವಕ್ಕೆ ಅನ್ವಯಿಸಲು ಅವಕಾಶವನ್ನೂ, ಆತ್ಮವಿಶ್ವಾಸ ವನ್ನೂ ನೀಡುತ್ತವೆ' ಎನ್ನುತ್ತಾರೆ ವೇದಾಂತ ಪದವಿಪೂರ್ವ ಕಾಲೇಜಿನ ಕಾರ್ಯದರ್ಶಿ ಹಾಗೂ ತರಬೇತುದಾರರಾದ ದಿವಾಕರ್.

ಈ ಕಾರಣಕ್ಕೇ ಪಠ್ಯೇತರ ವಿಷಯಗಳು ಸುಸಜ್ಜಿತ ಶಿಕ್ಷಣದ ಭಾಗವೇ ಆಗಿವೆ. ಇದರಿಂದ ವಿದ್ಯಾರ್ಥಿಗಳಿಗೆ ಸಂಘಟನೆ, ಸಮಯ ನಿರ್ವಹಣೆ, ಟೀಮ್ ವರ್ಕ್‌ನಂತಹ ಜೀವನಾವಶ್ಯಕ ಕೌಶಲಗಳನ್ನು ಕಲಿಯಲು ಸಾಧ್ಯವಾಗುತ್ತದೆ. ಆದರೆ, ಪಠ್ಯ ಮತ್ತು ಪಠ್ಯೇತರ ವಿಷಯಗಳ ಸರಿಯಾದ ಮಿಶ್ರಣವಿರಬೇಕು ಎಂದು ಅವರು ಸಲಹೆ ನೀಡುತ್ತಾರೆ.

ಆಹಾರ, ವ್ಯಾಯಾಮ 'ಪಠ್ಯೇತರ'ದ ಭಾಗ

ಮಕ್ಕಳು ಓದುವ ಜೊತೆಗೆ, ಏಕಾಗ್ರತೆಗಾಗಿ ಯೋಗ, ಪ್ರಾಣಾಯಾಮ ಅಗತ್ಯ. ನಿಗದಿತವಾಗಿ ಅನುಲೋಮ, ವಿಲೋಮದಂತಹ ಪ್ರಾಣಾಯಾಮಗಳನ್ನು ಮಾಡಿ. ದೀರ್ಘ ಉಸಿರಾಟ ಏಕಾಗ್ರತೆ, ಆತಂಕ ಕಡಿಮೆ ಮಾಡಿ, ಆರೋಗ್ಯವನ್ನು ಕಾಪಾಡುತ್ತದೆ. ಈ ಎಲ್ಲ ಚಟುವಟಿಕೆಗಳು ಪಠ್ಯೇತರದ ಭಾಗವಾಗಿರಲಿ ಎನ್ನುತ್ತಾರೆ ಸಂದೀಪ್ ಪೈ.

ಇಂಥ ಚಟುವಟಿಕೆಗಳ ಜೊತೆಗೆ, ಆಹಾರ ಸೇವನೆ ಬಗ್ಗೆಯೂ ಗಮನಹರಿಸುವುದು ಮುಖ್ಯ. ಬಹಳಷ್ಟು ಮಕ್ಕಳಿಗೆ, ಓದಿನ ನಡುವೆ ಏನಾದರೂ ತಿನ್ನಬೇಕೆನಿಸುತ್ತಿರುತ್ತದೆ. ಪೋಷಕರೂ ಮಕ್ಕಳಿಗೆ ಆಗಾಗೆ ತಿನಿಸುಗಳನ್ನು ನೀಡುತ್ತಾರೆ. ಆದರೆ, ಮಕ್ಕಳಿಗೆ ಕೊಡುವ ಆಹಾರ ಆರೋಗ್ಯಪೂರ್ಣವಾಗಿರಲಿ. ಓದುವುದಕ್ಕೆ ಚೈತನ್ಯ ತುಂಬುವಂತಿರಲಿ. ಪ್ರೊಟೀನ್ ಅಂಶವಿರುವ ಒಣಹಣ್ಣುಗಳು, ನೀರಿನಂಶವಿರುವ ಹಣ್ಣು, ತರಕಾರಿಗಳನ್ನು ನಿಯಮಿತವಾಗಿ ಕೊಡಿ.

ನಿಮಗೆ ಆಸಕ್ತಿಯಿರುವ ಯಾವುದಾದರೂ ಒಂದು ಆಟ ಅಥವಾ ಇನ್ನಾವುದೇ ಚಟುವಟಿಕೆಯನ್ನು ಆರಿಸಿಕೊಳ್ಳಿ. ನಿಮ್ಮ ಓದಿನ ವೇಳಾಪಟ್ಟಿಯಲ್ಲಿ ಅದನ್ನು ಸೇರಿಸಿಕೊಳ್ಳಿ. ಉದಾಹರಣೆಗೆ, ನಿಮಗೆ, ಸಂಗೀತದಲ್ಲಿ ಆಸಕ್ತಿಯಿದ್ದರೆ, ಪ್ರತಿದಿನ ವೇಳಾಪಟ್ಟಿಯಂತೆ, ನಿರ್ದಿಷ್ಟ ಸಮಯವನ್ನು ಸಂಗೀತಕ್ಕೆ ಮೀಸಲಿಡಿ. ಆದರೆ, ಸಮಯದ ಮಿತಿಯ ಅರಿವಿರಲಿ.

ವೈದ್ಯ ಹಾಗೂ ಮನಶಾಸ್ತ್ರಜ್ಞರಾದ ಡಾ. ಅಲ್ಕಾಕಿನ್ರಾ ಹೇಳುತ್ತಾರೆ, 'ನಿರಂತರವಾಗಿ ಓದಿದ್ದು ನೆನಪಿನಲ್ಲಿ ಉಳಿಯುವುದಿಲ್ಲ. ನಡು ನಡುವೆ ಓದಿಗೆ ಬಿಡುವು ಕೊಟ್ಟು ನಿಮಗೆ ಇಷ್ಟದ ಚಟುವಟಿಕೆಯಲ್ಲಿ ತೊಡಗಿಕೊಳ್ಳಬೇಕು. ಸಣ್ಣ-ಪುಟ್ಟ ವ್ಯಾಯಾಮ ಮಾಡಬಹುದು (ನಡಿಗೆ, ವೇಗದ ನಡಿಗೆಯಾದರೂ ಆದೀತು). ಇದರಿಂದ ಮಿದುಳು ಚಟುವಟಿಕೆಯಿಂದ ಇರುತ್ತದೆ. ಸ್ಮರಣಶಕ್ತಿ ಮತ್ತು ಓದುವ ಆಸಕ್ತಿಯೂ ಹೆಚ್ಚುತ್ತದೆ'

ನಾವು ಬಾಲ್ಯದಲ್ಲಿ ಹೀಗೆ ಮಾಡುತ್ತಿದ್ದೆವು. ಸುಮಾರು ಒಂದು ಗಂಟೆಯ ಓದಿನ ನಂತರ, ಮನೆಯಿಂದ ಆಚೆಗೆ ಓಡಿಬಂದು, ಎರಡು ಮೂರು ನಿಮಿಷಯಾವುದಾದರೂ (ಕ್ರಿಕೆಟ್, ಲಗೋರಿ ಇತ್ಯಾದಿ) ಆಟವಾಡಿ ಮತ್ತೆ ಓದಲು ತೊಡಗುತ್ತಿದ್ದೆವು. ಇದರಿಂದ ನಾವು ಹೆಚ್ಚು ಹೊತ್ತು ಓದಿನ ಕಡೆಗೆ ಗಮನ ಕೊಡಲು ಆಗುತ್ತಿತ್ತು.

ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳು ಜೀವನದ ನಿರ್ಣಾಯಕ ಘಟ್ಟಗಳು, ಹೌದು. ಹೆಚ್ಚು ಓದಲೇಬೇಕು, ನಿಜ. ಆದರೆ ಇದರ ಜೊತೆಯಲ್ಲಿ ಸರಿಯಾದ ರೀತಿಯಲ್ಲಿ ಸಮಯದ ನಿರ್ವಹಣೆಯನ್ನು ಮಾಡುತ್ತಾ, ಆಟ-ಪಾಠ ಎರಡಕ್ಕೂ ಸರಿಯಾಗಿ ಆದ್ಯತೆ ನೀಡಿದರೆ, ಪರೀಕ್ಷೆಯ ಆತಂಕವೂ ಕಡಿಮೆಯಾಗುತ್ತದೆ, ಕಾರ್ಯಕ್ಷಮತೆಯೂ ಹೆಚ್ಚುತ್ತದೆ.

(ಲೇಖಕರು: ನಿರ್ದೇಶಕರು, ಸ್ಮಾರ್ಟ್ ಸೆರೆಬ್ರಮ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು)

ಅರ್ಥ ಮಾಡಿಕೊಂಡು ಓದುವುದು ಮುಖ್ಯ

ನಾವು ಗಮನಿಸಿದಂತೆ, ಕೆಲವು ಮಕ್ಕಳು ನಿತ್ಯ ದೀರ್ಘಕಾಲ ಓದುತ್ತಾರೆ. ಆದರೆ, ಪರೀಕ್ಷೆಯಲ್ಲಿ ಕಡಿಮೆ ಅಂಕಗಳನ್ನು ಪಡೆಯುತ್ತಾರೆ. ಇದಕ್ಕೆ ಏಕಾಗ್ರತೆ ಕೊರತೆಯೋ, ಪಾಠ ಅರ್ಥವಾಗವುದಿಲ್ಲವೋ ಅಥವಾ ಇನ್ನಾವ ಕಾರಣವೋ ಗೊತ್ತಿಲ್ಲ. ಆದರೆ ಕೆಲವು ಮಕ್ಕಳು, ಕಡಿಮೆ ಸಮಯ ಓದಿದರೂ, ಪಾಠವನ್ನು ಸರಿಯಾಗಿ ಅರ್ಥೈಸಿಕೊಂಡು ಓದುವುದರಿಂದ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯತ್ತಾರೆ. ಈ ಅಂಶಗಳನ್ನು ಎಸ್ಸೆಸ್ಸೆಲ್ಸಿ–ದ್ವಿತೀಯ ಪಿಯುಸಿ ಓದುವ ವಿದ್ಯಾರ್ಥಿಗಳು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಎಷ್ಟು ಹೊತ್ತು ಓದುತ್ತೇವೆನ್ನುವುದು ಮುಖ್ಯವಲ್ಲ, ಓದಿದ್ದು ಸಮರ್ಪಕವಾಗಿ ಅರ್ಥವಾಗಿ, ನೆನಪಿನಲ್ಲಿ ಉಳಿಯುವಂತೆ ಓದಬೇಕು.

ರಜೆ ಶಾಲೆಗಷ್ಟೆ; ಓದಿಗಲ್ಲ...

ಬೇಸಿಗೆ ರಜೆಯಲ್ಲಿ ಒಂದೂವರೆ ತಿಂಗಳ ಕಾಲ ಮಕ್ಕಳು ಓದು–ಬರಹದಿಂದ ದೂರವಿರುವ ಕಾರಣ ಪುನಃ ಕಲಿಕೆಯ 'ಹಳಿ'ಗೆ ಮರಳಲು ಬಹಳ ಸಮಯ ಹಿಡಿಯುತ್ತದೆ. ಹಾಗಾಗಿ ಮಕ್ಕಳು ರಜೆಯಲ್ಲೂ ಆಡುತ್ತಾ–ನಲಿಯುತ್ತಾ ಓದು – ಬರಹ ಮುಂದುವರಿಸಲಿ.

ಸದಾಶಿವ ಸೊರಟೂರು

ಬೇಸಿಗೆಯ ರಜಾ ದಿನಗಳು ಆರಂಭವಾಗಿವೆ. ಮಕ್ಕಳಿಗೆ ಪೋಷಕರೊಂದಿಗೆ ಕಾಲ ಕಳೆಯುವ ಅವಕಾಶ. ಇವುಗಳ ಮಧ್ಯೆಯೂ ಕೆಲವು ಪೋಷಕರು ಮಕ್ಕಳನ್ನು ಬೇಸಿಗೆ ಶಿಬಿರಕ್ಕೆ ಕಳುಹಿಸುತ್ತಾರೆ. ಅವುಗಳು ಎಷ್ಟರಮಟ್ಟಿಗೆ ಉಪಯೋಗವಾಗುತ್ತಿವೆ ಎಂಬುದು ಇನ್ನಷ್ಟೇ ಗೊತ್ತಾಗಬೇಕಿದೆ.

ಇನ್ನೂ ಶಾಲೆಯ ವಿಚಾರಕ್ಕೆ ಬರುವುದಾದರೆ, ಬೇಸಿಗೆರಜೆ ಪೂರ್ತಿ ಮಾಡುವಷ್ಟು ಹೋಂವರ್ಕ್ ನೀಡಲಾಗಿರುತ್ತದೆ. ಅದು ಸರಿಯೆ ಆದರೂ ಅವರು ನೀಡಿರುವ ಹೋಮ್‌ವರ್ಕ್ ನೋಡಿದರೆ ಆಶ್ಚರ್ಯವೂ, ಭಯವೂ ಆಗುತ್ತದೆ. ನಿತ್ಯ ಒಂದು ಪುಟ ಪಾಠ, ಮಗ್ಗಿ, ಕಾಪಿರೈಟಿಂಗ್, ಕಳೆದ ಪರೀಕ್ಷೆಯ ಪ್ರಶ್ನೆಪತ್ರಿಕೆ ಬಿಡಿಸುವುದು, ಕಾಗುಣಿತ ಇಂತಹವೇ ಆಗಿರುತ್ತವೆ. ಪ್ರತಿ ವರ್ಷ ಇಂತಹ 'ಮನೆಕೆಲಸ' ನೀಡಲಾಗುತ್ತದೆ. ಆದರೂ ಶಾಲೆ ಶುರುವಾದ ಬಳಿಕ ಮಕ್ಕಳು ಎಳ್ಳಷ್ಟು ಸುಧಾರಿಸಿದೇ ಇರುವುದು ಕಂಡು ಬಂದಿದೆ. ಕೆಲವು ಶಾಲೆಯ ಮಕ್ಕಳು ಮನೆಯ ಪಾಠಕ್ಕೆ ಹೋಗಿ ಮುಂದಿನ ವರ್ಷದ ಓದಿನ ತಯಾರಿ ನಡೆಸಿರುತ್ತಾರೆ. ಆ ಒಂದೆರಡು ಪ್ರಕರಣಗಳನ್ನು ಎಲ್ಲಾ ಮಕ್ಕಳಿಗೂ ಅನ್ವಯಿಸಲಾಗದು!

ಇಷ್ಟೆಲ್ಲ ವಿವರಿಸಿದ ಮೇಲೆ, 'ಮಕ್ಕಳು ರಜೆಯಲ್ಲೂ ಓದ್ಬೇಕಾ?' ಎಂಬ ಪ್ರಶ್ನೆ ಉದ್ಭವಿಸದಿರದು. ಈ ಪ್ರಶ್ನೆಗೆ ನೇರ ಉತ್ತರವೆಂದರೆ 'ಹೌದು'. ಅದಕ್ಕೆ ಕಾರಣಗಳೂ ಇವೆ. ಸುಮಾರು ಐವತ್ತು ದಿನಗಳಷ್ಟು ಮಕ್ಕಳಿಗೆ ರಜೆ ಸಿಕ್ಕಿರುತ್ತದೆ. ಅಷ್ಟು ದಿನಗಳ ಕಾಲ ಅವರು ಶಾಲೆಯಿಂದ ಸಂಪೂರ್ಣ ದೂರವಿರುತ್ತಾರೆ. ಶಾಲೆಯಲ್ಲಿ ಕಲಿಯುವ ಮಕ್ಕಳು 6 ರಿಂದ 14 ವರ್ಷದೊಳಗಿನವರೇ ಆಗಿರುತ್ತಾರೆ. ಎಳೆ ವಯಸ್ಸಿನ ಮನಸ್ಸೇ ಹಾಗೆ. ನಿರಂತರತೆ ಇಲ್ಲದಿದ್ದರೆ ಬೇಗ ಮರೆವಿಗೆ ಜಾರುತ್ತದೆ. ಹಲವು ಅಧ್ಯಯನಗಳ ಪ್ರಕಾರ ಎರಡು ತಿಂಗಳುಗಳ ಕಾಲ ಓದಿನ ಹತ್ತಿರವೇ ಸುಳಿಯದವರು ಈಗಾಗಲೇ ಕಲಿತಿರುವುದಕ್ಕಿಂತ ಸಾಕಷ್ಟು ಹಿಂದೆ ಸಾಗುತ್ತಾರೆ. ಇದು ನಮ್ಮ ಸರ್ಕಾರಿ ಶಾಲೆಯ, ಹಳ್ಳಿ ಮಕ್ಕಳ ಮಟ್ಟಿಗೆ ಸತ್ಯವೇ ಆಗಿದೆ. ಪರಿಸರ, ಮನೆಯ ಸ್ಥಿತಿ ಗತಿಯ ಕಾರಣದಿಂದ ಮಕ್ಕಳು ಪುಸ್ತಕವನ್ನು ಹಿಡಿಯಲಾಗುವುದಿಲ್ಲ. ಇದರ ಪರಿಣಾಮದ ಅರಿವು ಸರ್ಕಾರಿ ಶಾಲೆಯ ಶಿಕ್ಷಕರಿಗೆ ಸಾಕಷ್ಟಿದೆ. ಪ್ರತಿ ವರ್ಷ ಶಾಲೆಗಳು ಆರಂಭವಾದ ಮೇಲೆ ಒಂದು ತಿಂಗಳ ಕಾಲ ಮಕ್ಕಳನ್ನು ಮೊದಲ ಸ್ಥಿತಿಗೆ ತರಲು ಶಿಕ್ಷಕರು ಸಾಕಷ್ಟು ಒದ್ದಾಡಬೇಕಾಗುತ್ತದೆ. ಕಲಿಕೆಯ ವಿಷಯದಲ್ಲಿ ಒಂದು ದೀರ್ಘವಾದ ಅಂತರ ಎಂತಹ ಕಲಿಕೆಯನ್ನೂ ಕುಂಠಿತಗೊಳಿಸಬಹದು. ಕೋವಿಡ್ ಇದನ್ನು ನಮಗೆ ಚೆನ್ನಾಗಿಯೇ ಅರ್ಥ ಮಾಡಿಸಿದೆ.

ಹೀಗೆ ರಜೆ ಅವಧಿಯಲ್ಲಿ ಮಗುವು ಓದುವಿಕೆಯಿಂದ ದೂರ ಉಳಿಯುವುದನ್ನು ಶಿಕ್ಷಣ ತಜ್ಞರು 'summer slide' ಅಂತ ಕರೆಯುತ್ತಾರೆ. ಅದರ ಅರ್ಥವಿಷ್ಟೇ; ಹಿಂದಿನ ಕಲಿಕೆಯ ನಿರಂತರತೆಯನ್ನು ಉಳಿಸಿಕೊಳ್ಳಲಾಗದೆ ಅದರಿಂದ ದೂರವಿದ್ದು, ಹಿಂದೆ ಕಲಿತಿದ್ದನ್ನೂ ಕಳೆದುಕೊಳ್ಳುವುದೇ ಆಗಿದೆ. ಇದು ಕಡಿಮೆ ಆದಾಯದ ಕುಟುಂಬಗಳಲ್ಲೇ ಜಾಸ್ತಿ ಕಂಡು ಬರುತ್ತದೆ. ತಿಳಿವಳಿಕೆಯ ಕೊರತೆ ಮತ್ತು ಆರ್ಥಿಕ ಸ್ಥಿತಿ ಅವರನ್ನು ಹಾಗೆ ಮಾಡಬಹುದು! ಕಲಿಕೆಗೆ ನೀಡುವ ಒಂದು ದೀರ್ಘವಾದ ಅಂತರದ ಪರಿಣಾಮ ಏನು ಎಂಬುದಕ್ಕೆ ಒಂದು ಉತ್ತಮ ಉದಾಹರಣೆ ಕೊಡಬೇಕೆಂದರೆ; ಒಂದು ಸಂಗೀತ ವಾದ್ಯ ನುಡಿಸುವುದನ್ನು ಕಲಿಯುವ ವ್ಯಕ್ತಿ ಏಕಾಏಕಿ ಮೂರಾಲ್ಕು ತಿಂಗಳುಗಳ ಕಾಲ ನಿಲ್ಲಿಸಿ ಬಿಟ್ಟರೆ ಆತ ಅದನ್ನು ಸುಧಾರಿಸಿಕೊಳ್ಳಲು ಮತ್ತೆ ಸಾಕಷ್ಟು ದಿನಗಳನ್ನು ತಗೆದುಕೊಳ್ಳಬೇಕಾಗುತ್ತದೆ. ನಿತ್ಯ ವ್ಯಾಯಾಮ ಮಾಡುವವನು ದಿಢೀರನೆ ನಿಲ್ಲಿಸಿ, ಮತ್ತೆಂದೋ ಆರಂಭಿಸಿದಾಗ ದೇಹ ಮತ್ತೆ ಸ್ಪಂದಿಸಲು ಸಮಯ ತಗೆದುಕೊಳ್ಳುತ್ತದೆ.

ಏನು ಓದಬೇಕು?

ಈಗಾಗಲೇ ಶೈಕ್ಷಣಿಕ ಕ್ಷೇತ್ರದಲ್ಲಿ ನಡೆದಿರುವ ಅಧ್ಯಯನಗಳು/ ಸಮೀಕ್ಷೆಗಳ ಪ್ರಕಾರ ಸಾಮಾನ್ಯ ಕಲಿಕಾ ಮಟ್ಟಕ್ಕಿಂತ ಕೆಳಗಿರುವ ಮಕ್ಕಳ ಸಂಖ್ಯೆ ಹೆಚ್ಚಿದೆ. ಹಾಗಾಗಿ, ಗಣಿತದ ಮೂಲ ಕ್ರಿಯೆಗಳು, ವಾಕ್ಯರಚನೆ, ಪದ ಬಳಕೆ, ವ್ಯಾಕರಣದಂತಹ ವಿಷಯಗಳನ್ನು ಕಲಿತುಕೊಳ್ಳಲು ಮಕ್ಕಳಿಗೆ ಇದು ಸರಿಯಾದ ಸಮಯ. ರಜೆ ಅವಧಿಯಲ್ಲಿಯೇ ಕಲಿತುಕೊಂಡರೆ ಶಾಲಾ ಅವಧಿಯಲ್ಲಿ ಸಾಮಾನ್ಯ ಓದಿನೊಂದಿಗೆ ಹೊಂದಿಕೊಳ್ಳಬಹುದು.

- ಕೇವಲ ಶಾಲಾ ಪಠ್ಯಗಳನ್ನು ಓದಬೇಕಾಗಿಲ್ಲ. ಆದರೆ ಓದು ನಿರಂತರವಾಗಿರಬೇಕು. ನಿಮಗೆ ಕುತೂಹಲವೆನಿಸಿದ, ಆಸಕ್ತಿಯ ಪುಸ್ತಕಗಳನ್ನು ಶಾಲಾ ಶಿಕ್ಷಕರ ಬಳಿ, ಗ್ರಂಥಾಲಯಗಳಿಂದ ಕೇಳಿ ತಂದು ಓದಬಹುದು.
- ನಿತ್ಯ ಗ್ರಂಥಾಲಯಕ್ಕೆ ಹೋಗುವ ಅಭ್ಯಾಸ ರೂಢಿಸಿಕೊಂಡರೆ ಜ್ಞಾನವೃದ್ಧಿಗೆ ಬೇಕಾದ ಅನೇಕ ವಿಚಾರಗಳು ಅಲ್ಲಿ ಸಿಗುತ್ತವೆ.
- ಸೃಜನಾತ್ಮಕ ಬರವಣಿಗೆಯಲ್ಲಿ ತೊಡಗಿಕೊಳ್ಳಬಹುದು. ನೀವು ಓದಿದ ವಿಷಯವಾಗಲಿ, ಅನುಭವಕ್ಕೆ ಬಂದ ವಿಷಯವಾಗಲಿ ನಿಮ್ಮದೇ ಪದಗಳಲ್ಲಿ ಬರೆಯುವ ಅಭ್ಯಾಸವಾಗಬೇಕು. ಆಗ ಭಾಷೆಯ ಮೇಲೆ ಹಿಡಿತ ಸಿಗುತ್ತದೆ.
- ಶಾಲಾ ಕಲಿಕೆಯಲ್ಲಿ ಯಾವ ವಿಷಯದಲ್ಲಿ ಕಠಿಣ ಅಂಶಗಳನ್ನು ಎದುರಿಸುತ್ತೀರೋ ಆ ವಿಷಯಗಳ ಕಡೆ ಗಮನಹರಿಸುವುದು ಸೂಕ್ತ.

ಓದನ್ನು ಹೀಗೆ ರೂಢಿಸಿ...

- ಮನೆಯ ಹಿರಿಯರು, ಪೋಷಕರು ಪ್ರತಿ ನಿತ್ಯ ಮಕ್ಕಳೊಂದಿಗೆ ಪುಸ್ತಕ ಹಿಡಿದು ಓದುತ್ತಾ, ಒಂದಿಷ್ಟು ಹೊತ್ತು ಕಳೆಯಿರಿ.
- ಮಕ್ಕಳನ್ನು ನಿತ್ಯ ಗ್ರಂಥಾಲಯಕ್ಕೆ ಕರೆದುಕೊಂಡು ಹೋಗಿ. ಇದೊಂದು ಉತ್ತಮ ರೂಢಿಯಾಗಿದ್ದು, ಮಕ್ಕಳಿಗೆ ಅಭ್ಯಾಸ ಮಾಡಿಸಿ.
- ಮನೆಯಲ್ಲಿ ಪತ್ರಿಕೆ, ಮ್ಯಾಗಜೀನ್, ಪುಸ್ತಕಗಳನ್ನು ಎಲ್ಲೆಂದರಲ್ಲಿ ಕಾಣುವಂತೆ, ಮಕ್ಕಳಿಗೆ ಸಿಗುವಂತೆ ವ್ಯವಸ್ಥೆ ಮಾಡಿರಿ.
- ಅವರ ಓದಿನ ಬಗೆಗೆ ಆಗಾಗ ಪ್ರಶ್ನೆಗಳನ್ನು ಕೇಳುತ್ತಿರಿ. ಸರಿ ಉತ್ತರಕ್ಕೆ ಅಭಿನಂದಿಸಿ.
- ಮಕ್ಕಳು ದಿನಪೂರ್ತಿ ಓದುತ್ತಲೇ ಇರಬೇಕೆಂದು ಬಯಸಬೇಡಿ, ಇದು ರಜೆಯ ಸಮಯ. ಒಂದೆರಡು ಗಂಟೆಗಳ ಓದಿನ ನಂತರ ಅವರ ಆಟೋಟಗಳಿಗೆ ಪೂರ್ಣ ಸ್ವತಂತ್ರ ನೀಡಿ.
- ಮಕ್ಕಳನ್ನು ಮನೆಪಾಠಕ್ಕೆ ಕಳಿಸಿ, ಆ ಚಟುವಟಿಕೆಗೂ ನಿಮಗೂ ಸಂಬಂಧವಿಲ್ಲದಂತೆ ಕೂರಬೇಡಿ. ಮಕ್ಕಳು ಅಲ್ಲೇನು ಕಲಿಯುತ್ತಿದ್ದಾರೆಂದು ನಿತ್ಯ ಗಮನಿಸಿ.

ವಿದ್ಯಾರ್ಥಿ ವೇತನ ಕೈಪಿಡಿ

ಗೂಗಲ್ ಪಿಎಚ್‌ಡಿ ಫೆಲೋಶಿಪ್ ಇಂಡಿಯಾ ಪ್ರೋಗ್ರಾಂ 2022
ವಿವರ: ಗೂಗಲ್ ಪಿಎಚ್‌ಡಿ ಫೆಲೋಶಿಪ್ ಇಂಡಿಯಾ ಪ್ರೋಗ್ರಾಂ 2022, ತಂತ್ರಜ್ಞಾನ ವಿಷಯದಲ್ಲಿ ಪಿಎಚ್‌ಡಿ ಮಾಡಲು ಬಯಸುವ ಅಭ್ಯರ್ಥಿಗಳನ್ನು ಬೆಂಬಿಸುವ ಸಲುವಾಗಿ ಗೂಗಲ್ ಈ ವಿದ್ಯಾರ್ಥಿವೇತನವನ್ನು ನೀಡುತ್ತಿದೆ.
ಅರ್ಹತೆ: ಭಾರತೀಯ ವಿಶ್ವವಿದ್ಯಾಲಯದಿಂದ ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದು ಪಿಎಚ್‌ಡಿ ಕಾರ್ಯಕ್ರಮಕ್ಕೆ ದಾಖಲಾದ ಅಭ್ಯರ್ಥಿಗಳು ಈ ವಿದ್ಯಾರ್ಥಿವೇತನಕ್ಕೆ ಅರ್ಹರು. ಅಭ್ಯರ್ಥಿಗಳು ಭಾರತದಲ್ಲಿ ನೋಂದಾಯಿತ ಸಂಸ್ಥೆಯಲ್ಲಿ ಉದ್ಯೋಗದಲ್ಲಿರುವ ವೃತ್ತಿಪರರಾಗಿರಬೇಕು.
ಆರ್ಥಿಕ ನೆರವು: ₹38.23 ಲಕ್ಷ(50K ಅಮೆರಿಕನ್ ಡಾಲರ್)ದವರೆಗೆ ಮತ್ತು ಇತರ ಪ್ರಯೋಜನಗಳು
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮೇ 18, 2022
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಮೂಲಕ
ಹೆಚ್ಚಿನ ಮಾಹಿತಿಗೆ: www.b4s.in/praja/OGL7

ಪ್ರೊ. ಜೈ ಕೃಷ್ಣ ಅಂಡ್ ಪ್ರೊ. ಎಸ್‌ಎನ್ ಮಿತ್ರಾ ಮೆಮೋರಿಯಲ್ ಅವಾರ್ಡ್ಸ್ 2022
ವಿವರ: ಪ್ರೊಫೆಸರ್ ಜೈ ಕೃಷ್ಣ ಅಂಡ್ ಪ್ರೊಫೆಸರ್ ಎಸ್‌ಎನ್ ಮಿತ್ರಾ ಮೆಮೋರಿಯಲ್ ಅವಾರ್ಡ್ಸ್ 2022, ಇಂಡಿಯನ್ ನ್ಯಾಷನಲ್ ಅಕಾಡೆಮಿ ಆಫ್ ಎಂಜಿನಿಯರಿಂಗ್ (ಐಎನ್‌ಎಇ) ವತಿಯಿಂದ ಉನ್ನತ ಸಾಧನೆ ಮಾಡಿರುವ ಎಂಜಿನಿಯರ್ಸ್, ಎಂಜಿನಿಯರ್ ಸೈಂಟಿಸ್ಟ್ಸ್ ಮತ್ತು ಟೆಕ್ನಾಲಜಿಸ್ಟ್‌ಗಳಿಗೆ ನೀಡುವ ವಿದ್ಯಾರ್ಥಿವೇತನವಾಗಿದೆ.
ಅರ್ಹತೆ: ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕ್ಷೇತ್ರಕ್ಕೆ ಉನ್ನತ ಮಟ್ಟದ ಕೊಡುಗೆಗಳನ್ನು ನೀಡಿರುವ ಮತ್ತು ಎಂಜಿನಿಯರಿಂಗ್ ಸಮುದಾಯದಲ್ಲಿ ಉನ್ನತ ಮಟ್ಟದ ಸಾಧನೆ ಮಾಡಿ ಗೌರವ ಪಡೆದಿರುವ ಎಂಜಿನಿಯರ್‌ಗಳು, ಎಂಜಿನಿಯರ್ ಸೈಂಟಿಸ್ಟ್ಸ್ ಅಥವಾ ತಂತ್ರಜ್ಞರು ಈ ವಿದ್ಯಾರ್ಥಿವೇತನಕ್ಕೆ ಅರ್ಹರು. ಪ್ರಶಸ್ತಿಯ ವರ್ಷದಲ್ಲಿ ಅಭ್ಯರ್ಥಿಗಳು ಐಎನ್‌ಎಇ ಆಡಳಿತ ಮಂಡಳಿಯ ಸದಸ್ಯರಾಗಿರಬಾರದು. ಭಾರತೀಯ ನಾಗರಿಕರಾಗಿರಬೇಕು.
ಆರ್ಥಿಕ ನೆರವು: ₹ 2 ಲಕ್ಷ ನಗದು ಮತ್ತು ಅರ್ಹತಾ ಪತ್ರ
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮೇ 15, 2022
ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ
ಹೆಚ್ಚಿನ ಮಾಹಿತಿಗೆ: www.b4s.in/praja/PKA7

ಅಂಕಪಟ್ಟಿ ಭವಿಷ್ಯವನ್ನು ನಿರ್ಧರಿಸುತ್ತದೆಯೇ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್

- **ನಾನು ದ್ವಿತೀಯ ಪಿಯುಸಿ (ವಿಜ್ಞಾನ) ಓದುತ್ತಿದ್ದೇನೆ. ಪರೀಕ್ಷೆಗೆ ಸಾಧ್ಯವಾದಷ್ಟು ಓದಿದ್ದೇನೆ; ಕಡಿಮೆ ಅಂಕಗಳು ಬಂದರೆ ಆತ್ಮಹತ್ಯೆ ಮಾಡಿಕೊಳ್ಳೋಣ ಅಂತ ಅನಿಸುತ್ತಿದೆ. ನನಗೆ ವಿಎಫ್‌ಎಕ್ಸ್/ಅನಿಮೇಷನ್ ಕ್ಷೇತ್ರದಲ್ಲಿ ಆಪಾರ ಜ್ಞಾನ ಇದೆ. ಆದರೆ ಮನೆಯಲ್ಲಿ ಈ ಕ್ಷೇತ್ರಕ್ಕೆ ಬೆಲೆ ಕೊಡುತ್ತಿಲ್ಲ. ನೀನು ಎಂಜಿನಿಯರಿಂಗ್ ಓದು ಅಂತ ಹೇಳುತ್ತಿದ್ದಾರೆ. ಆದರೆ, ನನಗೆ ಇಷ್ಟ ಇಲ್ಲ. ನಾನು ಏನು ಮಾಡಲಿ? ಜೀವನದಲ್ಲಿ ಅಂಕಗಳು ಬಹು ಮುಖ್ಯವೇ?**

ಹೆಸರು, ಊರು ತಿಳಿಸಿಲ್ಲ.

ಪರೀಕ್ಷೆಗಳ ಅಂಕಪಟ್ಟಿಯೇ ಜೀವನದ ಸರ್ವಸ್ವವಲ್ಲ. ನಮ್ಮ ದೇಶದ ಶ್ರೇಷ್ಠ ವಿಜ್ಞಾನಿಗಳು, ವೈದ್ಯರು, ಎಂಜಿನಿಯರ್‌ಗಳು, ಆಟಗಾರರು, ಚಿಂತಕರು, ಸಾಹಿತಿಗಳು ರ್‍ಯಾಂಕ್ ಪಡೆದೇ ಸಾಧಕರಾಗಲಿಲ್ಲ. ಅವರಲ್ಲಿ ಹೆಚ್ಚಿನವರು, ಬದುಕಿನ ಅನುಭವದಿಂದ, ನಿರಂತರ ಪರಿಶ್ರಮದಿಂದ ಕಲಿತವರು.

ಆದ್ದರಿಂದ, ನೀವು ವೃತ್ತಿಯಲ್ಲೂ, ವೈಯಕ್ತಿಕ ಜೀವನದಲ್ಲೂ ಬೆಳೆದು ಸಂತೃಪ್ತಿಯನ್ನು ಪಡೆಯಬೇಕಾದರೆ, ನಿಮಗೆ ಆಸಕ್ತಿಯಿರುವ, ಇಷ್ಟವಿರುವ, ಸ್ವಾಭಾವಿಕ ಪ್ರತಿಭೆಯಿರುವ ವೃತ್ತಿಯನ್ನೇ ಅರಸಬೇಕು. ಹಾಗಾಗಿ, ನಿಮ್ಮ ಆಸಕ್ತಿ, ಅಭಿರುಚಿ, ವೃತ್ತಿಯ ಆಯ್ಕೆಗೆ ಪೂರಕವಾಗುವ ಸಾಮರ್ಥ್ಯ ಮತ್ತು ಸನ್ನದ್ಧತೆಯನ್ನು ನಿಮ್ಮ ಪೋಷಕರಿಗೆ ಮನವರಿಕೆ ಮಾಡಿ, ಅವರ ಆತಂಕವನ್ನು ಹೋಗಲಾಡಿಸಿ. ಏಕೆಂದರೆ, ಮಕ್ಕಳ ಭವಿಷ್ಯದ ಬಗ್ಗೆ ಪೋಷಕರ ಆಸಕ್ತಿ, ಚಿಂತನೆ, ಆತಂಕ ಇವೆಲ್ಲವೂ ಸಾಮಾನ್ಯ. ಒಂದು ಮುಕ್ತ ವಾತಾವರಣದಲ್ಲಿ ಪರಸ್ಪರ ಚರ್ಚಿಸಿ, ವೃತ್ತಿಯ ಆಯ್ಕೆ ಮತ್ತು ಯೋಜನೆಯನ್ನು ಮಾಡಿ, ಅದರಂತೆ ಕೋರ್ಸ್ ಆಯ್ಕೆಯನ್ನು ಮಾಡಿ, ನಿಮ್ಮ ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳಿ.

ಮುಖ್ಯವಾಗಿ, ಆತ್ಮಹತ್ಯೆಯಂತಹ ಕ್ಷಣಿಕ ನಕಾರಾತ್ಮಕ ಆಲೋಚನೆಯಿಂದ ದೂರ ಸರಿದು, ಸಕಾರಾತ್ಮಕ ದೃಷ್ಟಿಕೋನ ಉಳ್ಳವರಾಗಿ. ಮನೋವಿಜ್ಞಾನಿಗಳ ಅಭಿಪ್ರಾಯದಂತೆ ಸ್ವ-ಸಲಹೆಗಳು (ಆಟೊ ಸಜೆಷನ್), ಆಂತರಿಕ ಪ್ರೇರಣೆಗೆ ಪ್ರಯೋಜನಕಾರಿ. ಉದಾಹರಣೆಗೆ, 'ಎಷ್ಟೇ ಕಷ್ಟವಾದರೂ ನಾನು ನನ್ನ ವೃತ್ತಿಯ ಗುರಿಯಿಂದ ವಿಮುಖನಾಗುವುದಿಲ್ಲ'ಎನ್ನುವ ಚಿಂತನೆಗಳು ನಿಮಗೆ ಪ್ರೇರಣಕಾರಿ. ನಿಮ್ಮ ಸಾಮರ್ಥ್ಯದಲ್ಲಿ ನಂಬಿಕೆ, ವಿಶ್ವಾಸವನ್ನು ಬೆಳೆಸಿಕೊಂಡರೆ, ನಿಮ್ಮ ಪೋಷಕರ ಮನವೊಲಿಕೆ ಸುಲಭವಾಗುತ್ತದೆ. ವೃತ್ತಿ ಯೋಜನೆಯನ್ನು ಕುರಿತ ಮಾಹಿತಿಗಾಗಿ ಈ ವಿಡಿಯೊ ವೀಕ್ಷಿಸಿ:

https://www.youtube.com/c/EducationalExpertManagementCareerConsultant

ಹೆಚ್ಚಿನ ಸಹಾಯ, ಮಾರ್ಗದರ್ಶನಕ್ಕಾಗಿ ಸಂಕೋಚವಿಲ್ಲದೆ, ಈ ಅಂಕಣದ ಮೂಲಕ ನಮ್ಮನ್ನು ಸಂಪರ್ಕಿಸಿ.

- **ನಾನು ದ್ವಿತೀಯ ಪಿಯುಸಿ ಓದುತ್ತಿದ್ದೇನೆ. ಮುಂದೆ ಜಿಲ್ಲಾಧಿಕಾರಿ ಆಗಬೇಕೆನ್ನುವುದು ನನ್ನ ಆಸೆ. ಅದಕ್ಕಾಗಿ ಹೇಗೆ ತಯಾರಿ ಮಾಡಬೇಕು ಎಂದು ತಿಳಿಸಿಕೊಡಿ.**

ಕಾವ್ಯ, ಊರು ತಿಳಿಸಿಲ್ಲ.

ಪಿಯುಸಿ ಓದುತ್ತಿರುವ ನಿಮಗೆ ಜಿಲ್ಲಾಧಿಕಾರಿ ಆಗಬೇಕೆಂದಿರುವ ಕನಸು ಶ್ಲಾಘನೀಯ. ಯಾವುದೇ ಪದವಿಯನ್ನು ಪೂರ್ಣಗೊಳಿಸಿದ ನಂತರ ಯುಪಿಎಸ್‌ಸಿ ನಡೆಸುವ ಮೂರು ಹಂತದ ನಾಗರಿಕ ಸೇವಾ ಪರೀಕ್ಷೆಯನ್ನು ತೆಗೆದುಕೊಳ್ಳಬೇಕು. ಮೊದಲನೇ ಹಂತದಲ್ಲಿ ಪೂರ್ವಭಾವಿ ಪರೀಕ್ಷೆ, ಎರಡನೇ ಹಂತದಲ್ಲಿ ಮುಖ್ಯ ಪರೀಕ್ಷೆ ಹಾಗೂ ಮೂರನೇ ಹಂತದಲ್ಲಿ ಸಂದರ್ಶನವನ್ನು ನಡೆಸಲಾಗುತ್ತದೆ. ಪೂರ್ವಭಾವಿ ಪರೀಕ್ಷೆಯು ಬಹುಆಯ್ಕೆ ಮಾದರಿಯಲ್ಲಿದ್ದು, ಮುಖ್ಯ ಪರೀಕ್ಷೆಯು ವಿಸ್ತೃತ ಮಾದರಿಯಲ್ಲಿರುತ್ತದೆ. ಮುಖ್ಯ ಪರೀಕ್ಷೆಯಲ್ಲಿ ನೀವು ಒಂದು ಐಚ್ಛಿಕ ವಿಷಯವನ್ನು ಆಯ್ದುಕೊಳ್ಳಬೇಕು. ಈ ಪರೀಕ್ಷೆಯಲ್ಲಿ ಅತ್ಯುನ್ನತ ರ್‍ಯಾಂಕ್ ಗಳಿಸಿದರೆ ನಿಮ್ಮ ಆಸೆ ನೆರವೇರುವ ಸಾಧ್ಯತೆಯಿರುತ್ತದೆ. ಇಲ್ಲದಿದ್ದರೆ, ಐಎಎಸ್ ಅಧಿಕಾರಿಯಾಗಿ ಸರ್ಕಾರದ ಸೇವೆಯಲ್ಲಿದ್ದುಕೊಂಡು ನಿಮ್ಮ ದಕ್ಷತೆ ಮತ್ತು ಹಿರಿತನದ ಆಧಾರದ ಮೇಲೆ ಕಾಲಕ್ರಮೇಣ ಜಿಲ್ಲಾಧಿಕಾರಿಯಾಗಬಹುದು.

ಕಠಿಣವಾದ ಈ ಪರೀಕ್ಷೆಯ ಯಶಸ್ಸಿಗೆ ಸೂಕ್ತವಾದ ಕಾರ್ಯತಂತ್ರ, ಸಾಕಷ್ಟು ಪರಿಶ್ರಮ ಹಾಗೂ ಏಕಾಗ್ರತೆಯಿರಬೇಕು. ಇದಕ್ಕೆ ಬೇಕಾದ ಪುಸ್ತಕಗಳನ್ನು ಖರೀದಿಸಿ ಸ್ವತಂತ್ರವಾಗಿ ತಯಾರಾಗಬಹುದು ಅಥವಾ ಹೆಚ್ಚಿನ ಮಾರ್ಗದರ್ಶನಕ್ಕಾಗಿ ಕೋಚಿಂಗ್ ಇನ್‌ಸ್ಟಿಟ್ಯೂಟ್ ಸೇರಬಹುದು. ಈ ವೃತ್ತಿಯಲ್ಲಿ ಯಶಸ್ಸನ್ನು ಗಳಿಸಲು, ಆಡಳಿತಾತ್ಮಕ ವಿಷಯಗಳ ಕುರಿತ ಜ್ಞಾನ ಮತ್ತು ಕೌಶಲಗಳ ಜೊತೆಗೆ ಸಕಾರಾತ್ಮಕ ಆಲೋಚನೆ, ನಿಷ್ಠೆ, ಪ್ರಾಮಾಣಿಕತೆ, ಸ್ವಯಂಪ್ರೇರಣೆ ಮತ್ತು ಆತ್ಮವಿಶ್ವಾಸವಿರಬೇಕು. ಶುಭಹಾರೈಕೆಗಳು.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

❦ ಸುಭಾಷಿತ ❦

ಹೃದಯ ವಿಶಾಲವಾಗಿ ಇದ್ದರೆ ಮಾತ್ರ ಅಲ್ಲಿ ನಿಜವಾದ ಜ್ಞಾನ ಹೊಮ್ಮುತ್ತದೆ. –ಸ್ವಾಮಿ ವಿವೇಕಾನಂದ

ಪರಿಶಿಷ್ಟರ ನಿಧಿ ವರ್ಗಾವಣೆ ಅಕ್ಷಮ್ಯ ಸಾಮಾಜಿಕ ನ್ಯಾಯ ಪರಿಪಾಲಿಸಿ

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ (ಎಸ್‌ಸಿ ಮತ್ತು ಎಸ್‌ಟಿ) ಸಮುದಾಯಗಳ ಕಲ್ಯಾಣಕ್ಕಾಗಿ ಮೀಸಲಿಟ್ಟಿದ್ದ ₹ 7,885 ಕೋಟಿಯಷ್ಟು ಬೃಹತ್ ಮೊತ್ತವನ್ನು ಮೂಲಸೌಕರ್ಯ ಯೋಜನೆಗಳಿಗೆ ವರ್ಗಾಯಿಸುವ ಮೂಲಕ ರಾಜ್ಯ ಸರ್ಕಾರವು ಸಾಮಾಜಿಕ ನ್ಯಾಯದ ವಿರುದ್ಧವಾಗಿ ನಡೆದುಕೊಂಡಿದೆ. ಅಷ್ಟೇ ಅಲ್ಲ, ತಾನೇ ರೂಪಿಸಿರುವ ಕಾಯ್ದೆಯನ್ನು ಇಂತಹ ಅನುಚಿತ ಕ್ರಮದ ಮೂಲಕ ಅದು ಉಲ್ಲಂಘಿಸಿದೆ. ಸರ್ಕಾರದ ಈ ನಡೆ ಅಕ್ಷಮ್ಯ. 'ಕರ್ನಾಟಕ ಎಸ್‌ಸಿ-ಎಸ್‌ಟಿ ಉಪಯೋಜನೆ ಕಾಯ್ದೆ-2013'ರ ಪ್ರಕಾರ, ರಾಜ್ಯ ಸರ್ಕಾರ ತನ್ನ ವಾರ್ಷಿಕ ಬಜೆಟ್‌ನ ಶೇ 24.1ರಷ್ಟು ಮೊತ್ತವನ್ನು ಈ ಸಮುದಾಯಗಳ ಕಲ್ಯಾಣಕ್ಕಾಗಿ ವ್ಯಯಿಸಬೇಕು. ಎಸ್‌ಸಿ ಸಮುದಾಯಕ್ಕೆ ಬಜೆಟ್‌ನ ಶೇ 17.15ರಷ್ಟು ಮತ್ತು ಎಸ್‌ಟಿ ಸಮುದಾಯಕ್ಕೆ ಶೇ 6.95ರಷ್ಟು ಮೊತ್ತ ಖರ್ಚು ಮಾಡಬೇಕು ಎಂದು ಕಾಯ್ದೆಯಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಆದರೆ, ಕಾಯ್ದೆಯ ಸೆಕ್ಷನ್ 7 (ಡಿ) ಅಡಿಯಲ್ಲಿ ಇರುವ 'ಪರಿಗಣಿತ ವೆಚ್ಚ'ದ ಅವಕಾಶವನ್ನು ದುರ್ಬಳಕೆ ಮಾಡಿಕೊಂಡ ಸರ್ಕಾರ, 2018ರಿಂದ 2020ರ ಅವಧಿಯಲ್ಲಿ ಎಸ್‌ಸಿ-ಎಸ್‌ಟಿ ಕಲ್ಯಾಣಕ್ಕೆ ಮೀಸಲಿಡಲಾಗಿದ್ದ ನಿಧಿಯಲ್ಲಿ ದೊಡ್ಡ ಪ್ರಮಾಣದ ಮೊತ್ತವನ್ನು ಅನ್ಯ ಯೋಜನೆಗಳಿಗೆ ವಿನಿಯೋಗಿಸಿದೆ. ಕುಡಿಯುವ ನೀರು ಪೂರೈಕೆ, ರಸ್ತೆ ದುರಸ್ತಿ, ನೀರಾವರಿ ಹಾಗೂ ಇತರ ಕಾಮಗಾರಿಗಳಿಗೆ ಈ ನಿಧಿಯ ಮೊತ್ತವನ್ನು ಬಳಕೆ ಮಾಡಲಾಗಿದೆ. ಒಂದುವೇಳೆ ಮೂಲಸೌಕರ್ಯ ಕಾಮಗಾರಿಯನ್ನು ವಿಭಜಿಸಲು ಸಾಧ್ಯವೇ ಆಗದಿದ್ದರೆ ಇಡೀ ಯೋಜನೆಗೆ ವ್ಯಯಿಸಿದ ಅನುದಾನದ ಒಂದು ಭಾಗವನ್ನು ಎಸ್‌ಸಿ-ಎಸ್‌ಟಿ ಕಲ್ಯಾಣಕ್ಕಾಗಿ ಬಳಸಲಾಗಿದೆಯೆಂದು ಪರಿಗಣಿಸಲು ಕಾಯ್ದೆಯ ಸೆಕ್ಷನ್ 7 (ಡಿ) ಅವಕಾಶ ನೀಡುತ್ತದೆ. ಇಂತಹ 'ಪರಿಗಣಿತ ವೆಚ್ಚ' ಕೂಡ ಒಟ್ಟಾರೆ ಕಾಯ್ದೆಯ ಉದ್ದೇಶಕ್ಕೆ ಪೂರಕವಾಗಿಯೇ ಇರಬೇಕು ಎನ್ನುವುದು ಈ ನಿಯಮದ ಹಿಂದಿನ ಆಶಯ. ಅಂದರೆ ಎಸ್‌ಸಿ-ಎಸ್‌ಟಿ ಸಮುದಾಯಗಳ ವರಮಾನ ಹೆಚ್ಚಳ, ಕೌಶಲ ಅಭಿವೃದ್ಧಿಗೆ ಪೂರಕವಾದ ಹಾಗೂ ಈ ಸಮುದಾಯಗಳು ವಾಸಿಸುವ ಪ್ರದೇಶದಲ್ಲಿ ಮೂಲಸೌಕರ್ಯ ಸೃಷ್ಟಿಸಲು ನಿಗದಿಯಾದ ಯೋಜನೆಗಳಿಗೆ 'ಪರಿಗಣಿತ ವೆಚ್ಚ' ಬಳಕೆ ಆಗಬೇಕಿತ್ತು. ಏಕೆಂದರೆ, ಅಲಕ್ಷಿತ ಸಮುದಾಯಗಳನ್ನು ಬಡತನದ ರೇಖೆಯಿಂದ ಮೇಲಕ್ಕೆತ್ತಿ ಸಮಾಜದ ಮುಖ್ಯ ವಾಹಿನಿಯೊಂದಿಗೆ ಬೆರೆಯುವಂತೆ ಮಾಡುವುದೇ ಈ ಕಾಯ್ದೆಯ ಉದ್ದೇಶವಾಗಿದೆ. ತಾನೇ ರೂಪಿಸಿದ ಕಾಯ್ದೆಯ ಉದ್ದೇಶ ತುಂಬಾ ಸ್ಪಷ್ಟವಾಗಿದ್ದರೂ ಮೇಲ್ಸೇತುವೆ ನಿರ್ಮಾಣದಂತಹ ಯೋಜನೆಗಳಿಗೆ ಎಸ್‌ಸಿ- ಎಸ್‌ಟಿ ಕಲ್ಯಾಣ ನಿಧಿಯನ್ನು ವರ್ಗಾಯಿಸಿದರೆ ಅದು ಸರ್ಕಾರದಿಂದಾದ ಅಧಿಕಾರದ ದುರ್ಬಳಕೆಯಲ್ಲದೆ ಮತ್ತೇನು? ಅದೇ ಹಣವನ್ನು ಎಸ್‌ಸಿ-ಎಸ್‌ಟಿ ಸಮುದಾಯಗಳೇ ಹೆಚ್ಚಾಗಿ ವಾಸಿಸುವ ಗ್ರಾಮೀಣ ಭಾಗಗಳಲ್ಲಿ ಮೂಲಸೌಕರ್ಯ ಸೃಷ್ಟಿಗೆ ಬಳಸಿದ್ದರೆ ಕಾಯ್ದೆಯ ಉದ್ದೇಶ ಈಡೇರಿದಂತಾಗುತ್ತಿತ್ತು.

ತಳಸಮುದಾಯಗಳನ್ನು ಮಮತೆಯಿಂದ ಕಾಣಬೇಕಿದ್ದ ಸರ್ಕಾರ, ಆ ಸಮುದಾಯಗಳ ಕುರಿತು ಎಂತಹ ನಿರ್ಲಕ್ಷ್ಯ ಧೋರಣೆ ತಾಳಿದೆ ಎನ್ನುವುದಕ್ಕೆ ಈ ನಡೆ ಒಂದು ನಿದರ್ಶನ

ಕಲ್ಯಾಣ ಯೋಜನೆಗಳಿಗೆ ಮೀಸಲಿಟ್ಟ ನಿಧಿಯನ್ನು ಈ ರೀತಿ ಅನ್ಯ ಉದ್ದೇಶಕ್ಕೆ ವರ್ಗಾವಣೆ ಮಾಡುವ ಸರ್ಕಾರದ ಕ್ರಮ, ಕಳೆದ ವರ್ಷದ ವಿಧಾನಮಂಡಲ ಅಧಿವೇಶನದಲ್ಲಿ ತೀವ್ರ ಚರ್ಚೆಗೆ ಒಳಗಾಗಿತ್ತು. ₹ 5,000 ಕೋಟಿಯನ್ನು ಅನ್ಯ ಯೋಜನೆಗಳಿಗೆ ಬಳಸುವ ನಿರ್ಧಾರದಿಂದ ಸರ್ಕಾರ ಹಿಂದೆ ಸರಿಯುವಂತಾಗಿತ್ತು. ತಳ ಸಮುದಾಯಗಳ ಕಲ್ಯಾಣಕ್ಕಾಗಿ ಮೀಸಲಿಟ್ಟಿದ್ದ ನಿಧಿ ಹೀಗೆ ಅನ್ಯ ಉದ್ದೇಶ-ಯೋಜನೆಗಳಿಗೆ ಬಳಕೆಯಾಗುತ್ತಿದ್ದರೂ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಮೂಕಪ್ರೇಕ್ಷಕರಾಗಿ ಕುಳಿತಿರುವುದು ದುರದೃಷ್ಟಕರ. ಅಷ್ಟೇ ಅಲ್ಲ, ಕಾಯ್ದೆಗೆ ವಿರುದ್ಧವಾದ, ಆ ಮೂಲಕ ಎಸ್‌ಸಿ-ಎಸ್‌ಟಿ ಸಮುದಾಯಗಳ ಪಾಲಿಗೆ ಮಾರಕವಾದ ತೀರ್ಮಾನಕ್ಕೂ ಕಾರಣವಾದ ಪಾಪ ಕಾರ್ಯದಲ್ಲಿ ಅವರೂ ಭಾಗೀದಾರರು. ಇಂಥವರು, ತಾವು ಯಾರ ಸಲುವಾಗಿ ಅಧಿಕಾರದಲ್ಲಿರುವುದು ಎಂಬುದರ ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕು. ಅಲಕ್ಷಿತ ಸಮುದಾಯಗಳಿಗೆ ಮೀಸಲಾಗಿದ್ದ ಕಲ್ಯಾಣ ನಿಧಿ ವರ್ಗಾವಣೆಯಲ್ಲಿ ತಪ್ಪು ಎಸಗಿದ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಬೇಕು. ಅದು ಇತರ ಅಧಿಕಾರಿಗಳಿಗೂ ಪಾಠವಾಗಬೇಕು.

ಪ್ರಬಲ ಜಾತಿಗಳ ಅಭಿವೃದ್ಧಿಗಾಗಿ, ಅವುಗಳ ಮಠ-ಮಾನ್ಯಗಳು ಹಾಕಿಕೊಂಡ ಯೋಜನೆಗಳಿಗಾಗಿ ನೂರಾರು ಕೋಟಿ ರೂಪಾಯಿ ಅನುದಾನವನ್ನು ಧಾರಾಳವಾಗಿ ಕೊಡುತ್ತಿರುವ ಹೊತ್ತಿನಲ್ಲಿಯೇ ಎಸ್‌ಸಿ-ಎಸ್‌ಟಿ ಕಲ್ಯಾಣ ನಿಧಿಗೆ ಕನ್ನಹಾಕಿ, ಆ ಮೊತ್ತವನ್ನು ಅನ್ಯ ಯೋಜನೆಗಳಿಗೆ ವರ್ಗಾಯಿಸುತ್ತಿರುವ ಸರ್ಕಾರದ ಕ್ರಮ ಖಂಡನಾರ್ಹ. ತಳಸಮುದಾಯಗಳನ್ನು ಮಮತೆಯಿಂದ ಕಾಣಬೇಕಿದ್ದ ಸರ್ಕಾರವೇ ಆ ಸಮುದಾಯಗಳ ಕುರಿತು ಎಂತಹ ನಿರ್ಲಕ್ಷ್ಯ ಧೋರಣೆ ತಾಳಿದೆ ಎನ್ನುವುದಕ್ಕೂ ಈ ನಡೆ ಒಂದು ನಿದರ್ಶನ. ಈ ವರ್ಷ ಎಸ್‌ಸಿ-ಎಸ್‌ಟಿ ಕಲ್ಯಾಣ ನಿಧಿಯನ್ನು ಅನ್ಯ ಯೋಜನೆಗಳಿಗೆ ವರ್ಗಾಯಿಸುವುದಿಲ್ಲ ಎಂದು ಸರ್ಕಾರವೇನೋ ಭರವಸೆ ನೀಡಿದೆ. ಆದರೆ, ಹಿಂದಿನ ವರ್ಷಗಳಲ್ಲಿ ಆಗಿರುವ ನಿಯಮ ಹಾಗೂ ಅಧಿಕಾರದ ದುರ್ಬಳಕೆ ಉದಾಹರಣೆಗಳು ಕಣ್ಮುಂದೆಯೇ ಇರುವಾಗ ಅದರ ಮಾತನ್ನು ಯಾರೂ ನಂಬುವ ಸ್ಥಿತಿಯಲ್ಲಿ ಇಲ್ಲ. ಇಂತಹ ದುರ್ಬಳಕೆಯನ್ನು ತಪ್ಪಿಸಲು ಇರುವ ಏಕೈಕ ಹಾದಿಯೆಂದರೆ ಕಾಯ್ದೆಯಿಂದಲೇ ಸೆಕ್ಷನ್ 7 (ಡಿ)ಯನ್ನು ತೆಗೆದುಹಾಕುವುದು.

ದಿನದ ಟ್ವೀಟ್

ವೈಫಲ್ಯ ಮೆಟ್ಟಿ ನಿಂತವರು...

ನಿಮಗೊಂದು ಸತ್ಯ ಹೇಳಲೇ? ಇವತ್ತು ವಿರಾಟ್ ಕೊಹ್ಲಿ ಅನುಭವಿಸುತ್ತಿರುವ ವೈಫಲ್ಯವನ್ನು ನಮ್ಮ ಕ್ರಿಕೆಟ್ ಆಟದಲ್ಲಿ ದಿಗ್ಗಜರೆನಿಸಿಕೊಂಡ ಪ್ರತಿಯೊಬ್ಬರೂ ಅನುಭವಿಸಿದ್ದಾರೆ. ಇನ್ನೊಂದು ಸತ್ಯ ಹೇಳಬೇಕೇ? ಅವರೆಲ್ಲರೂ ಇಂತಹ ಕಠಿಣ ಸಮಯವನ್ನು ದಾಟಿ ಬಂದು ಮಹಾನ್ ಸಾಧನೆ ಮಾಡಿ ತೋರಿಸಿದ್ದಾರೆ.

ಕೆವಿನ್ ಪೀಟರ್ಸನ್, ಇಂಗ್ಲೆಂಡ್ ತಂಡದ ಮಾಜಿ ನಾಯಕ

ಕಿಡಿನುಡಿ

ಒಂದು ವಸ್ತು– ಸೇವೆ ಪಡೆಯಲು ಹೋದಾಗ ನಮ್ಮ ನುಡಿಯಲ್ಲಿ ನಮ್ಮ ಊರಲ್ಲೇ ಸೇವೆ ಇಲ್ಲ ಅಂದರೆ ಅಭದ್ರತೆ ಶುರು ಆಗುತ್ತೆ. ನಮ್ಮ ಊರಲ್ಲಿ ನಾವಿದ್ದೀವಾ ಎಂಬ ಅನುಮಾನ ಕಾಡುತ್ತೆ. ಸರ್ಕಾರಕ್ಕೆ ಈ ಅನ್ಯಾಯದ ಅರಿವಿಲ್ಲವೇ? ಖಂಡಿತ ಇದೆ. ಸಾಕು ನಿಮ್ಮ ಜಡತ್ವ. ಕನ್ನಡದಲ್ಲಿ ಗ್ರಾಹಕ ಸೇವೆಯ ಕಾನೂನು ಬೇಕೇ ಬೇಕು.

ಉಮೇಶ್ ಶಿವರಾಜು, ಉದ್ಯಮಿ

25 ವರ್ಷಗಳ ಹಿಂದೆ

ಶುಕ್ರವಾರ, 25-4-1997

- **5000 ಕೋಟಿ ಮೌಲ್ಯದ ಹಗರಣ ತನಿಖೆ ವಿಳಂಬಕ್ಕೆ ತರಾಟೆ**

ನವದೆಹಲಿ, ಏ. 24 (ಯುಎನ್‌ಐ, ಪಿಟಿಐ)– ಐದು ಸಾವಿರ ಕೋಟಿ ರೂಪಾಯಿ ಮೌಲ್ಯದ ವೈದ್ಯಕೀಯ ಉಪಕರಣಗಳ ಆಮದು ಹಗರಣ ತನಿಖೆ ವಿಳಂಬ ಆಗುತ್ತಿರುವುದಕ್ಕೆ ಕೇಂದ್ರ ಆರೋಗ್ಯ ಸಚಿವಾಲಯ ಹಾಗೂ ಆರೋಗ್ಯ ಸೇವೆ ನಿರ್ದೇಶನಾಲಯಗಳನ್ನು ತರಾಟೆಗೆ ತೆಗೆದುಕೊಂಡ ದೆಹಲಿ ಹೈಕೋರ್ಟ್, ಈ ಹಗರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಬೇಕು ಎಂದು ಸೂಚಿಸಿತು.

- **ಪೊಲೀಸರ ಗುಂಡಿಗೆ ಚಿರತೆ, ಕಾರ್ಮಿಕನ ಬಲಿ**

ಬೆಂಗಳೂರು, ಏ. 24– ದಿಕ್ಕುತಪ್ಪಿ ಆಶ್ಚರ್ಯಕರ ರೀತಿಯಲ್ಲಿ ನಗರದೊಳಕ್ಕೆ ನುಸುಳಿದ ಗಂಡು ಚಿರತೆ ಮರಿಯೊಂದನ್ನು ಜೀವಸಹಿತ ಹಿಡಿಯಲು ವಿಫಲರಾದ ಪೊಲೀಸ್ ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿ ವಿವೇಚನಾರಹಿತವಾಗಿ ಯದ್ವಾತದ್ವಾ ಗುಂಡು ಹಾರಿಸಿ ಚಿರತೆಯನ್ನು ಕೊಂದುದಲ್ಲದೆ, ಚಿರತೆಯ 'ಬೇಟೆ' ನೋಡುತ್ತಿದ್ದ ಕಾರ್ಮಿಕನೊಬ್ಬನನ್ನು ಬಲಿ ತೆಗೆದುಕೊಂಡ ಘಟನೆ ಗುರುವಾರ ನಡೆದಿದೆ.

ಸತ್ತ ಚಿರತೆ ದೇಹವನ್ನು ಬನ್ನೇರುಘಟ್ಟ ಅರಣ್ಯಕ್ಕೆ ಒಯ್ಯಲಾಗಿದೆ. ಗುಂಡು ತಗುಲಿ ಮೃತಪಟ್ಟ ವ್ಯಕ್ತಿಯನ್ನು ಬಿಇಎಲ್ ಕಾರ್ಖಾನೆಯ ಕಾರ್ಮಿಕ ಮುರಳೀಧರನ್ ಎಂದು ಗುರುತಿಸಲಾಗಿದೆ. ಗುಂಡು ಕತ್ತಿನ ಮೂಲಕ ಪ್ರವೇಶಿಸಿ ಗಂಟಲಿನಿಂದ ಹೊರಬಂದ ಪರಿಣಾಮವಾಗಿ ಆತ ಮೃತಪಟ್ಟಿದ್ದಾನೆ ಎಂದು ಬಿಇಎಲ್ ಆಸ್ಪತ್ರೆಯ ಮೂಲಗಳು ತಿಳಿಸಿವೆ.

50 ವರ್ಷಗಳ ಹಿಂದೆ

ಮಂಗಳವಾರ, 25-4-1972

- **ವಿವಾಹಿತ ಮಹಿಳೆಗೆ ಸೇವಾ ನಿಯಮದಲ್ಲಿ ಇನ್ನು ಪಕ್ಷಪಾತವಿಲ್ಲ**

ನವದೆಹಲಿ, ಏ. 24– ಮದುವೆಯಾದ ಮಹಿಳೆಯರ ನೇಮಕದ ವಿರುದ್ಧ ಸೇವಾ ನಿಯಮಗಳಲ್ಲಿರುವ ಕೆಲವು ಪಕ್ಷಪಾತಗಳನ್ನು ನಿವಾರಿಸುವ ಸರ್ಕಾರದ ನಿರ್ಧಾರವನ್ನು ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ಲೋಕಸಭೆಯಲ್ಲಿ ಪ್ರಕಟಿಸಿದರು.

ಕಾಂಗ್ರೆಸ್ ಸದಸ್ಯರು ಈ ಪ್ರಕಟಣೆಯನ್ನು ಹರ್ಷೋದ್ಗಾರಗಳಿಂದ ಸ್ವಾಗತಿಸಿದರು.

ಸರ್ಕಾರಿ ಸೇವಾ ನಿಯಮಗಳಲ್ಲಿ ಮಹಿಳೆಯರ ವಿರುದ್ಧ ಪಕ್ಷಪಾತವಿದೆಯೆಂದು ಕಾಂಗ್ರೆಸ್ಸಿನ ಶ್ರೀಮತಿ ಟಿ. ಲಕ್ಷ್ಮೀಕಾಂತಮ್ಮ ಅವರು ದೂರುತ್ತಿದ್ದರೆಂದು ಶ್ರೀಮತಿ ಗಾಂಧಿ ಹೇಳಿದರು. ಸರ್ಕಾರಿ ಉದ್ಯೋಗದಲ್ಲಿರುವ ಮಹಿಳೆಯರು ಮದುವೆಯಾದರೆ ಅವರನ್ನು ಕೆಲಸದಿಂದ ತೆಗೆದುಹಾಕಬಹುದು. ಇನ್ನು ಕೆಲವು ಪ್ರಕರಣಗಳಲ್ಲಿ ವಿವಾಹಿತ ಮಹಿಳೆಯರು ಉದ್ಯೋಗಕ್ಕೆ ಅರ್ಹರಾಗುವುದಿಲ್ಲ.

ನಗುವಿನ ಅಲೆಗಳ ನಡುವೆ ಸ್ವತಂತ್ರ ಪಕ್ಷದ ಶ್ರೀ ಪಿಲೂ ಮೋದಿ ಅವರು ಅಚ್ಚರಿ ಸೂಚಿಸುತ್ತಾ ನುಡಿದರು: 'ಪುರುಷರ ವಿರುದ್ಧ ತೋರಲಾಗುತ್ತಿರುವ ಪಕ್ಷಪಾತವನ್ನೂ ದಯವಿಟ್ಟು ಪರಿಶೀಲಿಸಿರಿ'.

ಆಮ್ ಆದ್ಮಿ ಪಕ್ಷ ಮತ್ತು ರೈತ ಚಳವಳಿಯ ಗುರಿಗಳು ಒಗ್ಗೂಡುವ ಚೌಕಟ್ಟು ಸಿದ್ಧವಾಗಬಹುದೇ?

ರೈತರೂ ಆಮ್ ಆದ್ಮಿಯೂ ಎತ್ತ ಹೊರಟಿದ್ದಾರೆ?

ವಿಶ್ಲೇಷಣೆ

ನಟರಾಜ್ ಹುಳಿಯಾರ್

ಮೂರು ವರ್ಷಗಳ ಕೆಳಗೆ ರಾಜ್ಯ ರೈತಸಂಘದ ಪುಟ್ಟಣ್ಣಯ್ಯ ಬಣವನ್ನೊಳಗೊಂಡ ಸರ್ವೋದಯ ಕರ್ನಾಟಕ ಪಕ್ಷವು ಯೋಗೇಂದ್ರ ಯಾದವರ 'ಸ್ವರಾಜ್ ಇಂಡಿಯಾ'ದಲ್ಲಿ ಲೀನವಾಯಿತು. ಮೊನ್ನೆ ಕೋಡಿಹಳ್ಳಿ ಚಂದ್ರಶೇಖರ್ ಬಣದ ರೈತಸಂಘವು ಆಮ್ ಆದ್ಮಿ ಪಕ್ಷದಲ್ಲಿ ಲೀನವಾಗದೆ ಸ್ವತಂತ್ರ ಅಸ್ತಿತ್ವವನ್ನು ಉಳಿಸಿಕೊಂಡೇ ಅದರ ಜೊತೆಗೂಡಿದೆ. 'ಎಎಪಿ ರೈತಸಂಘದ ರಾಜಕೀಯ ಮುಖವಾಣಿ' ಎಂದು ರೈತಸಂಘ ಘೋಷಿಸಿದೆ.

ಕಳೆದ ವರ್ಷ ಕೋಡಿಹಳ್ಳಿ ಅವರು ಕೆಎಸ್‌ಆರ್‌ಟಿಸಿ ನೌಕರರ ಮುಷ್ಕರದ ನೇತೃತ್ವ ವಹಿಸಿದ್ದ ಕಾಲದಲ್ಲಿ ಎಎಪಿ ಆ ಮುಷ್ಕರಕ್ಕೆ ಬೆಂಬಲ ಕೊಟ್ಟಿತ್ತು. ಆಗ ಶುರುವಾದ ಸಂಬಂಧವು ರೈತಸಂಘ- ಎಎಪಿ ನಂಟಿಗೆ ಕಾರಣವಾಗಿರಬಹುದು. ದೇಶದೆಲ್ಲೆಡೆಯಲ್ಲಿ ಜನತಾ ಚಳವಳಿಗಳ ನಂಟಿನ ಅಗತ್ಯ ಎಎಪಿಗೆ ಇದೆ; ಪರಿಚಿತ ರಾಜಕೀಯ ಪಕ್ಷಗಳಿಗಿಂತ ಭಿನ್ನವಾದ ಪಕ್ಷವೊಂದರ ಅಗತ್ಯ ರೈತಸಂಘಕ್ಕೂ ಇದ್ದಂತಿದೆ. ಕೊಂಚ ಜನಬೆಂಬಲವಿರುವ ವ್ಯಕ್ತಿಗಳನ್ನು ತೆಕ್ಕೆಗೆ ತಂದುಕೊಂಡು ಲಾಭ ಪಡೆಯುವ ಎಎಪಿ ರಾಜಕೀಯ ಇಲ್ಲಿಯೂ ಮುಂದುವರಿದಿದೆ.

ಏಳು ವರ್ಷಗಳ ಕೆಳಗೆ ಎಎಪಿ ಪೂರ್ಣ ಪ್ರಮಾಣದಲ್ಲಿ ಅಧಿಕಾರಕ್ಕೆ ಬಂದಾಗ, ಹರಿಯಾಣದಲ್ಲಿ ಗಟ್ಟಿ ರೈತ ಸಂಘಟನೆ ಮಾಡಲು ಹೊರಟಿದ್ದ ಯೋಗೇಂದ್ರ ಯಾದವ್ ಅವರನ್ನು ಪಕ್ಷದಿಂದ ಹೊರಹಾಕಲಾಯಿತು. ಅರವಿಂದ ಕೇಜ್ರಿವಾಲ್ ಅವರಿಗಿಂತ ಭಿನ್ನವಾದ ನಾಯಕತ್ವವನ್ನು ಬೆಳೆಯಗೊಡದ ಎಎಪಿ ಧೋರಣೆಯೂ ಇದಕ್ಕೆ ಕಾರಣವಾಗಿತ್ತು. ಆದರೆ ಎಎಪಿ 2020ರಲ್ಲಿ ರೈತಶಕ್ತಿಯ ರಾಜಕೀಯ ಲಾಭ ಕಂಡುಕೊಂಡಿತು. ಕೇಜ್ರಿವಾಲ್ ದೆಹಲಿ ವಿಧಾನಸಭೆಯಲ್ಲಿ ಕೇಂದ್ರದ ಕೃಷಿ ಕಾನೂನು ಪ್ರತಿಗಳನ್ನು ಹರಿದುಹಾಕಿದ್ದರೂ, ಎಎಪಿಯು ಕೇಂದ್ರದ ಕಾನೂನುಗಳನ್ನು ವಿರೋಧಿಸಿ ಮಸೂದೆ ಮಂಡಿಸಿದ್ದು ಮಾತ್ರ ಕಾಂಗ್ರೆಸ್, ಟಿಎಂಸಿ ನೇತೃತ್ವದ ಸರ್ಕಾರಗಳು ಆ ಕೆಲಸ ಮಾಡಿದ ನಂತರವೇ. ಆದರೂ ಪಂಜಾಬಿನ ರೈತರು ಎಎಪಿ ಕೈ ಹಿಡಿದರು. ಆದರೆ ಟಿಕ್ರಿ ಗಡಿಯಲ್ಲಿನ ಉತ್ತರಪ್ರದೇಶ ಭಾಗದಲ್ಲಿ ರೈತರು ಎಎಪಿ ಕೈ ಹಿಡಿಯಲಿಲ್ಲ. ಕರ್ನಾಟಕದಲ್ಲಿ ಇನ್ನೂ ಬೆಂಗಳೂರು ಪಕ್ಷವಾಗಿರುವ ಎಎಪಿಗೆ ರೈತ ಸಂಘದ ಬೆಂಬಲ ಬೋನಸ್‌ನಂತೆ ಕಂಡಿರಬಹುದು.

ಮೊನ್ನೆಯ ಸಮಾವೇಶದಲ್ಲಿ ರೈತರು ಶೇ 80ರಷ್ಟು ಇದ್ದರೆ, ಎಎಪಿ ಕಾರ್ಯಕರ್ತರು ಶೇ 20ರಷ್ಟು ಮಾತ್ರ ಇದ್ದರೆಂಬ ಅಂದಾಜಿದೆ. ಇದು ಯಾರಿಗೆ ಯಾರ ಅಗತ್ಯ ಇದೆ ಎಂಬುದರ ಸೂಚಿಯಂತಿದೆ! ನಲವತ್ತು ವರ್ಷಗಳ ಇತಿಹಾಸವುಳ್ಳ ಕರ್ನಾಟಕದ ರೈತ ಚಳವಳಿ ಮೂವತ್ತೈದು ವರ್ಷಗಳ ಕೆಳಗೆ ಪ್ರಯತ್ನಿಸಿದ ರಾಜಕೀಯ ಪ್ರಯೋಗದ ತಾತ್ವಿಕ ತಳಹದಿ ಇಂದಿನ ಪ್ರಯೋಗಕ್ಕೂ ತಳಹದಿಯಾಗಬಲ್ಲದೇ ಎಂಬುದನ್ನು ನೋಡೋಣ: 1987ರಲ್ಲಿ ಪ್ರೊ. ಎಂ.ಡಿ.ನಂಜುಂಡಸ್ವಾಮಿ (ಎಂಡಿಎನ್) ನೇತೃತ್ವದ ರಾಜ್ಯ ರೈತಸಂಘ ಚುನಾವಣೆಗೆ ಇಳಿಯಲು ನಿರ್ಧರಿಸಿ, 'ಕನ್ನಡ ದೇಶ' ಪಕ್ಷವನ್ನು ಸ್ಥಾಪಿಸಿತು. ಎಂಡಿಎನ್ ಬರೆದ 'ಕನ್ನಡ ದೇಶ'ದ ಪ್ರಣಾಳಿಕೆಯು ಪ್ರಾದೇಶಿಕ ಅಗತ್ಯಗಳಿಗೆ ಒತ್ತು ಕೊಡುವ ಯಾವುದೇ ಪಕ್ಷಕ್ಕೆ ಅತ್ಯುತ್ತಮ ಮಾದರಿಯಾಗಿದೆ.

ಈ ಪ್ರಣಾಳಿಕೆಯನ್ನು ಈಗ ಪ್ರಸ್ತಾಪಿಸಲು ಕಾರಣವಿದೆ: ಯಾವುದೇ ಜನತಾ ಚಳವಳಿಯು ರಾಜಕೀಯ ಪಕ್ಷವಾದಾಗ, ರಾಜಕೀಯ ಪಕ್ಷದ ಜೊತೆ ಕೈಜೋಡಿಸಿದಾಗ ಆ ಚಳವಳಿ ತನ್ನ ಆವರೆಗಿನ ಉದ್ದೇಶವನ್ನು ಎಷ್ಟರಮಟ್ಟಿಗೆ ಚುನಾವಣಾ ರಾಜಕಾರಣದ ಮೂಲಕ ಈಡೇರಿಸಿಕೊಳ್ಳಲು ಹೊರಟದೆ ಎಂಬುದೇ ಮುಖ್ಯ ಪ್ರಶ್ನೆ. 'ಕನ್ನಡ ದೇಶ'ದ ಪ್ರಣಾಳಿಕೆಯಲ್ಲಿ ಕರ್ನಾಟಕ, ರೈತರು ಹಾಗೂ ಜನಸಾಮಾನ್ಯರನ್ನೇ ಕೇಂದ್ರವಾಗಿಸಿಕೊಂಡ ಮಹತ್ವದ ಅಂಶಗಳಿವೆ: ಭಾಷೆ, ಶಿಕ್ಷಣ ನೀತಿ, ಉತ್ಪಾದನಾ ನೀತಿ, ಬೆಲೆ ನೀತಿ, ರೈತರಿಗೆ ವಿಶೇಷ ಕಾರ್ಯಕ್ರಮಗಳು, ಬರಗಾಲ ನಿರ್ಮೂಲನೆ, ಪರಿಸರ, ಸಹಕಾರಿ ಕ್ಷೇತ್ರದ ಸುಧಾರಣೆ; ಕಾರ್ಮಿಕರು, ಪರಿಶಿಷ್ಟರು, ಹಿಂದುಳಿದವರು ಮತ್ತು ಮೀಸಲಾತಿ; ಅಲ್ಪಸಂಖ್ಯಾತರು, ಚುನಾವಣಾ ಸುಧಾರಣೆ, ಸಂಪನ್ಮೂಲ ಸಂಗ್ರಹ, ಸ್ವಾಯತ್ತತೆ, ಕೇಂದ್ರ- ರಾಜ್ಯ ಸಂಬಂಧಗಳು. ವಿಕೇಂದ್ರೀಕರಣ, ದ್ವಿಪೌರತ್ವ, ಶಕ್ತಿಯುತ ಗ್ರಾಮಗಳು, ಮಹಿಳೆಯರಿಗೆ ಸಮಾನ ಆಸ್ತಿ ಹಕ್ಕು... ಇವೆಲ್ಲವನ್ನೂ ಇಲ್ಲಿ ವಿವರವಾಗಿ ಚರ್ಚಿಸಲಾಗಿದೆ.

'ಇಂತಹ ವಿಚಾರವುಳ್ಳ ರಾಜ್ಯ ಪಕ್ಷಗಳು ಭಾರತದ ಏಕತೆಯನ್ನು ಬಲಪಡಿಸಲು ಎಲ್ಲ ರಾಜ್ಯಗಳಲ್ಲಿಯೂ ಈ ಕೂಡಲೇ ರಚನೆಯಾದರೆ ಮತ್ತು ಇಂತಹ ಪಕ್ಷಗಳ ಒಕ್ಕೂಟವು ಕೇಂದ್ರದಲ್ಲಿ ಸರ್ಕಾರ ನಡೆಸಿದರೆ ಮಾತ್ರ ಜನತೆಯ ಸಮಸ್ಯೆಗಳಿಗೆ ಶೀಘ್ರ ಪರಿಹಾರ ಸಾಧ್ಯ' ಎಂದು ಪ್ರಣಾಳಿಕೆ ಘೋಷಿಸುತ್ತದೆ. ಇದೀಗ ಪ್ರಬಲ ಕೇಂದ್ರದ ವಿರುದ್ಧ ತಮಿಳುನಾಡು, ಪಶ್ಚಿಮ ಬಂಗಾಳ ಸರ್ಕಾರಗಳು ಎತ್ತುತ್ತಿರುವ ಪ್ರಶ್ನೆಗಳಿಗೆ ಸಮರ್ಥವಾದ ವಿಕೇಂದ್ರೀಕರಣದ ಪರಿಹಾರವನ್ನು ಪ್ರಣಾಳಿಕೆ ಆ ಕಾಲದಲ್ಲೇ ಕೊಟ್ಟಿದೆ. ಈಗ ಕೇಂದ್ರದ ಹಿಡಿತದಲ್ಲಿರುವ ಯಾವ ಯಾವ ಬಾಬ್ತುಗಳು ರಾಜ್ಯಪಟ್ಟಿಗೆ ಬರಬೇಕೆಂಬುದನ್ನೂ ಪ್ರಣಾಳಿಕೆ ಸವಿಸ್ತಾರವಾಗಿ ಹೇಳುತ್ತದೆ.

ಆದರೆ ಕೆಲವು ಕಾರಣಗಳಿಂದಾಗಿ 1989ರ ವಿಧಾನಸಭಾ ಚುನಾವಣೆಯಲ್ಲಿ ರೈತ ಸಂಘದ ಅಭ್ಯರ್ಥಿಗಳು ಕನ್ನಡ ದೇಶದಿಂದ ಸ್ಪರ್ಧಿಸದೆ, ರೈತ ಸಂಘದಿಂದಲೇ ಸ್ಪರ್ಧಿಸಿದರು. ಎರಡು ಕ್ಷೇತ್ರಗಳಿಂದ ಆಯ್ಕೆಯಾದ ಬಾಬಾಗೌಡ ಪಾಟೀಲ ಅವರು ತೆರವು ಮಾಡಿದ ಧಾರವಾಡ ಗ್ರಾಮೀಣ ಕ್ಷೇತ್ರದಿಂದ ಎಂಡಿಎನ್ ಗೆದ್ದರು. ಮುಂದೆ ಕೆ.ಎಸ್.ಪುಟ್ಟಣ್ಣಯ್ಯ ಅವರು ಪಾಂಡವಪುರದಿಂದ ಗೆದ್ದರು. ರೈತಸಂಘದ ಒತ್ತಾಯಗಳು, ಎಂಡಿಎನ್ ವಿಶ್ಲೇಷಣೆಗಳು ಸದನದ ಚರ್ಚೆಯ ದಿಕ್ಕನ್ನೇ ಬದಲಿಸಿದವು.



ಈ ಹಿನ್ನೆಲೆಯಲ್ಲಿ ಇವತ್ತು ಎಎಪಿ ಜೊತೆ ಕೈ ಜೋಡಿಸಿರುವ ರೈತ ಸಂಘವು ರಾಜ್ಯದ ರೈತರ ಹಿತಾಸಕ್ತಿ ಹಾಗೂ ರಾಜ್ಯದ ಸಂಪನ್ಮೂಲಗಳನ್ನು ಹೆಚ್ಚಿಸುವ ಸಮರ್ಥ ಸಾಮಾಜಿಕ ನ್ಯಾಯದ ಮೂಲಪ್ರಣಾಳಿಕೆಯನ್ನು ಎಎಪಿಗೆ ಹೇಗೆ ಮನವರಿಕೆ ಮಾಡಿಕೊಡುತ್ತದೆ ಎಂಬುದು ಮುಖ್ಯ ಪ್ರಶ್ನೆ. ವಿದ್ಯುತ್, ಶಾಲೆ, ಆಸ್ಪತ್ರೆ, ಭ್ರಷ್ಟಾಚಾರ ರಹಿತ ಆಡಳಿತದ ಮಾತು ಬಿಟ್ಟರೆ ಬೇರಾವುದೇ ತಾತ್ವಿಕ ತಳಹದಿಯಿಲ್ಲದಂತೆ ಕಾಣುವ ಎಎಪಿಗೆ ಕರ್ನಾಟಕದ ರೈತ ಚಳವಳಿ ತಾತ್ವಿಕ ಸ್ಪಷ್ಟತೆ ಒದಗಿಸಬಲ್ಲದೇ? ಅಂಥ ಬೌದ್ಧಿಕ ಸಿದ್ಧತೆ ಎಂಡಿಎನ್ ನಂತರದ ರೈತ ಚಳವಳಿಯಲ್ಲಿ ಉಳಿದಿದೆಯೇ? ರೈತ ಚಳವಳಿಯ ಬಗ್ಗೆ ಯೋಗೇಂದ್ರ ಯಾದವರಿಗೆ ಇದ್ದ ತಾತ್ವಿಕ ಸ್ಪಷ್ಟತೆಯನ್ನು, ರೈತ ರಾಜಕಾರಣದ ಆಳವಾದ ಜ್ಞಾನವನ್ನು ಬಳಸಿಕೊಳ್ಳಲಾರದೆ ಹೊರಗಟ್ಟಿದ ಎಎಪಿ ಈಗ ರೈತಸಂಘದ ಗುರಿ, ಉದ್ದೇಶಗಳನ್ನು ಅರ್ಥ ಮಾಡಿಕೊಳ್ಳಬಲ್ಲದೇ? ಯೋಗೇಂದ್ರ ಯಾದವರ ಲೋಹಿಯಾವಾದಿ ನೋಟಗಳು ಕೂಡ ದೇಶದ ದೊಡ್ಡ ರೈತ ಚಳವಳಿಯನ್ನು ಕಟ್ಟಲು ನೆರವಾಗಿದ್ದನ್ನು ಎಎಪಿ ಅರ್ಥ ಮಾಡಿಕೊಂಡಿದೆಯೇ?

ಯಾವುದೇ ಆರೋಗ್ಯಕರ ರಾಜಕೀಯ ಧ್ರುವೀಕರಣವನ್ನು ಸಿನಿಕತೆಯಿಂದ ನೋಡಬಾರದು. ಭ್ರಷ್ಟಾಚಾರ ವಿರೋಧಿ ಆಂದೋಲನದ ಅಲೆಯಲ್ಲಿ ತೇಲಿಬಂದ ಎಎಪಿ ಕೆಲಬಗೆಯ ಭ್ರಷ್ಟಾಚಾರಗಳಿಗೆ ಕಡಿವಾಣ ಹಾಕಿರುವುದಂತೂ ನಿಜ. ಎಎಪಿಯನ್ನು ಬೆಂಬಲಿಸುವ ತರುಣ ತರುಣಿಯರಲ್ಲಿರುವ ಮೇಲ್ವದರದ ಕಾಳಜಿಗಳು, ಎಲ್ಲ ಅರ್ಥದಲ್ಲೂ 'ಆಮ್ ಆದ್ಮಿ'ಯಾದ ರೈತರ ಪರವಾದ ಕಾಳಜಿಯಾಗುವಂತೆ ರೈತಸಂಘ ಮಾಡಬಲ್ಲದೇ? ಕರ್ನಾಟಕದ ಎಎಪಿ ಅಂಥದ್ದೊಂದು ತಾತ್ವಿಕ ಚಲನೆಗೆ ನಾಂದಿ ಹಾಡಬಲ್ಲದೇ?

ಮೊನ್ನೆ ದೆಹಲಿಯಲ್ಲಿ ನಡೆಯುತ್ತಿದ್ದ ಬುಲ್ಡೋಜರ್ ಕಾರ್ಯಾಚರಣೆಯ ವಿರುದ್ಧ ದನಿಯೆತ್ತದ ಎಎಪಿ ಬಗ್ಗೆ ಕರ್ನಾಟಕದಲ್ಲಿ 'ಗೋ ಬ್ಯಾಕ್ ಕೇಜ್ರಿವಾಲ್' ಟ್ವಿಟರ್ ಅಭಿಯಾನ ಬಿರುಸಾಗಿದ್ದರ ಪರಿಣಾಮ: ದೆಹಲಿಯ ಉಪಮುಖ್ಯಮಂತ್ರಿ ಮನಿಶ್ ಸಿಸೋಡಿಯಾ, ಬುಲ್ಡೋಜರ್ ಕಾರ್ಯಾಚರಣೆಯ ವಿರುದ್ಧ ಖಡಕ್ ಹೇಳಿಕೆ ಕೊಟ್ಟೇಬಿಟ್ಟರು! ಹೀಗೆ ಜನಾಭಿಪ್ರಾಯದ ಬಗ್ಗೆ ಅಷ್ಟಿಷ್ಟಾದರೂ ಕಿವಿ ತೆರೆದಿರುವ ಎಎಪಿ ಪಂಜಾಬಿನಲ್ಲಿ ಅಧಿಕಾರಕ್ಕೆ ಬರಲು ರೈತ ಚಳವಳಿಯೂ ಕಾರಣ.

ಇತ್ತ ಕರ್ನಾಟಕದ ರೈತ ಚಳವಳಿಯೇ ದೇಶದ ಮೊದಲ ವ್ಯಾಪಕ ಭ್ರಷ್ಟಾಚಾರ ವಿರೋಧಿ ಆಂದೋಲನ. ಮೊನ್ನೆ ಎಂ.ಡಿ. ನಂಜುಂಡಸ್ವಾಮಿಯವರ ಚಿಂತನೆಗಳ 'ಬಾರುಕೋಲು' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ರೈತ ಚಳವಳಿಯ ಉತ್ತುಂಗದ ಕಾಲದಲ್ಲಿ ಭ್ರಷ್ಟ ಅಧಿಕಾರಿಗಳು ನಡುಗುತ್ತಿದ್ದುದನ್ನು ನೆನಸಿಕೊಂಡರು. ಭ್ರಷ್ಟ ಅಧಿಕಾರಿಗಳಿಗೆ ಇಂಥ ಭಯ ಎಎಪಿ ಬಗ್ಗೆ ಹುಟ್ಟಿದಂತಿಲ್ಲ. ಆದರೆ ಆಧುನಿಕ ತಂತ್ರಜ್ಞಾನ ಬಳಸಿ ಸರ್ಕಾರಿ ಭ್ರಷ್ಟಾಚಾರದ ಬಾಲ ಕತ್ತರಿಸುವ ಕೆಲವು ಮಾರ್ಗಗಳನ್ನಂತೂ ಎಎಪಿ ಕಂಡುಕೊಂಡಿದೆ. ಅಧಿಕಾರಶಾಹಿಯಡಿ ನರಳುತ್ತಿರುವ ಕರ್ನಾಟಕದ ರೈತರಿಗೆ ಎಎಪಿ ಮಾರ್ಗ ಪ್ರಿಯವಾದರೆ ಅಚ್ಚರಿಯಲ್ಲ.

ಎಎಪಿ ಮತ್ತು ರೈತರ ಕೆಲವು ಗುರಿಗಳನ್ನಾದರೂ ಒಗ್ಗೂಡಿಸುವ ಚೌಕಟ್ಟು ಕರ್ನಾಟಕದಿಂದಲೂ ಸಿದ್ಧವಾಗಬಹುದಲ್ಲವೇ?

ಚುರುಮುರಿ

ಹೊಸ ಹತ್ಯಾರುಗಳು

• ಸುಮಂಗಲಾ

ಬೆಕ್ಕಣ್ಣ ಕಳೆದ ವಾರದಿಂದ, 'ಬುಲ್ಡೋಜರ್ ಸಪ್ಲೈದು ಹೊಸ ಬಿಸಿನೆಸ್ ಶುರು ಮಾಡತೀನಿ, ನೀ ಸ್ವಲ್ಪ ಬಂಡವಾಳ ಹಾಕು' ಎಂದು ಒಂದೇ ಸಮನೆ ವರಾತ ಹಚ್ಚಿತ್ತು.

'ನಾ ಏನ್ ರೊಕ್ಕದ ಗಿಡ ಹಾಕೀನೇನು? ಹಿಂತಾ ಮನೆಮುರುಕ ಕೆಲಸಕ್ಕೆಲ್ಲ ರೊಕ್ಕ ಇದ್ರೂ ಕೊಡಂಗಿಲ್ಲ' ಎಂದು ಸಮಾ ಬೈದ ಮೇಲೆ ಸುಮ್ಮನಾದ ಬೆಕ್ಕಣ್ಣ, ಲ್ಯಾಪ್‌ಟಾಪಿನಲ್ಲಿ ತಲೆ ಹುದುಗಿಸಿ ಏನೋ ಮಾಡುತ್ತಲೇ ಇತ್ತು.

'ನಿನ್ ಬಂಡವಾಳನೂ ಬ್ಯಾಡ, ಬಿಟ್ಟಿ ಉಪದೇಶನೂ ಬ್ಯಾಡ. ಸ್ವಂತ ಡಿಸೈನ್ ಕಂಪನಿ ಶುರು ಮಾಡೀನಿ' ಎಂದು ಇವತ್ತು ಬೀಗುತ್ತ ಹೇಳಿತು.

'ಏನಲೇ ಅದೂ... ಬಂಡ್ವಾಳಿಲ್ಲದ ಬಡಾಯಿ' ಎಂದು ಕಿಚಾಯಿಸಿದೆ.

'ವಿಶೇಷ ಟೂಲ್‌ಗಳನ್ನ ವಿನ್ಯಾಸ ಮಾಡೀನಿ' ಎಂದು ತೋರಿಸತೊಡಗಿತು.

'ಇದು ರೌಂಡ್ ಬುಲ್ಡೋಜರ್... ಎಲ್ಲಾದರ ಹಂಗೆ ಇದಕ್ಕೂ ಮುಂದೆ ದೊಡ್ಡ ಬ್ಲೇಡ್ ಇರತೈತಿ. ಇದ್ರ ವಿಶೇಷತೆ ಅಂದರ ಯಾವ ಗಲಭೆಕೋರರ ಮನೆ ನಾಶ ಮಾಡಬೇಕಂತ ಸೂಚನೆ ಕೊಟ್ಟರೆ ಸಾಕು, ಒಳಗಿರೋ ಈ ರೌಂಡ್ ಬ್ಲೇಡ್ ಸುತ್ತಲೂ ಹೊರಗೆ ಚಾಚಿ, ಒಂದ್ ನಿಮಿಷದಾಗೆ ಕೆಲಸ ಮುಗಿಸತೈತಿ. ನಮ್ಮಲ್ಲೂ ಬುಲ್ಡೋಜರ್ ಕಾನೂನು ತರೂಣಂತ ಅಶೋಕಣ್ಣ, ಕಟೀಲಣ್ಣ ಕಟಿಪಿಟಿ ಶುರುಮಾಡ್ಯಾರ. ಈ ಡಿಸೈನ್ ಅವರಿಗೆ ಕಳಿಸತೀನಿ'.

'ಆಮ್ಯಾಗ ಇವು ಹೊಸಾ ನಮೂನಿ ತ್ರಿಶೂಲಗಳು. ನೋಡಕ್ಕ ಕೋಲಿನಂಗೆ ಇರತಾವು, ಈ ಬಟನ್ ಒತ್ತಿದರ ಸಾಕು ತ್ರಿಶೂಲವಾಗತೈತಿ. ಇವು ವಿಶಿಷ್ಟ ಮಾಯಾ ಕತ್ತರಿಗಳು, ಅಂದ್ರ ವರ್ಚುವಲ್ ಕತ್ತರಿಗಳು... ಸೂಚನೆ ಕೊಟ್ಟರ ಆತು, ಪಠ್ಯಪುಸ್ತಕದೊಳಗ ಯಾವ್ಯಾವುದಕ್ಕೆ ಕತ್ತರಿ ಹಾಕಬಕು ಅಂತ ಅದೇ ನಿರ್ಧಾರ ಮಾಡಿ ತೆಗೆದುಹಾಕತೈತಿ. ಇದು ನಿಮಗೆ ಅಂದರ ಶ್ರೀ-ಸಾಮಾನ್ಯರಿಗೆ ವಿಶೇಷ ಚಿಪ್. ತಲಿಗೆ ಇಂಪ್ಲಾಂಟ್ ಮಾಡಿದರಾತು, ನಾವು ಮತ್ತು ಅವರು, ಅವರಿಗೇನ್ ಮಾಡಬಕು ಅಂತೆಲ್ಲ ತಂತಾನೆ ತಿಳೀತೈತಿ'.

ಬೆಕ್ಕಣ್ಣ ಹತ್ತಾರು ಹೊಸ ಹತ್ಯಾರುಗಳ ವಿನ್ಯಾಸದ ಜೊತೆಗೆ, ಇವನ್ನು ಆರ್ಡರ್ ಮಾಡಿದ ಗ್ರಾಹಕರ ಪಟ್ಟಿಯನ್ನೂ ತೋರಿಸಿತು!

ಸಂಗತ

ಇ- ಮೋಸದ ಈ ಜಗತ್ತು

ಪರ್ಸ್‌ನಿಂದ ಕಳವಾಗುತ್ತದೆ ಎಂದು ಎಚ್ಚರದಿಂದ ಇರುತ್ತಿದ್ದ ಜನ, ಈಗ ತಲೆಕೆಡಿಸಿಕೊಳ್ಳಬೇಕಾದ್ದು ತಮ್ಮ ಸ್ಮಾರ್ಟ್ ಫೋನ್‌ಗಳಲ್ಲಿರುವ ಪಾಸ್‌ವರ್ಡ್, ಯುಪಿಐ ಪಿನ್‌ಗಳ ಬಗ್ಗೆ

• ಡಾ. ಕೆ.ಎಸ್.ಪವಿತ್ರ

ಪ್ರತಿದಿನ ಬೇಡದ ಎಷ್ಟು ಕರೆಗಳಿಗೆ ನೀವು ಉತ್ತರಿಸುತ್ತೀರಿ?! ಎಷ್ಟು ಬಾರಿ ಒಟಿಪಿ- ಯುಪಿಐ ಪಿನ್ ಕೊಡಬೇಡಿ ಎಂಬ ಬ್ಯಾಂಕುಗಳ ಸಂದೇಶಗಳನ್ನು ಎಚ್ಚರದಿಂದ ಗಮನಿಸುತ್ತೀರಿ? ಈ ಪ್ರಶ್ನೆಗಳನ್ನು ಕೇಳಿಕೊಳ್ಳಲೇಬೇಕಾದ ಸಮಯವೀಗ ಬಂದಿದೆ. ಇ-ಮೋಸ, ಬ್ಯಾಂಕಿಂಗ್ ಮೋಸಗಳು ಎಷ್ಟು ಸಾಮಾನ್ಯವೆಂದರೆ, ಇಂದು ಯಾರಿಗೂ ಅವು ಅಚ್ಚರಿಯನ್ನುಂಟು ಮಾಡುವುದಿಲ್ಲ.

ಕಳೆದ ಒಂದು ವರ್ಷದಲ್ಲಿ ಪ್ರತಿದಿನಕ್ಕೆ 229ರಂತೆ ಇ-ಮೋಸಗಳು, ಇ-ಕಳವಿನಿಂದ ಜನರು ಸುಮಾರು ಒಂದೂವರೆ ಲಕ್ಷ ಕೋಟಿ ರೂಪಾಯಿಗಳನ್ನು ಕಳೆದುಕೊಂಡಿದ್ದಾರೆ. ಅದರಲ್ಲಿ ಕಳೆದುಕೊಂಡವರಿಗೆ ಮರಳಿ ದೊರಕಿರುವುದು ಕೇವಲ ಶೇ 1 ಅಷ್ಟೆ! ಜಾಗತಿಕವಾಗಿ ನೋಡಿದರೆ, ಭಾರತೀಯರು ಹೀಗೆ ಮೋಸ ಹೋಗುವುದರಲ್ಲಿ ಬಲು ಮುಂದೆ. ಅದರರ್ಥ ಮೋಸ ಮಾಡುವವರೂ ಇಲ್ಲಿ ಹೆಚ್ಚು ಎಂದೇ. ಪರ್ಸ್‌ನಿಂದ ಕಳವಾಗುತ್ತದೆ ಎಂದು ಎಚ್ಚರದಿಂದ ಇರುತ್ತಿದ್ದ ಜನ, ಈಗ ತಲೆಕೆಡಿಸಿಕೊಳ್ಳಬೇಕಾದ್ದು ತಮ್ಮ ಸ್ಮಾರ್ಟ್ ಫೋನ್‌ಗಳಲ್ಲಿರುವ ಪಾಸ್‌ವರ್ಡ್, ಯುಪಿಐ ಪಿನ್‌ಗಳ ಬಗ್ಗೆ!

ಇ-ಮೋಸ ಈಗ ವೈವಿಧ್ಯಮಯ ಬೇರೆ. 'ಯಾವುದೋ ವ್ಯಕ್ತಿ ಬ್ಯಾಂಕಿನಲ್ಲಿ ಎಷ್ಟೋ ದುಡ್ಡಿಟ್ಟು ಸತ್ತಿದ್ದಾನೆ. ನನಗೆ ಅದು ದೊರಕಿದೆ, ಹಾಗಾಗಿ ನಿಮ್ಮ ಬ್ಯಾಂಕ್ ಅಕೌಂಟ್ ವಿವರ ನೀಡಿದರೆ ಅದಕ್ಕೆ ವರ್ಗಾಯಿಸಿ ನಾವಿಬ್ಬರೂ ಲಾಭ ಪಡೆಯಬಹುದು' ಎಂಬ ಸಂದೇಶ ನಿಮ್ಮ ಇ-ಮೇಲ್‌ಗೆ ಮತ್ತೆ ಮತ್ತೆ ಬರಬಹುದು. ಫೇಸ್‌ಬುಕ್‌ನಲ್ಲಿ ನಿಮ್ಮ ಅಕೌಂಟ್ ಹ್ಯಾಕ್ ಮಾಡಿ, ನಿಮ್ಮ ಸ್ನೇಹಿತರಿಂದ ದುಡ್ಡು ಕೀಳಬಹುದು, ನೀವು ಖರೀದಿಸಿದ ಪುಸ್ತಕದ ಬದಲು ಬೇರೆ ಪುಸ್ತಕ ನಿಮಗೆ ಬಂದು, ನೀವು ಹಿಂತಿರುಗಿಸಲು ಕರೆ ಮಾಡಿದರೆ, ಮಾತನಾಡುತ್ತಾ ಹಲವು ವಿವರ ಕೇಳಿ, ಕ್ಷಣಮಾತ್ರದಲ್ಲಿ ನಿಮ್ಮ ಅಕೌಂಟಿನಿಂದ ದುಡ್ಡು ಮಾಯವಾಗಬಹುದು. ಒಂದೇ ಎರಡೇ, ಕೊನೆಗೆ ನಿಜವಾದ ಬ್ಯಾಂಕಿನಿಂದ ವಿವರ ಕೇಳುವ ಕರೆ ಬಂತೆಂದರೂ ಜನ ಮಾತನಾಡಲೇ ಹೆದರುವಷ್ಟು ಅಸುರಕ್ಷಿತ ಈ ಜಗತ್ತು!

ಇ-ಮೋಸಗಳನ್ನು ಮಾಡುವವರು ಸಾಮಾನ್ಯವಾಗಿ ಒಳ್ಳೆಯ ಶಿಕ್ಷಣವಿರುವ, ಬುದ್ಧಿವಂತ, ಆದರೆ ನಿರುದ್ಯೋಗಿಗಳಾದ ಯುವಕರು. ಸುಲಭವಾಗಿ ದೊರಕುವ ಹಣ, ಮೋಸ ಹೋಗುವವರ ಮನಸ್ಸನ್ನು ಅರಿಯುವ ಜಾಣತನ ಅವರನ್ನು ಆ ದಾರಿಯಲ್ಲಿ ಮುನ್ನಡೆಯುವಂತೆ ಪ್ರೇರೇಪಿಸುತ್ತವೆ. ಆನ್‌ಲೈನ್‌ನಲ್ಲಿ ವ್ಯಕ್ತಿಯನ್ನು ಭೇಟಿ ಮಾಡಬೇಕಾದ ಅವಶ್ಯಕತೆ ಇರದಿರುವುದು, ಧ್ವನಿಯ ಏರಿಳಿತಗಳ ಮೂಲಕವೇ ನಂಬಿಕೆ-ವಿಶ್ವಾಸ ಹುಟ್ಟಿಸಬಹುದಾದ ಅವಕಾಶವು ಇ-ಮೋಸವನ್ನು ಸುಲಭವಾಗಿಸುತ್ತವೆ.

ಮೋಸ ಹೋಗುವವನ ಮನಃಸ್ಥಿತಿಯ ಬಗ್ಗೆ ಮನೋವಿಜ್ಞಾನ ಹೇಳುವುದೇನು? ಬ್ಯಾಂಕುಗಳು, ಮಾರಾಟ ಕಂಪನಿಗಳು ಮತ್ತೆ ಮತ್ತೆ ಸಂದೇಶ ಕಳುಹಿಸಿ ಎಚ್ಚರಿಸಿದರೂ ಜನ ಅದನ್ನು ಅಲಕ್ಷಿಸಿ ಮೋಸ ಹೋಗುವುದೇಕೆ? ಇದಕ್ಕೆ ಹಲವು ಉತ್ತರಗಳಿವೆ. ಯಾವುದೇ ಕಾರ್ಯವನ್ನು ಮಾಡುವಾಗ ಅದನ್ನು ಸಾವಧಾನವಾಗಿ ಮಾಡಿದಷ್ಟೂ ನಾವು ಎಚ್ಚರದಿಂದ ಮಾಡುವ ಸಾಧ್ಯತೆ ಹೆಚ್ಚು. ಆದರೆ ಇಂದು ನಮಗ್ಯಾರಿಗೂ ಸಮಯವಿಲ್ಲ. ಗೂಗಲ್ ಪೇ- ಫೋನ್ ಪೇ ಉಪಯೋಗಿಸುವಾಗ, ನೀಡುವ ಸೂಚನೆಗಳಲ್ಲಿ ಪ್ರಮುಖವಾದದ್ದು 'ಬಿಡುವಿಲ್ಲದಿರುವಾಗ, ನೀವು ಮತ್ತೊಂದು ಕೆಲಸ ಮಾಡುತ್ತಿರುವಾಗ ಇದನ್ನು ಹಣ ನೀಡಲು ಉಪಯೋಗಿಸಬೇಡಿ'. ಆದರೆ ಓಡಾಡುತ್ತಲೇ, ಮಾತನಾಡುತ್ತಲೇ ಗೂಗಲ್- ಫೋನ್ ಪೇ ಮೂಲಕ ಪಾವತಿ ಮಾಡುವವರು ಅದೆಷ್ಟು ಜನ! ಒಂಟಿತನ, ಸಾಮಾಜಿಕವಾಗಿ ಬೆರೆಯದಿರುವುದು ನಮ್ಮನ್ನು ಅಂತರ್ಜಾಲಕ್ಕೆ ಮತ್ತಷ್ಟು ಅಂಟಿಕೊಳ್ಳುವಂತೆ ಮಾಡುತ್ತವೆ. ಮೋಸ ಹೋಗುವ ಸಾಧ್ಯತೆ ಹೆಚ್ಚಿಸುತ್ತವೆ.

ಇವುಗಳಲ್ಲದೆ ಭಾರತೀಯರಲ್ಲಿ ಹೆಚ್ಚು ಮೋಸ ಹೋಗಲು ಕಾರಣವಾಗುವ ಮತ್ತೊಂದು ಅಂಶವೂ ಇದೆ. ಅದೆಂದರೆ 'ಏ ಪರವಾಗಿಲ್ಲ, ಏನೂ ಆಗೋಲ್ಲ' ಎಂಬ ಉಡಾಫೆಯ ಧೋರಣೆ. ಹಾಗಾಗಿ ತಮ್ಮ ಗುರುತು- ಇ-ಮೇಲ್- ಬ್ಯಾಂಕ್ ಖಾತೆಗಳ ಪಾಸ್‌ವರ್ಡ್‌ಗಳನ್ನು ಮುಕ್ತವಾಗಿ ಎಲ್ಲೆಂದರಲ್ಲಿ ಬಳಸುವುದು ಸರ್ವೇ ಸಾಮಾನ್ಯ. ಹಾಗೆಯೇ ಯಾವುದೇ ಸಂದೇಶವು ಸರ್ಕಾರ-ತೆರಿಗೆ ಇಲಾಖೆ- ಪೊಲೀಸ್- ಬ್ಯಾಂಕ್‌ಗಳಿಂದ ಎಂದಾಕ್ಷಣ ಹಿಂದೆ ಮುಂದೆ ನೋಡದೆ ಮಾಹಿತಿ ನೀಡುವುದು ಕಂಡುಬರುತ್ತದೆ.

ಮೋಸ ಹೋದ ಬಹಳಷ್ಟು ಜನ ಆ ಕ್ಷಣದಲ್ಲಿ ಅನುಭವಿಸುವ ಹತಾಶೆ ಎಷ್ಟು ತೀವ್ರವೆಂದರೆ, ದೂರು ನೀಡಲೂ ಬಹು ಜನ ಮುಂದಾಗುವುದಿಲ್ಲ. ಇ-ಮೋಸ ತಡೆಯುವ ಉಪಾಯಗಳನ್ನು ನಾವು ಇಂದು ಕಲಿಯಲೇಬೇಕಾದ ಹೊತ್ತು. ಏನು ಮಾಡಬೇಕು? ನಮ್ಮ ಪ್ರತಿಕ್ರಿಯೆಗಳನ್ನು ನಾವು ರೂಪಿಸಿಕೊಳ್ಳಬೇಕು. ದಾರಿಯಲ್ಲಿ ಅಪರಿಚಿತರೊಡನೆ ಮಾತನಾಡದಿರುವುದು, ಪರಿಚಯವಿಲ್ಲದವರಿಗೆ ಬಾಗಿಲು ತೆರೆಯದಿರುವುದು, ಸಹಪ್ರಯಾಣಿಕನೊಡನೆ ಎಲ್ಲವನ್ನೂ ಹೇಳಿಕೊಳ್ಳದಿರುವುದು ಇವು ನಮ್ಮ ಸುರಕ್ಷತೆಯ ಅಂಗವಾಗಿ ಕಲಿತಿರುವ ಅಂಶಗಳಷ್ಟೆ. ಈ ಕೌಶಲಗಳೇ ಇಂದು ಇ-ಜಗತ್ತಿಗೂ ಅನ್ವಯಿಸಲ್ಪಡಬೇಕು. ತತ್‌ಕ್ಷಣ ಪ್ರತಿಕ್ರಿಯಿಸುವ, ಹಣ ವರ್ಗಾವಣೆ ಮಾಡುವ ಪ್ರವೃತ್ತಿಗೆ ಕಡಿವಾಣ ಹಾಕಬೇಕು. ಈ ತಕ್ಷಣ 'ಕೊಳ್ಳಬೇಕು' ಎನಿಸಿದರೆ, ಕೆಲ ಗಂಟೆಗಳ ಕಾಲವಾದರೂ ಮುಂದೆ ಹಾಕಲು ಪ್ರಯತ್ನಿಸಬೇಕು.

ಡಿಜಿಟಲ್ ಜಗತ್ತು ಡಿಜಿಟಲ್ ಮೋಸಗಳನ್ನು ಅನಿವಾರ್ಯವಾಗಿ ಹೊಂದಿರುತ್ತದೆ ಎಂಬ ತಿಳಿವಿನಿಂದ, ಎಚ್ಚರದಿಂದ ಮಿದುಳು-ಮನಸ್ಸು ಮತ್ತು ಸ್ವೈಪ್ ಮಾಡುವ ಬೆರಳು ವರ್ತಿಸಬೇಕು.

ವಾಚಕರ ವಾಣಿ

ದೇವಾಲಯ ಇನ್ನಾದರೂ ತೆರೆಯಲಿ

ಕೆಆರ್‌ಎಸ್ ಅಣೆಕಟ್ಟೆಯ ಹಿನ್ನೀರಿನಲ್ಲಿ ಮುಳುಗಿಹೋಗಿದ್ದ ಶ್ರೀ ವೇಣುಗೋಪಾಲಸ್ವಾಮಿ ದೇವಾಲಯವನ್ನು ಖೋಡೆ ಫೌಂಡೇಷನ್ ವತಿಯಿಂದ ಸಮೀಪದ ಗ್ರಾಮಕ್ಕೆ ಸ್ಥಳಾಂತರ ಮಾಡಿ, ಅದನ್ನು ಪುನರ್‌ನಿರ್ಮಿಸಿ ಲೋಕಾರ್ಪಣೆಗೊಳಿಸಿದ್ದು ಸರಿಯಷ್ಟೆ. ಆದರೆ ಕೋವಿಡ್ ಸಂದರ್ಭದಲ್ಲಿ ಸುರಕ್ಷತೆಯ ಕಾರಣಕ್ಕೆ ಮುಚ್ಚಲಾದ ದೇವಾಲಯವನ್ನು ಇದುವರೆಗೂ ತೆರೆದಿಲ್ಲ. ರಾಜ್ಯದ ಮೂಲೆಮೂಲೆಯಿಂದ ಬರುವ ಭಕ್ತಾದಿಗಳು, ಪ್ರವಾಸಿಗರಿಗೆ ಇದರಿಂದ ತೀವ್ರ ನಿರಾಸೆಯಾಗುತ್ತಿದೆ. ಶೀಘ್ರದಲ್ಲಿ ದೇವಾಲಯವನ್ನು ತೆರೆಯಲು ಕ್ರಮ ಕೈಗೊಳ್ಳಬೇಕು.

ಜೆ.ಬಿ.ಮಂಜುನಾಥ, ಪಾಂಡವಪುರ

ಪ್ರತಿಭಾವಂತರ ಪಾಡು ಕೇಳುವವರಾರು?

ಪಿಎಸ್‌ಐ ನೇಮಕಾತಿಯಲ್ಲಿನ ಅಕ್ರಮದ ಎಳೆಗಳು ಒಂದೊಂದಾಗಿ ಬಿಚ್ಚಿಕೊಳ್ಳುತ್ತಿವೆ. ಇನ್ನು ಅದಕ್ಕೆ ಅಂಟಿಕೊಂಡಂತೆ ಹಲವಾರು ಇಲಾಖೆಗಳ ನೇಮಕಾತಿಯಲ್ಲಿ ನಡೆದ ಭ್ರಷ್ಟಾಚಾರಗಳು ಹೊರಬೀಳುತ್ತಿವೆ. ಇವುಗಳಿಗೆಲ್ಲ ಹೊಣೆ ಯಾರು, ಈ ವ್ಯವಸ್ಥೆ ಸ್ವಚ್ಛವಾಗುವುದು ಯಾವಾಗ, ಹೀಗೆ ಪ್ರತೀ ನೇಮಕಾತಿಯಲ್ಲೂ ಅಕ್ರಮ ನಡೆಯುತ್ತಾ ಹೋದರೆ ಪ್ರಾಮಾಣಿಕ ಬಡ ವಿದ್ಯಾರ್ಥಿಗಳ ಪಾಡೇನು, ಈ ಅಕ್ರಮಗಳ ನಡುವೆ ಪ್ರತಿಭಾವಂತ ಆಕಾಂಕ್ಷಿ ಗಳು ಮೂಲೆಗುಂಪಾದರೆ ಸಮಾಜವು ಉದಯೋನ್ಮುಖ ಬೆಳವಣಿಗೆ ಕಾಣುವುದಾದರೂ ಯಾವಾಗ? ಮುಂಬರುವ ನೇಮಕಾತಿಗಳಲ್ಲಾದರೂ ಸರ್ಕಾರ ಸುವ್ಯವಸ್ಥಿತವಾದ ಕಾನೂನು ಕ್ರಮಗಳನ್ನು ಜಾರಿಗೆ ತಂದು ಅಕ್ರಮಗಳಿಗೆ ಕಡಿವಾಣ ಹಾಕಲಿ.

ಜಯರಾಜ ತೋಳದ್, ಮಲ್ಲಿಗೆವಾಡ, ಕೊಪ್ಪಳ

ಚಿಲ್ಲರೆ ಸಮಸ್ಯೆ ತಪ್ಪಿಸಿ

ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಪ್ರಯಾಣಿಸುವಾಗ ಚಿಲ್ಲರೆ ಇಟ್ಟುಕೊಳ್ಳದಿದ್ದರೆ ನಿರ್ವಾಹಕರೊಂದಿಗೆ ಕಿರಿಕಿರಿ ತಪ್ಪಿದ್ದಲ್ಲ. ಇತ್ತೀಚೆಗೆ ಬಸ್ ಪ್ರಯಾಣ ಮಾಡಿದಾಗ, ಟಿಕೆಟ್‌ಗಳ ದರವನ್ನು ನೋಡಿ, ಎಷ್ಟು ಚಿಲ್ಲರೆ ಇದ್ದರೂ ಕಷ್ಟ ಅನಿಸಿತು. ಯಾಕೆಂದರೆ ಟಿಕೆಟ್ ದರ ₹ 71, ₹ 81 ಎಂದೆಲ್ಲ ಇರುತ್ತದೆ. ಎಷ್ಟೋ ಸಲ ಟಿಕೆಟ್ ಹಿಂದೆ ಬಾಕಿ ಚಿಲ್ಲರೆ ಮೊತ್ತವನ್ನು ಬರೆದುಕೊಟ್ಟಿದ್ದರೂ ಮರೆತು ಇಳಿದು, ಮುಂದೆ ಜ್ಞಾಪಕ ಆದಾಗ ನಿರ್ವಾಹಕರನ್ನು ಶಪಿಸಿಕೊಂಡದ್ದಿದೆ. ಆದರೆ ಈಗಿನ ತಂತ್ರಜ್ಞಾನ ಬಳಸಿಕೊಂಡು ಚಿಲ್ಲರೆ ಹಣವನ್ನು ಮುಂದೆ ನಾವು ಪ್ರಯಾಣ ಮಾಡುವಾಗ ಬಳಸುವಂತೆ ಮಾಡಿದರೆ, ಸಾರ್ವಜನಿಕರಿಗೆ ಬಹಳ ಅನುಕೂಲ ಆಗಬಹುದು. ಜೊತೆಗೆ ನಿರ್ವಾಹಕರ ಜೊತೆಗಿನ ಕಿರಿಕಿರಿಯೂ ತಪ್ಪಲಿದೆ.

ಹರವೆಸಂಗಣ್ಣಪ್ರಕಾಶ್, ಹರವೆ, ಚಾಮರಾಜನಗರ

ಎಲ್ಲಿ ಅರಸೋಣ ಕ್ರೀಡಾಸ್ಫೂರ್ತಿ?

ಜೀವನದಲ್ಲಿ ನೊಂದು ಬೆಂದವರಿಗೆ, ಸಾಧನೆಯಲ್ಲಿ ವೈಫಲ್ಯ ಹೊಂದಿದವರಿಗೆ ಅದನ್ನು ಕ್ರೀಡಾ ಮನೋಭಾವದಿಂದ ಸ್ವೀಕರಿಸುವಂತೆ ಹೇಳುವುದುಂಟು. ಇಂದು ನಾವು ಆಟಗಳಲ್ಲಿ ಅದರಲ್ಲೂ ಕ್ರಿಕೆಟ್‌ನಲ್ಲಿ ಪರಸ್ಪರ ದ್ವೇಷ ಉಕ್ಕಿಸುವ, ಕುಚೇಷ್ಟೆ, ಅಪಹಾಸ್ಯ ಮಾಡುವಂತಹ ನಡೆಯನ್ನು ನೋಡುತ್ತಿದ್ದೇವೆ. ಒಂದು ಚಿಕ್ಕ ತಪ್ಪಿಗೆ ಅಥವಾ ಸಹ ಆಟಗಾರ ಸರಿಯಾಗಿ ಆಡದಿದ್ದರೆ ಬ್ಯಾಟ್ ಎತ್ತಿ ಒಗೆಯುವಂತಹ ಕೆಟ್ಟ ಹವ್ಯಾಸಗಳನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಇದನ್ನು ಲಕ್ಷಾಂತರ ಮಂದಿ ನೋಡುತ್ತಿರುತ್ತಾರೆ ಎನ್ನುವ ಅರಿವು ಇರುವುದಿಲ್ಲವೇ?

ಗಲ್ಲಿ ಗಲ್ಲಿಗಳಲ್ಲಿ ಮಕ್ಕಳು ಇದೇ ರೀತಿ ಗಲಾಟೆ ಮಾಡುತ್ತಾ, ಹೊಡೆದಾಡಿಕೊಳ್ಳುತ್ತಾರೆ. ಕ್ರೀಡಾ ಸ್ಫೂರ್ತಿ ನಮ್ಮ ಕ್ರೀಡಾಳುಗಳಲ್ಲಿಯೇ ಇಲ್ಲ ಎಂದಾದರೆ ಇನ್ನು ಅದನ್ನು ಎಲ್ಲಿ ಅರಸುವುದು? ಒಮ್ಮೆ ಟಿ.ವಿ. ಜಾಹೀರಾತನ್ನು ಹೀಗೆ ಕೊಡುತ್ತಿದ್ದರು: ನಿಮ್ಮ ಮನೆಗೆ ಟಿ.ವಿ., ಪಕ್ಕದ ಮನೆಯವರಿಗೆ ಹೊಟ್ಟೆಯುರಿ. ಕ್ರೀಡೆಯಲ್ಲಿ ಸೋಲು ಗೆಲುವು ಸಹಜ ಎನ್ನುವ ಭಾವನೆಯನ್ನು ಆಟಗಾರರು ಮೊದಲು ಬೆಳೆಸಿಕೊಂಡು, ಕ್ರೀಡಾಳುಗಳಿಗೆ ಇರುವ ಗೌರವ, ಬೆಲೆ, ಆದರ್ಶವನ್ನು ಕಾಯ್ದುಕೊಳ್ಳಬೇಕು.

ಎಂ.ಪರಮೇಶ್ವರ, ಮದ್ದಿಹಳ್ಳಿ, ಹಿರಿಯೂರು

ಸರ್ಕಾರಿ ಯೋಜನೆ: ಜನಜಾಗೃತಿ ಆದ್ಯತೆಯಾಗಲಿ

11-ಇ ನಕ್ಷೆ, ಪೋಡಿ ಮತ್ತು ಭೂ ಪರಿವರ್ತನೆ ನಕ್ಷೆಗಳನ್ನು ಭೂ ಒಡೆಯರೇ ಮಾಡಿಕೊಳ್ಳಬಹುದಾದ ವ್ಯವಸ್ಥೆಯನ್ನು ಜಾರಿಗೆ ತರಲು ಸರ್ಕಾರ ಮುಂದಾಗಿದೆ. ಈ ನಡೆ ಸ್ವಾಗತಾರ್ಹ. ನಾಗರಿಕರು ತಮ್ಮ ಆಸ್ತಿಗಳನ್ನು ಹಿಸ್ಸೆ ಮಾಡಿಕೊಂಡು ಏಕಪಹಣಿಯಾಗಿ ಬದಲಾಯಿಸಿಕೊಳ್ಳಲು ನರಕಯಾತನೆ ಪಡುವ ಸ್ಥಿತಿ ಇದೆ. ಸರ್ಕಾರದ ಎಷ್ಟೋ ಕಾರ್ಯಕ್ರಮಗಳು ವಿಫಲಗೊಳ್ಳಲು ಪ್ರಮುಖ ಕಾರಣವೇ ಅದರ ಬಗ್ಗೆ ಜನರಲ್ಲಿ ಅರಿವು ಮೂಡಿಸದೇ ಇರುವುದು. ಈ ಉದ್ದೇಶಿತ ಯೋಜನೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದೇ ಸರ್ಕಾರದ ಪ್ರಥಮ ಆದ್ಯತೆಯಾಗಿರಲಿ.

ಆದರ್ಶ ಖೋತ, ಅನಂತಪುರ, ಅಥಣಿ

ತಂತ್ರಗಾರನು ಗೆಲುವಿನ ರೂವಾರಿಯೇ?

ಒಂದು ಪಕ್ಷವು ಚುನಾವಣೆಯನ್ನು ಗೆಲ್ಲಲು ಒಬ್ಬ ತಂತ್ರಗಾರನಷ್ಟೇ ಸಾಕು ಎನ್ನುವ ಹೊಸ ಸೂತ್ರ ಅಳವಡಿಸಿಕೊಂಡರೆ ಇನ್ನುಮುಂದೆ 'ಇದು ಪ್ರಜಾಪ್ರಭುತ್ವ ಅಲ್ಲ ತಂತ್ರ ಪ್ರಭುತ್ವ' ಎಂದಾಗುತ್ತದೆ. ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಅವರು ಗೆಲುವು ಸಾಧಿಸಿದ್ದು ಪ್ರಶಾಂತ್ ಕಿಶೋರ್ ಅವರ ತಂತ್ರಗಾರಿಕೆಯಿಂದ ಅಲ್ಲ. ಬಿಜೆಪಿ ಅಧಿಕಾರಕ್ಕೆ ಬರುವುದನ್ನು ತಡೆಯಬೇಕೆಂಬ ಜಿದ್ದಿನಲ್ಲಿ 'ಮಗ ಸತ್ತರೂ ಪರವಾಗಿಲ್ಲ ಸೊಸೆ ರಂಡೆಯಾಗಬೇಕು' ಎನ್ನುವ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಕ್ಷಗಳ ಧೋರಣೆಯಿಂದ. ಭ್ರಷ್ಟತೆಯನ್ನೇ ದೊಡ್ಡ ಅಸ್ತ್ರ ಮಾಡಿಕೊಂಡು ಬಿಜೆಪಿಯನ್ನು ಪರ್ಸೆಂಟೇಜ್ ಸರ್ಕಾರ ಎಂದು ಬಿಂಬಿಸಿ ಮತದಾರರನ್ನು ಗೆಲ್ಲಲು ಸಾಧ್ಯವಾಗಬೇಕಾದರೆ, ವಿರೋಧ ಪಕ್ಷಗಳು ಅಧಿಕಾರದಲ್ಲಿ ಇದ್ದಾಗ ಭ್ರಷ್ಟತೆ ಇರಲಿಲ್ಲ ಎಂದಿರಬೇಕು. ನಿಜಸಂಗತಿಯನ್ನು ಮತದಾರ ಬಲ್ಲ.

ಒಂದು ರೂಪಾಯಿಯಲ್ಲಿ ಕೇವಲ 17 ಪೈಸೆ ತೆರಿಗೆ ಹಣ ಸದ್ವಿನಿಯೋಗವಾಗುತ್ತದೆ ಎಂದು 30 ವರ್ಷಗಳ ಹಿಂದೆಯೇ ರಾಜೀವ್ ಗಾಂಧಿ ಸ್ಪಷ್ಟ ಮಾತುಗಳಲ್ಲಿ ಭ್ರಷ್ಟತೆಯನ್ನು ವರ್ಣಿಸಿದ್ದರು. ಸಾವಿಲ್ಲದ ಮನೆಯಿಂದ ಸಾಸಿವೆ ತರುವುದು ಹೇಗೆ ಅಸಾಧ್ಯವೋ ಭ್ರಷ್ಟನಲ್ಲದ ರಾಜಕಾರಣಿಯನ್ನು ಪತ್ತೆ ಹಚ್ಚುವುದೂ ಕಷ್ಟ. ಯಾವ ಪಕ್ಷದ ಭೂತ, ವರ್ತಮಾನದ ಬಗ್ಗೆ ಚರ್ಚೆ ಬೇಡ, ಏನಿದ್ದರೂ ಇನ್ನು ಮುಂದೆ ನಾವು ಭ್ರಷ್ಟತೆಯನ್ನು ನಿರ್ಮೂಲ ಮಾಡುತ್ತೇವೆ ಎಂದು ಮತದಾರರಲ್ಲಿ ನಂಬಿಕೆ ಮೂಡಿಸಿ, ಆಚರಣೆಗೆ ತಂದರೆ ಅದೇ ಪ್ರಾಮಾಣಿಕ ತಂತ್ರಗಾರಿಕೆ.

ಸತ್ಯಬೋಧ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನಿರೀಕ್ಷಿತ ಜೀವಿತಾವಧಿಗೆ ಜಾತಿಯ ನಂಟು

ಭಾರತದ ಜನರ ಜನನ ಸಂದರ್ಭದಲ್ಲಿನ ನಿರೀಕ್ಷಿತ ಜೀವಿತಾವಧಿಯು ಒಂದೇ ರೀತಿಯಲ್ಲಿ ಇಲ್ಲ. ನಿರೀಕ್ಷಿತ ಜೀವಿತಾವಧಿಗೆ ಜಾತಿಯ ಜತೆಗೆ ನೇರ ನಂಟು ಇದೆ ಎಂಬುದನ್ನು ಇತ್ತೀಚಿನ ಅಧ್ಯಯನವೊಂದು ಹೇಳಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ 1997–2000 ಮತ್ತು 2013–2016ರ ದತ್ತಾಂಶಗಳ ಆಧಾರದಲ್ಲಿ ಈ ಅಧ್ಯಯನ ನಡೆಸಲಾಗಿದೆ. ಈ ಅಧ್ಯಯನದ ಪ್ರಕಾರ, ಪ್ರಬಲ ಎಂದು ಪರಿಗಣಿಸಲಾಗಿರುವ ಜಾತಿಗಳಿಗೆ ಹೋಲಿಸಿದರೆ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರ ನಿರೀಕ್ಷಿತ ಜೀವಿತಾವಧಿಯು ಬಹಳ ಕಡಿಮೆ ಇದೆ

ಪರಿಶಿಷ್ಟ ಪಂಗಡಗಳ ಪುರುಷರಿಗೆ ಕನಿಷ್ಠ ಆಯುಷ್ಯ

ಪರಿಶಿಷ್ಟ ಜಾತಿಗಳ ಮಹಿಳೆಯರಿಗೆ ಕಡಿಮೆ ಆಯಸ್ಸು

ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರೆ ಹಿಂದುಳಿದ ವರ್ಗಗಳು | ಮೇಲ್ವರ್ಗ ಎಂದು ಪರಿಗಣಿಸಲಾಗುವ ಜಾತಿಗಳು | ಮುಸ್ಲಿಂ | ರಾಷ್ಟ್ರೀಯ ಸರಾಸರಿ

ಪುರುಷರ ಜೀವಿತಾವಧಿ ನಿರೀಕ್ಷೆ



- ದೇಶದ ಎಲ್ಲಾ ಪುರುಷರಿಗೆ ಹೋಲಿಸಿದರೆ ಪರಿಶಿಷ್ಟ ಪಂಗಡಗಳಿಗೆ ಸೇರಿದ ಪುರುಷರ ನಿರೀಕ್ಷಿತ ಜೀವಿತಾವಧಿ ತೀರಾ ಕಡಿಮೆ. ಅತಿಹೆಚ್ಚು ನಿರೀಕ್ಷಿತ ಜೀವಿತಾವಧಿ ಹೊಂದಿರುವ ಪ್ರಬಲ ಎಂದು ಪರಿಗಣಿಸಲಾಗುವ ಜಾತಿಗಳ ಪುರುಷರಿಗೆ ಹೋಲಿಸಿದರೆ, ಪರಿಶಿಷ್ಟ ಪಂಗಡಕ್ಕೆ ಸೇರಿದ ಪುರುಷರ ನಿರೀಕ್ಷಿತ ಜೀವಿತಾವಧಿಯು ಸರಾಸರಿ 7 ವರ್ಷಗಳಷ್ಟು ಕಡಿಮೆ
- ಪರಿಶಿಷ್ಟ ಜಾತಿಗಳಿಗೆ ಸೇರಿದ ಪುರುಷರ ನಿರೀಕ್ಷಿತ ಜೀವಿತಾವಧಿಯು, ಪ್ರಬಲ ಎಂದು ಪರಿಗಣಿಸಲಾಗುವ ಜಾತಿಗಳಿಗೆ ಸೇರಿದ ಪುರುಷರಿಗಿಂತ ಸರಾಸರಿ 6 ವರ್ಷಗಳಷ್ಟು ಕಡಿಮೆ. ಆದರೆ, ಪರಿಶಿಷ್ಟ ಪಂಗಡಗಳಿಗೆ ಸೇರಿದ ಪುರುಷರಿಗೆ ಹೋಲಿಸಿದರೆ ಪರಿಶಿಷ್ಟ ಜಾತಿಯ ಪುರುಷರ ನಿರೀಕ್ಷಿತ ಜೀವಿತಾವಧಿಯು ಸರಾಸರಿ 0.9 ವರ್ಷಗಳಷ್ಟು ಹೆಚ್ಚು
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪುರುಷರಿಗೆ ಹೋಲಿಸಿದರೆ, ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಪುರುಷರು ಹೆಚ್ಚುಕಾಲ ಬದುಕುತ್ತಾರೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಪ್ರಬಲ ಎಂದು ಪರಿಗಣಿಸಲಾಗುವ ಜಾತಿಗಳಿಗೆ ಸೇರಿದ ಪುರುಷರಿಗೆ ಹೋಲಿಸಿದರೆ, ಈ ವರ್ಗಗಳ ಪುರುಷರ ನಿರೀಕ್ಷಿತ ಜೀವಿತಾವಧಿ ಕಡಿಮೆ

ಮಹಿಳೆಯರ ಜೀವಿತಾವಧಿ ನಿರೀಕ್ಷೆ



- ದೇಶದ ಎಲ್ಲಾ ಮಹಿಳೆಯರಿಗೆ ಹೋಲಿಸಿದರೆ ಪರಿಶಿಷ್ಟ ಜಾತಿಗಳಿಗೆ ಸೇರಿದ ಮಹಿಳೆಯರ ನಿರೀಕ್ಷಿತ ಜೀವಿತಾವಧಿ ತೀರಾ ಕಡಿಮೆ. ಅತಿಹೆಚ್ಚು ನಿರೀಕ್ಷಿತ ಜೀವಿತಾವಧಿ ಹೊಂದಿರುವ ಪ್ರಬಲ ಎಂದು ಪರಿಗಣಿಸಲಾಗುವ ಜಾತಿಗಳ ಮಹಿಳೆಯರಿಗೆ ಹೋಲಿಸಿದರೆ, ಪರಿಶಿಷ್ಟ ಜಾತಿಗೆ ಸೇರಿದ ಮಹಿಳೆಯರ ನಿರೀಕ್ಷಿತ ಜೀವಿತಾವಧಿಯು ಸರಾಸರಿ 4.4 ವರ್ಷಗಳಷ್ಟು ಕಡಿಮೆ
- ಪರಿಶಿಷ್ಟ ಪಂಗಡಗಳಿಗೆ ಸೇರಿದ ಮಹಿಳೆಯರ ನಿರೀಕ್ಷಿತ ಜೀವಿತಾವಧಿಯು, ಪ್ರಬಲ ಎಂದು ಪರಿಗಣಿಸಲಾಗುವ ಜಾತಿಗಳಿಗೆ ಸೇರಿದ ಮಹಿಳೆಯರಿಗಿಂತ ಸರಾಸರಿ 4.2 ವರ್ಷಗಳಷ್ಟು ಕಡಿಮೆ. ಆದರೆ, ಪರಿಶಿಷ್ಟ ಜಾತಿಗಳಿಗೆ ಸೇರಿದ ಮಹಿಳೆಯರಿಗೆ ಹೋಲಿಸಿದರೆ ಈ ಮಹಿಳೆಯರ ನಿರೀಕ್ಷಿತ ಜೀವಿತಾವಧಿಯು ಸರಾಸರಿ 0.2 ವರ್ಷಗಳಷ್ಟು ಹೆಚ್ಚು
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಹಿಳೆಯರಿಗೆ ಹೋಲಿಸಿದರೆ, ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಮಹಿಳೆಯರು ಹೆಚ್ಚುಕಾಲ ಬದುಕುತ್ತಾರೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಪ್ರಬಲ ಎಂದು ಪರಿಗಣಿಸಲಾಗುವ ಜಾತಿಗಳಿಗೆ ಸೇರಿದ ಮಹಿಳೆಯರಿಗೆ ಹೋಲಿಸಿದರೆ, ಈ ವರ್ಗಗಳ ಮಹಿಳೆಯರ ನಿರೀಕ್ಷಿತ ಜೀವಿತಾವಧಿ ಕಡಿಮೆ

ಪುರುಷ: ಹಿಗ್ಗಿದ ಅಂತರ

ಪ್ರಬಲ ಎಂದು ಪರಿಗಣಿಸಲಾಗುವ ಜಾತಿಗಳ ಪುರುಷರಿಗೆ ಹೋಲಿಸಿದರೆ ಉಳಿದೆಲ್ಲಾ ಜಾತಿಗಳು ಮತ್ತು ಧರ್ಮದ ಪುರುಷರ ನಿರೀಕ್ಷಿತ ಜೀವಿತಾವಧಿ ಅಂತರ



- 1997–2000ದ ನಡುವಣ ಅವಧಿಯಲ್ಲಿ, ಪ್ರಬಲ ಎಂದು ಪರಿಗಣಿಸಲಾಗುವ ಜಾತಿಗಳ ಪುರುಷರಿಗೆ ಹೋಲಿಸಿದರೆ, ಪರಿಶಿಷ್ಟ ಪಂಗಡಗಳಿಗೆ ಸೇರಿದ ಪುರುಷರ ನಿರೀಕ್ಷಿತ ಜೀವಿತಾವಧಿ ಸರಾಸರಿ 8.4 ವರ್ಷಗಳಷ್ಟು ಕಡಿಮೆ. 2013–2016ರ ಅವಧಿ ವೇಳೆಗೆ ಈ ಅಂತರವು 7 ವರ್ಷಗಳಿಗೆ ಇಳಿಕೆಯಾಗಿತ್ತು.
- 1997–2000ದ ನಡುವಣ ಅವಧಿಯಲ್ಲಿ, ಪ್ರಬಲ ಎಂದು ಪರಿಗಣಿಸಲಾಗುವ ಜಾತಿಗಳ ಪುರುಷರಿಗೆ ಹೋಲಿಸಿದರೆ, ಪರಿಶಿಷ್ಟ ಜಾತಿಗಳಿಗೆ ಸೇರಿದ ಪುರುಷರ ನಿರೀಕ್ಷಿತ ಜೀವಿತಾವಧಿಯು ಸರಾಸರಿ 4.6 ವರ್ಷಗಳಷ್ಟು ಕಡಿಮೆ. 2013–2016ರ ಅವಧಿ ವೇಳೆಗೆ ಈ ಅಂತರವು 6.1 ವರ್ಷಗಳಿಗೆ ಏರಿಕೆಯಾಗಿತ್ತು
- 1997–2000ದ ಅವಧಿಯಲ್ಲಿ, ಪ್ರಬಲ ಎಂದು ಪರಿಗಣಿಸಲಾಗುವ ಜಾತಿಗಳ ಪುರುಷರಿಗೆ ಹೋಲಿಸಿದರೆ, ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಪುರುಷರ ನಿರೀಕ್ಷಿತ ಜೀವಿತಾವಧಿ ಸರಾಸರಿ 2.7 ವರ್ಷಗಳಷ್ಟು ಕಡಿಮೆ. 2013–2016ರ ಅವಧಿ ವೇಳೆಗೆ ಈ ಅಂತರವು 3.9 ವರ್ಷಗಳಿಗೆ ಏರಿಕೆಯಾಗಿತ್ತು

ಮಹಿಳೆ: ಅಂತರ ಇಳಿಕೆ

ಪ್ರಬಲ ಎಂದು ಪರಿಗಣಿಸಲಾಗುವ ಜಾತಿಗಳ ಮಹಿಳೆಯರಿಗೆ ಹೋಲಿಸಿದರೆ ಉಳಿದೆಲ್ಲಾ ಜಾತಿಗಳು ಮತ್ತು ಧರ್ಮದ ಮಹಿಳೆಯರ ನಿರೀಕ್ಷಿತ ಜೀವಿತಾವಧಿ ಅಂತರ



- 1997–2000ದ ನಡುವಣ ಅವಧಿಯಲ್ಲಿ, ಪ್ರಬಲ ಎಂದು ಪರಿಗಣಿಸಲಾಗುವ ಜಾತಿಗಳ ಮಹಿಳೆಯರಿಗೆ ಹೋಲಿಸಿದರೆ, ಪರಿಶಿಷ್ಟ ಪಂಗಡಗಳಿಗೆ ಸೇರಿದ ಮಹಿಳೆಯರ ನಿರೀಕ್ಷಿತ ಜೀವಿತಾವಧಿ 7.3 ವರ್ಷಗಳಷ್ಟು ಕಡಿಮೆ. ಇದು ದೇಶದ ಬೇರೆಲ್ಲಾ ವರ್ಗಗಳಿಗೆ ಹೋಲಿಸಿದರೆ ಅತ್ಯಂತ ಗರಿಷ್ಠ ಅಂತರವಾಗಿತ್ತು. 2013–2016ರ ಅವಧಿ ವೇಳೆಗೆ ಈ ಅಂತರವು 4.2 ವರ್ಷಗಳಿಗೆ ಇಳಿಕೆಯಾಗಿತ್ತು
- 1997–2000ದ ನಡುವಣ ಅವಧಿಯಲ್ಲಿ, ಪ್ರಬಲ ಎಂದು ಪರಿಗಣಿಸಲಾಗುವ ಜಾತಿಗಳ ಮಹಿಳೆಯರಿಗೆ ಹೋಲಿಸಿದರೆ ಪರಿಶಿಷ್ಟ ಜಾತಿಗಳು ಮತ್ತು ಇತರೆ ಹಿಂದುಳಿದ ವರ್ಗಗಳ ಮಹಿಳೆಯರ ನಿರೀಕ್ಷಿತ ಜೀವಿತಾವಧಿ ಕಡಿಮೆ ಇತ್ತು. ಆದರೆ 2013–2016ನೇ ಅವಧಿಯ ವೇಳೆಗೆ ಈ ಅಂತರದಲ್ಲಿ ಇಳಿಕೆಯಾಗಿದೆ
- 1997–2000ರ ಅವಧಿಯಲ್ಲಿ ಪ್ರಬಲ ಎಂದು ಪರಿಗಣಿಸಲಾಗುವ ಜಾತಿಗಳ ಮಹಿಳೆಯರಿಗೆ ಹೋಲಿಸಿದರೆ ಮುಸ್ಲಿಂ ಮಹಿಳೆಯರ ನಿರೀಕ್ಷಿತ ಜೀವಿತಾವಧಿ ಕಡಿಮೆಯೇ ಇತ್ತು. ಆದರೆ 2013–2016ನೇ ಅವಧಿಯ ವೇಳೆಗೆ ಈ ಅಂತರದಲ್ಲಿ 0.7 ವರ್ಷಗಳಷ್ಟು ಏರಿಕೆಯಾಗಿದೆ

ಆಧಾರ: ಲಾರ್ಜ್ ಅಂಡ್ ಪೆರ್ಸಿಸ್ಟೆಂಟ್ ಲೈಫ್ ಎಕ್ಸ್‌ಪೆಕ್ಟೆನ್ಸಿ ಡಿಸ್‌ಪಾರ್ಟೀಸ್ ಬಿಟ್‌ವೀನ್ ಇಂಡಿಯಾಸ್ ಸೋಷಿಯಲ್ ಗ್ರೂಪ್ಸ್



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 103

ಶಿವನ ಪುಷ್ಪಾರ್ಚನೆ ವಿಧಾನ

ಋಷಿಮುನಿಗಳು ಶಿವನನ್ನು ಯಾವ ಹೂವುಗಳಿಂದ ಅರ್ಚಿಸಿದರೆ ಯಾವ ಯಾವ ಫಲಗಳು ಸಿಗುತ್ತವೆ ಎಂದು ಕೇಳುತ್ತಾರೆ. ಸೂತಮುನಿಯು 'ಎಲೈ ಶೌನಕಾದಿ ಋಷಿಗಳೇ, ಹಿಂದೆ ನಾರದನಿಗೆ ಶಿವನ ಪುಷ್ಪಾರ್ಚನೆಯ ವಿಧಿಯನ್ನು ಬ್ರಹ್ಮ ಹೇಳಿದ್ದ. ಅದನ್ನು ನಿಮಗೆ ಹೇಳುವೆನು,ಕೇಳಿ' ಎಂದು ಬ್ರಹ್ಮನು ನಾರದನಿಗೆ ಹೇಳಿದ್ದನ್ನು ವಿವರಿಸತೊಡಗುತ್ತಾನೆ.

ಸಂಪತ್ತನ್ನು ಅಪೇಕ್ಷಿಸುವವರು ಕಮಲಗಳಿಂದ, ಬಿಲ್ವಪತ್ರಗಳಿಂದ, ಶತಪತ್ರಗಳೆಂಬ ಕಮಲವಿಶೇಷಗಳಿಂದ ಮತ್ತು ಶಂಖಪುಷ್ಪಗಳಿಂದ ಶಿವನನ್ನು ಅರ್ಚಿಸಬೇಕು. ಪತ್ರ ಮತ್ತು ಪುಷ್ಪಗಳನ್ನು ಲಕ್ಷಸಂಖ್ಯೆಯಿಂದ ಪೂಜಿಸಬೇಕು. ಹಾಗೆ ಪೂಜಿಸಿದರೆ, ಪಾಪ ಪರಿಹಾರವಾಗಿ ಸಂಪತ್ತು ಅಭಿವೃದ್ಧಿಯಾಗುವುದು. ಇಪ್ಪತ್ತು ಕಮಲಗಳಿಗೆ ಒಂದು ಪ್ರಸ್ಥವೆಂದು ಹೆಸರು. ಸಾವಿರ ಬಿಲ್ವಪತ್ರಗಳಿಗೆ ಅರ್ಧಪ್ರಸ್ಥವಾಗುವುದು. ಸಾವಿರ ಶತಪತ್ರಪುಷ್ಪಗಳಿಗೂ ಅರ್ಧಪ್ರಸ್ಥವಾಗುತ್ತೆ. ಹತ್ತು ಟಂಕಗಳಿಗೆ ಒಂದು ಪಲವು. ಇಂತಹ ಹದಿನಾರು ಪಲಗಳಿಗೆ ಒಂದು ಪ್ರಸ್ಥ. ಈ ತೂಕದಂತೆ ಕಮಲ ಮುಂತಾದವುಗಳನ್ನು ಸಂಗ್ರಹಿಸಿ ಶಿವನನ್ನು ಫಲೇಚ್ಛೆಯಿಂದ ಅರ್ಚಿಸಿದರೆ ಸಕಲ ಇಷ್ಟಾರ್ಥಗಳೂ ಲಭಿಸುವುದು. ಫಲಕಾಮನೆಯಿಲ್ಲದೆ ಅರ್ಚಿಸಿದರೆ ಸಾಕ್ಷಚ್ಛಿವರೂಪವನ್ನೇ ಹೊಂದುವರು.

ರಾಜ್ಯವನ್ನು ಪಡೆಯಬೇಕೆಂದಿರುವವರು ಹತ್ತುಕೋಟಿ ಪಾರ್ಥಿವ ಲಿಂಗಗಳನ್ನು ಪುಷ್ಪಗಳಿಂದ ಅರ್ಚಿಸಿ ಮಹಾದೇವನನ್ನು ಸಂತೋಷಗೊಳಿಸಬೇಕು. ಶಿವನನ್ನು ಲಿಂಗ ಅಥವಾ ಅಖಂಡವಾದ ಪುಷ್ಪ, ತಂಡುಲ ರಾಶಿ, ಅಥವಾ ವಿಗ್ರಹ ಇವುಗಳಲ್ಲಿ ಮಂತ್ರಪೂರ್ವಕವಾಗಿ ಆವಾಹನೆ ಮಾಡಿ, ಗಂಧೋದಕ ಸ್ನಾನ, ಬಿಲ್ವಾರ್ಚನೆ, ಕಮಲಾರ್ಚನೆಗಳಿಂದ ಶತಪತ್ರಪೂಜೆ ಮಾಡಬೇಕು. ಅಲ್ಲದೆ, ಶಂಖಪುಷ್ಪಗಳು ಶಿವಪೂಜೆಗೆ ಪ್ರಶಸ್ತವಾದುವು. ಅವುಗಳನ್ನರ್ಪಿಸಿದರೆ ಇಹಪರಗಳೆರಡರಲ್ಲೂ ಇಷ್ಟಸಿದ್ಧಿಯಾಗುವುದು.

ಪುಷ್ಪಾರ್ಚನೆ ಮಾಡಿದ ಮೇಲೆ ಧೂಪ ದೀಪ ನೈವೇದ್ಯ ಅರ್ಘ್ಯ ಮಂಗಳಾರತಿ ಪ್ರದಕ್ಷಿಣೆ ನಮಸ್ಕಾರ ಕ್ಷಮಾಪಣೆ ಮತ್ತು ವಿಸರ್ಜನೆಗಳನ್ನು ಮಾಡಿ, ಸಾಂಗವಾಗಿ ಶಿವನನ್ನು ಪೂಜಿಸಬೇಕು. ಕೊನೆಯಲ್ಲಿ ಸದ್ಭಕ್ತರಿಗೆ ಮೃಷ್ಟಾನ್ನ ಭೋಜನ ಮಾಡಿಸಬೇಕು. ಹಾಗೆ ಮಾಡಿದರೆ ಶಂಕರನು ರಾಜ್ಯವನ್ನು ಕೊಡುವನು. ಗೌರವ-ಪ್ರತಿಷ್ಠಾದಿಗಳನ್ನು ಅಪೇಕ್ಷಿಸುವವರು ಐವತ್ತುಲಕ್ಷ ಶಂಖಪುಷ್ಪಗಳಿಂದ ಶಿವನನ್ನು ಅರ್ಚಿಸಬೇಕು.

ಬಂಧನದಲ್ಲಿರುವವರು ಕಾರಾಗೃಹ ನಿವೃತ್ತಿಗಾಗಿ ಲಕ್ಷ ಹೂವುಗಳಿಂದ ಶಿವನನ್ನು ಅರ್ಚಿಸಬೇಕು ಎನ್ನುತ್ತಾನೆ ಬ್ರಹ್ಮ.

ರೋಗದಿಂದ ನರಳುತ್ತಿರುವವರು ಐವತ್ತು ಸಾವಿರ ಪುಷ್ಪಗಳಿಂದ ಶಿವನನ್ನು ಅರ್ಚಿಸಬೇಕು. ಕನ್ಯೆಯನ್ನ ಅಪೇಕ್ಷಿಸುವವರು ಇಪ್ಪತ್ತೈದು ಸಾವಿರ ಪುಷ್ಪಗಳಿಂದ, ವಿದ್ಯೆಯನ್ನ ಅಪೇಕ್ಷಿಸುವವರು ಹದಿಮೂರು ಸಾವಿರ ಪುಷ್ಪಗಳಿಂದ, ಭಾಷಣಾ ಶಕ್ತಿಯನ್ನಪೇಕ್ಷಿಸುವವರು ತುಪ್ಪದಿಂದ ಶಿವನನ್ನು ಅರ್ಚಿಸಬೇಕು. ಶತ್ರುಗಳನ್ನು ಓಡಿಸಲು ಹದಿಮೂರುಸಾವಿರ ಪುಷ್ಪಗಳಿಂದ ಅರ್ಚಿಸಬೇಕು. ಶತ್ರುನಾಶಕ್ಕಾಗಿ ಲಕ್ಷ ಪುಷ್ಪಪೂಜೆಯನ್ನೂ, ಮೋಹಗೊಳಿಸುವುದಕ್ಕಾಗಿ ಅರ್ಧಲಕ್ಷ ಪುಷ್ಪ ಪೂಜೆಯನ್ನೂ, ಸಾಮಂತರಾಜರನ್ನು ಜಯಿಸಲು ಕೋಟಿ ಪುಷ್ಪಪೂಜೆಗಳನ್ನೂ ಮಾಡಬೇಕು. ರಾಜರನ್ನು ವಶಮಾಡಿಕೊಳ್ಳಲು ಹತ್ತುಸಾವಿರ ಪುಷ್ಪಪೂಜೆಗಳಿಂದಲೂ, ವಾಹನ ಮತ್ತು ಯಶಸ್ಸು ಮುಂತಾದುವುಗಳನ್ನು ಪಡೆಯಲು ಸಾವಿರ ಪೂಜೆಗಳಿಂದ ಶಿವನನ್ನರ್ಚಿಸಬೇಕು. ಮುಕ್ತಿಯನ್ನ ಅಪೇಕ್ಷಿಸುವವರು ಭಕ್ತಿಯಿಂದ ಐದುಕೋಟಿ ಪುಷ್ಪಾರ್ಚನೆಗಳನ್ನು ಮಾಡಬೇಕು.

ಜ್ಞಾನವನ್ನ ಅಪೇಕ್ಷಿಸುವವರು ಕೋಟಿ ಪುಷ್ಪಗಳಿಂದ ಶಿವನನ್ನು ಅರ್ಚಿಸಬೇಕು. ಶಿವನ ದರ್ಶನವನ್ನ ಅಪೇಕ್ಷಿಸುವವರು ಅರ್ಧಕೋಟಿ ಪುಷ್ಪಾರ್ಚನೆಗಳಿಂದ ಸುಖದಾಯಕನಾದ ಶಿವನನ್ನು ಆರಾಧಿಸಬೇಕು. ಮೃತ್ಯುಂಜಯ ಮಂತ್ರವನ್ನು ಐದುಲಕ್ಷ ಬಾರಿ ಜಪಿಸಿದರೆ ಶಿವನು ಪ್ರತ್ಯಕ್ಷನಾಗುವನು. ಮೃತ್ಯುಂಜಯ ಮಂತ್ರವನ್ನು ಒಂದು ಲಕ್ಷಬಾರಿ ಜಪಿಸಿದರೆ ಸಕಲ ಇಷ್ಟಸಿದ್ಧಿಯಾಗುವುದು. ಎರಡುಲಕ್ಷ ಜಪಿಸಿದರೆ ಉತ್ತಮ ದರ್ಜೆ ಲಭಿಸುವುದು. ಮೂರುಲಕ್ಷ ಜಪಿಸಿದರೆ ಅಲಭ್ಯವಾದ ವಸ್ತುಗಳು ಸಿದ್ಧಿಸುವುವು. ನಾಲ್ಕುಲಕ್ಷ ಜಪಿಸಿದರೆ ಶಿವನ ಸಾಕ್ಷಾತ್ಕಾರವಾಗುವುದು. ಐದುಲಕ್ಷ ಬಾರಿ ಮೃತ್ಯುಂಜಯ ಮಂತ್ರ ಜಪಿಸಿದರೆ ಶಿವನು ಬೇಕಾದ ಫಲವನ್ನು ಕೊಡುವನು. ಹತ್ತು ಲಕ್ಷ ಪರ್ಯಂತ ಜಪಿಸಿದರೆ, ಇವೆಲ್ಲಕ್ಕಿಂತ ಹೆಚ್ಚಾದ ಫಲ ಲಭಿಸುವುದು.

ಮುಕ್ತಿಯನ್ನ ಅಪೇಕ್ಷಿಸುವವರು ದರ್ಭೆಗಳಿಂದ ಶಿವನನ್ನು ಅರ್ಚಿಸಬೇಕು. ಆಯುಸ್ಸನ್ನು ಅಪೇಕ್ಷಿಸುವವರು ದೂರ್ವಗಳಿಂದ ಶಿವನನ್ನು ಪೂಜಿಸಬೇಕು. ಪುತ್ರರನ್ನ ಅಪೇಕ್ಷಿಸುವವರು ಧತ್ತೂರ ಪುಷ್ಪಗಳಿಂದ ಅರ್ಚಿಸಬೇಕು. ಕೆಂಪು ನಾಳವುಳ್ಳ ಧತ್ತೂರ ಪುಷ್ಪವು ಶಿವಪೂಜೆಗೆ ಪ್ರಶಸ್ತವಾದುದು, ಅಗಸ್ತ್ಯ ಕುಸುಮದಿಂದ ಅರ್ಚಿಸಿದರೆ ಯಶಸ್ಸು ಲಭಿಸುವುದು. ತುಳಸಿಯಿಂದ ಪೂಜಿಸಿದರೆ ಭೋಗ-ಮುಕ್ತಿಗಳೆರಡೂ ಲಭಿಸುವುವು. ಅರ್ಕಪುಷ್ಪ, ಕುಬ್ಜಪುಷ್ಪ, ಕಲ್ಹಾರಪುಷ್ಪಗಳಿಂದ ಶಿವನನ್ನು ಅರ್ಚಿಸಿದರೆ ಪರಾಕ್ರಮ ಹೆಚ್ಚಾಗುವುದು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

'ಜೆ ಆ್ಯಂಡ್ ಕೆ' ಎಂಬ ಹೆಸರಿನ ವಿದ್ಯಾರ್ಥಿ ನಿಲಯದ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. 'ಜೆಎನ್‌ಯುನಲ್ಲಿ ವ್ಯಾಸಂಗ ಮಾಡುತ್ತಿರುವ ಜಮ್ಮು ಮತ್ತು ಕಾಶ್ಮೀರದ ವಿದ್ಯಾರ್ಥಿಗಳಿಗಾಗಿ ಈ ವಿದ್ಯಾರ್ಥಿ ನಿಲಯವನ್ನು ಹಿಂದಿನ ಕಾಂಗ್ರೆಸ್ ಸರ್ಕಾರವು ನಿರ್ಮಿಸಿದೆ. ಇದರಲ್ಲಿ 400 ಕೊಠಡಿಗಳಿವೆ. ಹಿಂದೂ ಸೇರಿ ಇತರ ಯಾವುದೇ ಧರ್ಮದ ವಿದ್ಯಾರ್ಥಿಗಳಿಗೆ ಇಲ್ಲಿ ಪ್ರವೇಶವಿಲ್ಲ. ಜಮ್ಮು ಮತ್ತು ಕಾಶ್ಮೀರದ ಮುಸ್ಲಿಂ ವಿದ್ಯಾರ್ಥಿಗಳು ಇಲ್ಲಿ ಉಚಿತವಾಗಿ ಪ್ರವೇಶ ಪಡೆಯುತ್ತಾರೆ. ನಮ್ಮ ತೆರಿಗೆ ಹಣದಲ್ಲಿ ಅವರು ಉಚಿತ ಸವಲತ್ತುಗಳನ್ನು ಪಡೆಯುತ್ತಾರೆ' ಎಂದು ವಿಡಿಯೊ ಜೊತೆ ಮಾಹಿತಿ ಹಂಚಲಾಗಿದೆ.

ಚಿತ್ರದ ಜೊತೆ ಹಂಚಲಾಗಿರುವ ಮಾಹಿತಿಯು ಸತ್ಯಕ್ಕೆ ದೂರವಾದುದು ಎಂದು 'ದಿ ಲಾಜಿಕಲ್ ಇಂಡಿಯನ್' ವೇದಿಕೆ ವರದಿ ಮಾಡಿದೆ. ವೈರಲ್ ಆಗಿರುವ ಚಿತ್ರವು ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾನಿಲಯದ 'ಜಮ್ಮು ಮತ್ತು ಕಾಶ್ಮೀರ' ವಿದ್ಯಾರ್ಥಿ ನಿಲಯದ್ದು. ಇಲ್ಲಿ ಪ್ರವೇಶ ಪಡೆಯಲು ಜಮ್ಮು ಮತ್ತು ಕಾಶ್ಮೀರದ ವಿದ್ಯಾರ್ಥಿನಿಯರಿಗೆ ಆದ್ಯತೆ ನೀಡಲಾಗುವುದು. ಇತರ ರಾಜ್ಯಗಳ ವಿದ್ಯಾರ್ಥಿನಿಯರಿಗೂ ಇಲ್ಲಿ ಪ್ರವೇಶ ನೀಡಲಾಗುವುದು. ಧರ್ಮದ ಆಧಾರದಲ್ಲಿ ಇಲ್ಲಿ ಪ್ರವೇಶ ನೀಡಲಾಗುತ್ತಿಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಶಿವನ ನಿರ್ದ್ವಂದ್ವ

ನಯನಯುಗದಿಂ ಜಗವ ಪೊರೆದು, ನಿಟಲಾಕ್ಷಿಯಿಂ|
ಲಯವಡಿಸುವುದದೇನು ಶಿವಯೋಗಲೀಲೆ? ||
ಜಯಿಸಿ ಮದನನ ಬಳಿಕ ತನ್ನೊಡಲೊಳ್
ಉಮೆಯನ- |
ನ್ವಯಿಸಿಕೊಂಡಿಹುದೇನು? – ಮಂಕುತಿಮ್ಮ
|| 613 ||

ಪದ-ಅರ್ಥ: ನಯನಯುಗದಿಂ = ಎರಡು ಕಣ್ಣುಗಳಿಂದ, ಪೊರೆದು = ರಕ್ಷಿಸಿ, ನಿಟಲಾಕ್ಷಿ = ಬೆಂಕಿಯನ್ನು ಬಿಡುವ ಮೂರನೇ ಕಣ್ಣು, ಲಯವಡಿಸುವುದದೇನು = ಲಯವಡಿಸುವುದು(ಲಯವನ್ನುಂಟು ಮಾಡುವುದು) + ಅದೇನು, ಉಮೆಯನನ್ವಯಿಸಿಕೊಂಡಿಹುದೇನು = ಉಮೆಯನು + ಅನ್ವಯಿಸಿಕೊಂಡಿಹುದು(ಸೇರಿಸಿಕೊಂಡಿಹುದು) + ಏನು.

ವಾಚ್ಯಾರ್ಥ: ಎರಡು ಕಣ್ಣುಗಳಿಂದ ಲೋಕವನ್ನು ರಕ್ಷಿಸುವ ಈಶ್ವರ, ತನ್ನ ಮೂರನೆಯ ಕಣ್ಣಿಂದ ಸುಟ್ಟು ಹಾಕಿ, ಲಯ ಮಾಡುವುದು ಅದೇನು ಶಿವಲೀಲೆ? ಮನ್ಮಥನನ್ನು ಸುಟ್ಟು, ಜಯಿಸಿದ ಬಳಿಕ ಉಮೆಯನ್ನು ತನ್ನ ಶರೀರದಲ್ಲೇ ಸೇರಿಸಿಕೊಂಡು ಅರ್ಧನಾರೀಶ್ವರನಾಗಿರುವುದು ಅದೇನು?

ವಿವರಣೆ: ಮೇಲ್ನೋಟಕ್ಕೆ ವಿರೋಧಾಭಾಸದಂತೆ ತೋರುವುದನ್ನು ಕಗ್ಗ ಕುತೂಹಲದಿಂದ ಕೇಳುತ್ತದೆ. ತನ್ನ ಎರಡು ಕಣ್ಣುಗಳಿಂದ ಜಗತ್ತನ್ನು ರಕ್ಷಿಸುವ ಶಿವ, ತನ್ನ ಮೂರನೆಯ ಕಣ್ಣಿಂದ ಪ್ರಪಂಚವನ್ನು ಲಯಗೊಳಿಸುವುದು ಎಂತಹ ಶಿವಲೀಲೆ? ನಂತರ ಅಪೇಕ್ಷೆ, ಕಾಮದ ಸಂಕೇತವಾದ ಮನ್ಮಥನನ್ನು ಸುಟ್ಟು ಬೂದಿ ಮಾಡಿದ ಮೇಲೆ, ಅಪೇಕ್ಷೆಯಿಂದ, ಪ್ರೇಮದಿಂದ ತನ್ನ ಸತಿ ಉಮೆಯನ್ನು ತನ್ನ ದೇಹದಲ್ಲೇ ಸೇರಿಸಿಕೊಂಡು ಅರ್ಧನಾರೀಶ್ವರನಾದದ್ದೇಕೆ? ಇದುವರೆಗೂ, ಯಾವ ಗಂಡನೂ, ಎಷ್ಟೇ ಪ್ರೀತಿಯ ಹೆಂಡತಿಯಾಗಿದ್ದರೂ, ಇಷ್ಟು ಪರಮಪ್ರೀತಿಯಿಂದ ದೇಹದಲ್ಲೇ ಸೇರಿಸಿಕೊಂಡಿದ್ದಿಲ್ಲ. ಇದೇನು ಶಿವನ ರೀತಿ?

ಇದು ಕುತೂಹಲದ ಪ್ರಶ್ನೆ. ಕಗ್ಗ, ಇದಕ್ಕೆ ಉತ್ತರವನ್ನು ಕಂಡುಕೊಳ್ಳಲು ಪ್ರೇರೇಪಿಸುತ್ತದೆ. ಸರಿಯಾಗಿ ಗಮನಿಸಿದರೆ ಇಲ್ಲಿ ದ್ವಂದ್ವವೇ ಇಲ್ಲ! ತನ್ನ ಎರಡು ಕಣ್ಣುಗಳಿಂದ ಶಿವ ಜಗತ್ತನ್ನು ರಕ್ಷಿಸುತ್ತಾನೆ. ಶಿವ ಶಂಕರನೂ ಹೌದು. ಶಂ-ಕರ ಎಂದರೆ ಶುಭವನ್ನು ಮಾಡುವವನು. ಇಲ್ಲೊಂದು ಸುಂದರ ಸಂಕೇತವಿದೆ. ಶಿವನ ಎರಡು ಕಣ್ಣುಗಳು ಭೌತಿಕ ಪ್ರಪಂಚವನ್ನು ನೋಡಿ ಕಾಪಾಡುತ್ತವೆ. ನಮ್ಮ ಕಣ್ಣುಗಳೂ ಕೇವಲ ಭೌತಿಕ ಪ್ರಪಂಚವನ್ನು ಕಾಣಬಲ್ಲವು. ಭೌತಿಕವಲ್ಲದ ತತ್ವವನ್ನು ಕಾಣುವ ಸಾಮರ್ಥ್ಯ ಈ ಎರಡು ಕಣ್ಣುಗಳಿಗಿಲ್ಲ. ಆದರೆ ಶಿವ ಮಹಾಯೋಗಿ, ಅವನ ಮೂರನೆಯ ಕಣ್ಣು ಜ್ಞಾನಚಕ್ಷು. ಅದು ಜ್ಞಾನದ ಕಣ್ಣು. ಈ ಜ್ಞಾನದ ಕಣ್ಣಿನಿಂದಲೇ ಆತ ಕಾಮವನ್ನು ಸುಟ್ಟ. ಕಾಮವೆಂದರೆ ಆಸೆ, ಅಪೇಕ್ಷೆ. ಕಾಮ ಒಂದು ಹಂತದಲ್ಲಿ ಅಪೇಕ್ಷಿತ ಮತ್ತು ಅವಶ್ಯ. ಆದರೆ ಅದು ಅದರಿಂದ ಮೇಲೆದ್ದಾಗ ಅಪಾಯಕಾರಿಯಾಗುತ್ತದೆ. ಅದನ್ನು ಕರಗಿಸಲು ಜ್ಞಾನವೇ ಬೇಕು. ಅಂದರೆ ತೆರೆದ ಎರಡು ಕಣ್ಣುಗಳಿಂದ ಭೌತಿಕ ಪ್ರಪಂಚವನ್ನು ಕಾಪಾಡುವ ಶಿವ, ತನ್ನ ಮೂರನೆಯ ಜ್ಞಾನಚಕ್ಷುವಿನಿಂದ ಅನಪೇಕ್ಷಿತ, ಅಪಾಯಕಾರಿ ಕಾಮವನ್ನು ಸುಟ್ಟು ಪ್ರಪಂಚವನ್ನು ಕಾಪಾಡುತ್ತಾನೆ. ಶಿವನ ಮೂರೂ ಕಣ್ಣುಗಳ ಉದ್ದೇಶ ಪ್ರಪಂಚದ ರಕ್ಷಣೆ.

ಶಿವ ಕಾಮನನ್ನು ಕೊಂದ, ನಿಜ, ಆದರೆ ಉಮೆಯನ್ನು ತನ್ನ ದೇಹದಲ್ಲೇ ಏಕೆ ಉಳಿಸಿಕೊಂಡ? ಕಾಮಕ್ಕೂ, ಪ್ರೇಮಕ್ಕೂ ತುಂಬ ವ್ಯತ್ಯಾಸವಿದೆ. ಕಾಮ ಕ್ಷಣಿಕ, ಪ್ರೇಮ ಶಾಶ್ವತ. ಕಾಮ ದೈಹಿಕ, ಪ್ರೇಮ ಮಾನಸಿಕ. ಕಾಮವನ್ನು ಒಂದು ಮಟ್ಟಕ್ಕೇ ನಿಲ್ಲಿಸಿ, ಕಟ್ಟಿಹಾಕಿದ ಶಿವ. ಅರ್ಧನಾರೀಶ್ವರ ಕಲ್ಪನೆ, ಶಿವ-ಶಕ್ತಿಯರ ಎರಡು ಆಯಾಮಗಳ ಸಂಯೋಜನೆ. ಪ್ರಕೃತಿ ಎಂದರೆ ಸೃಷ್ಟಿ. ಪುರುಷ ಎನ್ನುವುದು ಸೃಷ್ಟಿಯ ಮೂಲ. ಪ್ರಕೃತಿ ಕಾಣುತ್ತದೆ, ಪುರುಷ ಕಾಣುವುದಿಲ್ಲ. ಸೃಷ್ಟಿಗೆ ಎರಡೂ ಬೇಕು ಮತ್ತು ಎರಡೂ ಅಷ್ಟೇ ಮುಖ್ಯ. ಅದಕ್ಕೇ ಅವನು ಅರ್ಧನಾರೀಶ್ವರ. ಸ್ತ್ರೀಗೆ ಸಮಾನಸ್ಥಾನ ಕೊಡುವುದರೊಂದಿಗೆ, ಮುಖ್ಯವಾದ ಎಡಭಾಗವನ್ನು, ಹೃದಯದ ಭಾಗವನ್ನು ಶಕ್ತಿಯಾಗಿ ತೋರುತ್ತಾರೆ. ಅದಕ್ಕೇ ಅರ್ಧನಾರೀಶ್ವರ ಕಲ್ಪನೆ ಅದ್ಭುತವಾದದ್ದು. ಇದು ಪ್ರೇಮ, ಕಾಮದ ಮೇಲೆ ವಿಜಯ ಸಾಧಿಸಿದ್ದನ್ನು, ಪುರುಷ ಮತ್ತು ಸ್ತ್ರೀ ಇಬ್ಬರೂ ಸಮಾನಾಧಿಕಾರಿಗಳು ಎಂದು ತೋರುವ ಸುಂದರ ಪ್ರತಿಮೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಏಪ್ರಿಲ್ 25, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ಚೈತ್ರ ಕೃಷ್ಣದಶಮಿ ಗಂ. 25-39 ನಕ್ಷತ್ರ: ಧನಿಷ್ಠಾ ಗಂ. 17-13 ಯೋಗ: ಶುಕ್ಲ ಗಂ. 20-55 ಕರಣ: ವಣಿಜ ಗಂ. 14-13, ಮೇಷ ಮಾಸದ 11 ನೇ ದಿನ. ರಾಹುಕಾಲ: ಬೆಳಿಗ್ಗೆ 07:30 – 09:00
ಸೂರ್ಯೋದಯ : 06-16 ಸೂರ್ಯಾಸ್ತ : 06-41 ಮುಸ್ಲಿಂ ದಿನಾಂಕ: 23 ರಂಜಾನ್
ಅದೃಷ್ಟ ಸಂಖ್ಯೆ: 1, 6

ಮೇಷ: ನೀವು ಕೈಗೆತ್ತಿಕೊಂಡಿರುವ ಕೆಲಸಗಳು ಹೆಚ್ಚಿನ ಖರ್ಚಿಗೆ ಕಾರಣವಾದರೂ ಮುಂದಿನ ದಿನಗಳಲ್ಲಿ ಲಾಭದಾಯಕವೆನಿಸಲಿದೆ. ತಾಂತ್ರಿಕ ವಿದ್ಯಾರ್ಥಿಗಳು ವಿನೂತನ ಯೋಜನೆ ಮಂಡಿಸುವಲ್ಲಿ ಯಶಸ್ವಿಯಾಗುವಿರಿ.

ವೃಷಭ: ನಿಮ್ಮ ವ್ಯವಹಾರಗಳಲ್ಲಿ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರಿಂದ ಅಭಿವೃದ್ಧಿ ಕಾಣಬಹುದು. ಅವಿವಾಹಿತರಿಗೆ ಮಾತೃವರ್ಗದ ಕಡೆಯಿಂದ ಅಪೇಕ್ಷಿಸಿದ ರೀತಿಯಲ್ಲಿಯೇ ಸಂಬಂಧ ಅರಸಿ ಬರುವುದು.

ಮಿಥುನ: ಅನಾವಶ್ಯಕವಾಗಿ ಅತಿಯಾದ ಖರ್ಚುಗಳು ಸಂಭವಿಸಬಹುದು. ನೆರೆಯವರೊಂದಿಗೆ ಸೌಹಾರ್ದದಿಂದ ವರ್ತಿಸಿ. ಎಲೆಕ್ಟ್ರಾನಿಕ್ ಉಪಕರಣಗಳ ಬಳಕೆಯಲ್ಲಿ ಹೆಚ್ಚಿನ ಗಮನವಿರಲಿ.

ಕರ್ಕಾಟಕ: ಮನೆಯಲ್ಲಿ ಸುಖ ಸಂತೋಷ ನೆಮ್ಮದಿ ಕಂಡುಬರಲಿದೆ. ನೀವು ಅನಾವಶ್ಯಕವಾಗಿ ಮನಸ್ಸಿನಲ್ಲಿ ಇಟ್ಟುಕೊಂಡಿರುವ ಅನುಮಾನವನ್ನು ತೆಗೆದುಹಾಕಿ. ಮನಸ್ಸಿಗೆ ಹಿತವಾದ ಅನುಭವಗಳನ್ನು ಹೊಂದುವಿರಿ.

ಸಿಂಹ: ಸರ್ಕಾರಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಸರ್ಕಾರಿ ಉದ್ಯೋಗ ಅಥವಾ ಕೆಲಸದಲ್ಲಿ ಬಡ್ತಿ ದೊರೆಯುವ ಸಂಭವ. ನಿಮ್ಮ ಮಕ್ಕಳು ಜೀವನದಲ್ಲಿ ಒಂದು ಹಂತವನ್ನು ತಲುಪಿರುವುದನ್ನು ಯೋಚಿಸಿಕೊಂಡು ನೆಮ್ಮದಿ ಹಾಗೂ ಸಂತಸ.

ಕನ್ಯಾ: ಒಡಹುಟ್ಟಿದವರಲ್ಲಿ ಭಾವನಾತ್ಮಕ ಸಂಬಂಧಗಳನ್ನು ಬೆಳೆಸಲು ಇದು ಸಕಾಲ. ಕಾಫೀ ಹಾಗೂ ಏಲಕ್ಕಿ ಬೆಳೆಗಾರರು ಉತ್ತಮ ಫಸಲನ್ನು ಎದುರು ನೋಡಬಹುದು. ಉಡುಪು ವಿನ್ಯಾಸಗಾರರಿಗೆ ಹೇರಳ ಅವಕಾಶ.

ತುಲಾ: ವೃತ್ತಿ ವಿಷಯದಲ್ಲಿ ಒಪ್ಪಂದಗಳು ಏರ್ಪಡುವ ಸಾಧ್ಯತೆ. ಮಹತ್ವದ ವಿಷಯವಾದ್ದರಿಂದ ಗಂಭೀರ ಚಿಂತನೆ ಅಗತ್ಯವೆನಿಸುವುದು. ಹಣದ ಹರಿವು ಸುಗಮವಾಗಿರುತ್ತದೆ. ಮನೆಯಲ್ಲಿ ಮಂಗಳಕಾರ್ಯಗಳಿಗೆ ಸಿದ್ಧತೆ ನಡೆಯಲಿದೆ.

ವೃಶ್ಚಿಕ: ಸ್ವಯಂ ಉದ್ಯೋಗಿಗಳಿಗೆ ಶ್ರಮಕ್ಕೆ ತಕ್ಕ ಪ್ರತಿಫಲವಿರುವುದು. ರಾಜಕೀಯ ವಿಷಯಗಳಲ್ಲಿ ಮೌನ ವಹಿಸುವುದು ಲೇಸು. ಉದ್ವೇಗಕ್ಕೆ ಒಳಗಾಗದಿರಿ. ವಿಭಿನ್ನವಾದ ವ್ಯಕ್ತಿತ್ವ ಹೊಂದಿದವರ ಭೇಟಿ ಆಗಲಿದೆ.

ಧನು: ಕರ್ತವ್ಯ ಕೊರತೆಯಿಂದಾಗಿ ಜೀವನದಲ್ಲಿ ಉಲ್ಲಾಸ ಕಳೆದುಕೊಳ್ಳುವ ಸಮಯ ಎದುರಾಗಲಿದೆ. ಹಿರಿಯರ ಜೀವನಾನುಭವ ಸಲಹೆಗಳನ್ನು ಕೇಳಿ ತಿಳಿದುಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ನಡೆಸಿಕೊಳ್ಳಿರಿ.

ಮಕರ: ಯಾವುದೇ ಕಾರಣಗಳಿಗೂ ಉದ್ಯೋಗ ಬದಲಾವಣೆಯ ಬಗ್ಗೆ ತೀರ್ಮಾನಿಸಬೇಡಿ. ನಿರ್ಧಾರಗಳು ಅಗತ್ಯವಾಗಿ ತೆಗೆದುಕೊಳ್ಳುವ ಸಮಯದಲ್ಲಿ ಜ್ಯೋತಿಷ್ಯರನ್ನು ಸಂಪರ್ಕಿಸಿ. ತಂದೆಯಾಗುವ ಸುದ್ದಿ ಕೇಳಿ ಸಂತಸ.

ಕುಂಭ: ಲಾಭ ನಷ್ಟಗಳ ಬಗ್ಗೆ ಪುನರಾವಲೋಕನೆ ಅಗತ್ಯವೆನಿಸುವುದು. ವಿದೇಶಿ ಬಂಡವಾಳಗಳಿಂದ ಲಾಭ ಗಳಿಸುವ ಅವಕಾಶ. ಬರಬೇಕಾಗಿದ್ದ ಹಣಕ್ಕೆ ಇರುವ ಅಡಚಣೆಗಳನ್ನು ನಿವಾರಿಸಿಕೊಳ್ಳುವ ಬಗ್ಗೆ ಗಮನಹರಿಸಿ.

ಮೀನ: ಅತಿಯಾಗಿ ಒತ್ತಡ ತರುವ ಕೆಲಸಗಳಿಂದ ದೂರ ಉಳಿಯುವ ಯೋಚನೆ ಸರಿಯಾಗಿರುವುದು. ದಿನಸಿ ವರ್ತಕರಿಗೆ ಲಾಭ . ಭೂಮಿಗೆ ಸಂಬಂಧಿಸಿದಂತೆ ಹಲವು ದಿನಗಳಿಂದ ಪ್ರಯತ್ನಪಟ್ಟ ಕೆಲಸಗಳು ಫಲ ನೀಡಲಿವೆ.

ಪದಬಂಧ 4938

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸಣ್ಣ ವಸ್ತುಗಳನ್ನು ದೊಡ್ಡದಾಗಿ ತೋರಿಸುವ ಯಂತ್ರ (5)
4.ವಾಕ್ಯದೊಳಗಿರುವ ಮುಪ್ಪು ! (3)
5.ಕೊನೆಗೆ ಮಗ ತಿರುಗಿದ್ದಕ್ಕೇ ಇದು ಸಲೀಸು! (3)
6.ನೋವಿನ ವಿರುದ್ಧ ಪದ (3)
8.ಹರಸುವಾಗ ಕಾಣಿಸಿದ ಪ್ರಾಣಿ (2)
9.ಠರಾವು ಮಂಡಿಸುವಾಗಿನ ದಿಗ್ಭ್ರಮೆ (2)
11.ಅತ್ಯಂತ ಶ್ರೇಷ್ಠವಾದದ್ದನ್ನು ಹೀಗೆನ್ನಿ (3)
14.ಉಗುರಿನ ತುದಿ (3)
15.ತಪಸ್ಸು ಮಾಡುವವನು (3)
16.ನೀರಿನಿಂದಾದ ಅನಿಲ (5)

ಮೇಲಿಂದ ಕೆಳಕ್ಕೆ
1.ಚುರುಕು ನೋಟ (4)
2.ಇನ್ನೊಬ್ಬರ ಅಭಿಪ್ರಾಯವನ್ನು ಅನುಮೋದಿಸು (5)
3.ಕಡಸುವಿನಲ್ಲಿರುವ ಶಕ್ತಿ ಗೊತ್ತಾಯಿತೇ? (3)
4.ವಿಷ್ಣುವಿನ ಐದನೆಯ ಅವತಾರ (3)
7.ಲೀಲಾಜಾಲವಾಗಿ ನಡೆದ ಏಲಂ! (3)
8.ಭಾರವಲ್ಲದ್ದು ಇದು (3)
9.ವೀರಾಜಮಾನವಾಗಿರುವ ಚಕ್ರವರ್ತಿ (5)
10.ಮನಸ್ಸನ್ನು ಸೆಳೆಯುವಂಥದ್ದು (4)
12.ಮನಸ್ಸಿಗೆ ಬಂದಂತೆ ನಡೆಯುವವ (3)
13.ಅಜದ ಹತ್ತಿರ ಅಣ್ಣನಿದ್ದಾನಲ್ಲಾ? (3)



4937ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿದ್ರೋಹ 3.ಶಬ್ದಕೋಶ
5.ರಸನ 7.ಚದುರಂಗ
9.ಸದಾಚಾರ 1.ಎರಕ
14.ಪರಿಸರ 15.ರುಮಾಲು

ಮೇಲಿಂದ ಕೆಳಕ್ಕೆ:
1.ವಿಧುರ 2.ಹವನ
3.ಶದ್ದೇರುದು 4.ಶಲ್ಯ
6.ಸಮಂಜಸ 7.ಚಮ್ಮಾರ
8.ಗತ್ಯಂತರ 10.ಚಾಡಿಕೋರ
11.ಎಡರು 12.ಕನಲು
13.ಶಾಪ

ಸುಡೊಕು 5324

6				5		7		2
			6		7		8	1
		7		3		6		9
	6			1		8		7
7		9	5		3		1	
	8			9		3		5
	7		3		1			
5		6		2			7	
	3		9		5			8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5323 ಸುಡೊಕು

5	6	1	8	7	4	2	9	3
3	7	2	6	1	9	8	5	4
9	8	4	5	2	3	1	6	7
1	2	5	7	3	6	4	8	9
4	3	8	2	9	5	6	7	1
6	9	7	4	8	1	3	2	5
8	1	9	3	5	2	7	4	6
7	4	3	9	6	8	5	1	2
2	5	6	1	4	7	9	3	8

ಐಷಾರಾಮಿ ಕಾರುಗಳಿಗೆ ಹೆಚ್ಚಿದ ಬೇಡಿಕೆ

ನವದೆಹಲಿ (ಪಿಟಿಐ): ಐಷಾರಾಮಿ ಕಾರು ತಯಾರಿಕಾ ಕಂಪನಿಗಳಾದ ಮರ್ಸಿಡೀಸ್ ಬೆಂಜ್, ಔಡಿ ಮತ್ತು ಬಿಎಂಡಬ್ಲ್ಯು ಪ್ರೀಮಿಯಂ ವರ್ಗದ ಕಾರುಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಇದರಿಂದಾಗಿ, ಈ ಕಾರುಗಳಿಗೆ ಗ್ರಾಹಕರು ಕಾಯಬೇಕಾದ ಅವಧಿ ಹೆಚ್ಚಾಗುತ್ತಿದೆ.

'₹ 70 ಲಕ್ಷಕ್ಕಿಂತ ಹೆಚ್ಚಿನ ಬೆಲೆಯ ಕಾರುಗಳಿಗೆ ಬೇಡಿಕೆಯು ಇತರ ವರ್ಗಗಳಿಗೆ ಸೇರಿದ ಕಾರುಗಳಿಗೆ ಬರುತ್ತಿರುವ ಬೇಡಿಕೆಗಿಂತ ಹೆಚ್ಚಾಗಿದೆ' ಎಂದು ಔಡಿ ಇಂಡಿಯಾ ಮುಖ್ಯಸ್ಥ ಬಲ್ಬೀರ್ ಸಿಂಗ್ ಧಿಲ್ಲೋನ್ ಹೇಳಿದ್ದಾರೆ. ₹ 1 ಕೋಟಿಗಿಂತ ಹೆಚ್ಚಿನ ಬೆಲೆಯ ವಿದ್ಯುತ್ ಚಾಲಿತ ಇ–ಟ್ರಾನ್ ಕಾರುಗಳು ಭಾರತ ತಲುಪುವ ಮುನ್ನವೇ ಮಾರಾಟ ಆಗುತ್ತಿವೆ ಎಂದು ಅವರು ತಿಳಿಸಿದ್ದಾರೆ.

'ಕೆಲವು ಕಾರುಗಳನ್ನು ಪಡೆಯಲು ನಮ್ಮ ಗ್ರಾಹಕರು ತಿಂಗಳುಗಳ ಕಾಲ ಕಾಯುತ್ತಿದ್ದಾರೆ' ಎಂದು ಮರ್ಸಿಡೀಸ್ ಬೆಂಜ್ ಇಂಡಿಯಾ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಮಾರ್ಟಿನ್ ಶ್ವೆಂಕ್ ಹೇಳಿದ್ದಾರೆ. ಬಿಎಂಡಬ್ಲ್ಯು ಕಂಪನಿಯು ಮಾರ್ಚ್ ತ್ರೈಮಾಸಿಕದಲ್ಲಿ ಕಾರುಗಳ ಮಾರಾಟದಲ್ಲಿ ಶೇ 25.3ರಷ್ಟು ಹೆಚ್ಚಳ ದಾಖಲಿಸಿದೆ.

ಅಸುರಕ್ಷಿತ ಲೈಂಗಿಕತೆಯಿಂದ 17 ಲಕ್ಷ ಜನರಿಗೆ ಎಚ್‌ಐವಿ

ನವದೆಹಲಿ (ಪಿಟಿಐ): ಕಳೆದ 10 ವರ್ಷಗಳಲ್ಲಿ ದೇಶದಲ್ಲಿ ಸುಮಾರು 17 ಲಕ್ಷ ಜನರು ಅಸುರಕ್ಷಿತ ಲೈಂಗಿಕತೆಯಿಂದ ಎಚ್‌ಐವಿ ಸೋಂಕಿಗೆ ಒಳಗಾಗಿದ್ದಾರೆ ಎಂದು ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆಯು (ಎನ್‌ಎಸಿಒ) ತಿಳಿಸಿದೆ.

ಕಳೆದ 10 ವರ್ಷಗಳಲ್ಲಿ ಎಚ್‌ಐವಿ ಸೋಂಕಿತರ ಸಂಖ್ಯೆ ಗಮನಾರ್ಹ ರೀತಿಯಲ್ಲಿ ಕಡಿಮೆಯಾಗಿದೆ. ಅಸುರಕ್ಷಿತ ಲೈಂಗಿಕತೆಯ ಕಾರಣ 2011–12ರಲ್ಲಿ 2.4 ಲಕ್ಷ ಜನರಿಗೆ ಎಚ್‌ಐವಿ ಸೋಂಕು ತಗುಲಿತ್ತು. ಈ ಸಂಖ್ಯೆ 2020–21ಕ್ಕೆ 85,268 ರಷ್ಟಾಗಿದೆ ಎಂದು ಆರ್‌ಟಿಐ ಪ್ರಶ್ನೆಗೆ ನೀಡಲಾದ ಉತ್ತರದಲ್ಲಿ ತಿಳಿಸಲಾಗಿದೆ.

ಮಧ್ಯಪ್ರದೇಶದ ಆರ್‌ಟಿಐ ಕಾರ್ಯಕರ್ತ ಚಂದ್ರಶೇಖರ್ ಗೌರ್ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿರುವ ಎನ್‌ಎಸಿಒ, ಭಾರತದಲ್ಲಿ 2011–2021ರ ನಡುವೆ ಅಸುರಕ್ಷಿತ ಲೈಂಗಿಕತೆಯಿಂದ 17,08,777 ಜನರು ಎಚ್‌ಐವಿ ಸೋಂಕಿಗೆ ಒಳಗಾಗಿದ್ದಾರೆ ಎಂದು ಮಾಹಿತಿ ನೀಡಿದೆ.

ಆಂಧ್ರಪ್ರದೇಶದಲ್ಲಿ 3,18,814 ಎಚ್‌ಐವಿ ಸೋಂಕು ಪ್ರಕರಣಗಳು ವರದಿಯಾಗಿವೆ. ಮಹಾರಾಷ್ಟ್ರದಲ್ಲಿ 2,84,577, ಕರ್ನಾಟಕದಲ್ಲಿ 2,12,982, ತಮಿಳುನಾಡಿನಲ್ಲಿ 1,16,536, ಉತ್ತರ ಪ್ರದೇಶದಲ್ಲಿ 1,10,911 ಮತ್ತು ಗುಜರಾತ್‌ನಲ್ಲಿ 87,440 ಸೋಂಕು ಪ್ರಕರಣಗಳು ಕಂಡು ಬಂದಿವೆ ಎಂದು ಎನ್‌ಎಸಿಒ ಹೇಳಿದೆ.

2011–12 ರಿಂದ 2020–21 ರವರೆಗೆ ರಕ್ತ ಸಂಬಂಧಿತ ವಸ್ತುಗಳ ಸಂಪರ್ಕದಿಂದ 15,782 ಜನರು ಎಚ್‌ಐವಿ ಸೋಂಕಿಗೆ ಒಳಗಾಗಿದ್ದಾರೆ. ತಾಯಿಯಿಂದ ಮಕ್ಕಳಿಗೆ ವರ್ಗಾವಣೆಯಾದ 4,423 ಪ್ರಕರಣಗಳು ದಾಖಲಾಗಿವೆ.

2020ರ ಮಾಹಿತಿ ಪ್ರಕಾರ, ದೇಶದಲ್ಲಿ 81,430 ಮಕ್ಕಳು ಸೇರಿ 23,18,737 ಜನರು ಎಚ್‌ಐವಿ ಜೊತೆ ಜೀವಿಸುತ್ತಿದ್ದಾರೆ.

ಪರೀಕ್ಷೆಯ ಪೂರ್ವ ಅಥವಾ ಪರೀಕ್ಷೆಯ ನಂತರ ಎಚ್‌ಐವಿ ಸೋಂಕಿತ ವ್ಯಕ್ತಿಗಳ ಜೊತೆ ನಡೆಸಿದ ಸಮಾಲೋಚನೆಯಲ್ಲಿ ಅವರು ನೀಡಿದ ಪ್ರತಿಕ್ರಿಯೆಯಿಂದ ಎಚ್‌ಐವಿ ಹರಡುವ ವಿಧಾನಗಳ ಮಾಹಿತಿಗಳನ್ನು ದಾಖಲಿಸಲಾಗಿದೆ ಎಂದು ತಿಳಿಸಲಾಗಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

18ನೇ ವಾರ್ಷಿಕ ಪುಣ್ಯಸ್ಮರಣೆ

ಕೆ. ಗುರುಮೂರ್ತಿ
03.06.1930-25.04.2004
ನೀವು ನಮ್ಮನ್ನಗಲಿದರೂ ನಿಮ್ಮ ನೆನಪು ನಮ್ಮಲ್ಲಿ ಎಂದೆಂದಿಗೂ ಚಿರಸ್ಥಾಯಿ.
ಸದಾ ನಿಮ್ಮ ಸ್ಮರಣೆಯಲ್ಲಿರುವ
ಡಾ. ಜಿ.ವನಜಾಕ್ಷಿ ಮತ್ತು ಕುಟುಂಬ,
ಶ್ರೀಮತಿ ಜಿ.ಶೀಲಾ ಮತ್ತು ಕುಟುಂಬ

'ಜಿಹಾದಿಗಳನ್ನು ಎದುರಿಸಲು ಬಿಲ್ಲು–ಬಾಣ ಇಟ್ಟುಕೊಳ್ಳಿ'

ಲಖನೌ/ಉನ್ನಾವೊ (ಪಿಟಿಐ): 'ಜಿಹಾದ್ ನಡೆಸಲು ಗುಂಪು ಬರುವಾಗ ರಕ್ಷಣೆಗೆ ಪೊಲೀಸರು ಇರುವುದಿಲ್ಲ. ಹೀಗಾಗಿ ಹಿಂದೂಗಳು ಮನೆಯಲ್ಲಿ ಬಿಲ್ಲು, ಬಾಣಗಳನ್ನು ಇಟ್ಟುಕೊಳ್ಳಬೇಕು' ಎಂದು ಬಿಜೆಪಿ ಸಂಸದ ಸಾಕ್ಷಿ ಮಹಾರಾಜ್ ಭಾನುವಾರ ಸಲಹೆ ನೀಡಿದ್ದಾರೆ.

'ಈ ಗುಂಪು ನಿಮ್ಮ ಬೀದಿಗೆ ಅಥವಾ ಮನೆಗೆ ಇದ್ದಕ್ಕಿದ್ದಂತೆ ಬಂದರೆ, ನಿಮ್ಮನ್ನು ಉಳಿಸಿಕೊಳ್ಳಲು ಏನಾದರೂ ದಾರಿ ಇದೆಯೇ? ಇಲ್ಲದಿದ್ದರೆ ಸ್ವಲ್ಪ ವ್ಯವಸ್ಥೆ ಮಾಡಿಕೊಳ್ಳಿ. ಪೊಲೀಸರು ನಿಮ್ಮ ರಕ್ಷಣೆಗೆ ಬರುವುದಿಲ್ಲ. ಅವರು ತಮ್ಮನ್ನು ರಕ್ಷಿಸಿಕೊಳ್ಳಲು ಅಡಗಿಕೊಂಡಿರುತ್ತಾರೆ' ಎಂದೂ ಫೇಸ್‌ಬುಕ್‌ನಲ್ಲಿ ಬರೆದುಕೊಂಡಿದ್ದಾರೆ.

1,441 ಸ್ಕೂಟರ್‌ಗಳನ್ನು ಪರಿಶೀಲಿಸಲಿರುವ ಓಲಾ

ನವದೆಹಲಿ (ಪಿಟಿಐ): ವಿದ್ಯುತ್ ಚಾಲಿತ ವಾಹನಗಳಿಗೆ ಬೆಂಕಿ ಹೊತ್ತಿಕೊಳ್ಳುವ ಪ್ರಕರಣಗಳು ವರದಿಯಾಗಿರುವ ಹಿನ್ನೆಲೆಯಲ್ಲಿ ಓಲಾ ಎಲೆಕ್ಟ್ರಿಕ್ ಕಂಪನಿಯು 1,441 ಸ್ಕೂಟರ್‌ಗಳನ್ನು ಪರಿಶೀಲನೆಗಾಗಿ ಹಿಂದಕ್ಕೆ ಪಡೆದುಕೊಳ್ಳುತ್ತಿದೆ.

ಪುಣೆಯಲ್ಲಿ ಮಾರ್ಚ್ 26ರಂದು ಇ.ವಿ.ಯೊಂದರಲ್ಲಿ ಬೆಂಕಿ ಹೊತ್ತಿಕೊಂಡ ಪ್ರಕರಣ ಬಗ್ಗೆ ತನಿಖೆ ನಡೆಯುತ್ತಿದೆ. ಆದರೆ ಈ ಪ್ರಕರಣವು ಬೇರೆ ಯಾವುದೇ ಪ್ರಕರಣಗಳ ಹೊತೆ ಸಾಮ್ಯತೆ ಹೊಂದಿಲ್ಲ ಎಂದು ಕಂಪನಿ ತಿಳಿಸಿದೆ. 'ಮುನ್ನೆಚ್ಚರಿಕೆಯ ಕ್ರಮವಾಗಿ ಕಂಪನಿಯು ಒಂದು ಬ್ಯಾಚ್‌ನ ಒಟ್ಟು 1,441 ಸ್ಕೂಟರ್‌ಗಳ ವಿಸ್ತೃತ ಪರಿಶೀಲನೆ ನಡೆಸಲಿದೆ' ಎಂದು ಪ್ರಕಟಣೆ ತಿಳಿಸಿದೆ.

ಸ್ಕೂಟರ್‌ನ ಬ್ಯಾಟರಿ, ಸುರಕ್ಷತಾ ಕ್ರಮಗಳ ಬಗ್ಗೆ ಕಂಪನಿಯ ಎಂಜಿನಿಯರ್‌ಗಳು ಪರಿಶೀಲಿಸಲಿದ್ದಾರೆ. ಸ್ಕೂಟರ್‌ನ ಬ್ಯಾಟರಿಗಳು ಭಾರತದ ಮಾನದಂಡ ಹಾಗೂ ಯುರೋಪಿನ ಮಾನದಂಡವನ್ನು ಪಾಲಿಸುತ್ತಿವೆ ಎಂದು ಕಂಪನಿ ತಿಳಿಸಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹375
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹375

ರಾಮನಗರ ರೇಷ್ಮೆ

ಮಿಶ್ರತಳಿ	₹305-712
ದ್ವಿತಳಿ	₹450-829

ಹಣ ಡಬಲ್ ಆಗುವುದು ಯಾವಾಗ?

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ನೀವು ಹೂಡಿಕೆ ಮಾಡಿದ ಹಣ ಎಷ್ಟು ವರ್ಷಗಳಲ್ಲಿ ಡಬಲ್ ಆಗುತ್ತದೆ? ಉಳಿತಾಯದ ಮೊತ್ತ, ಬೆಲೆ ಏರಿಕೆಯಿಂದಾಗಿ ಎಷ್ಟು ಪ್ರಮಾಣದಲ್ಲಿ ಮೌಲ್ಯ ಕಳೆದುಕೊಳ್ಳುತ್ತದೆ? ನಿವೃತ್ತಿ ಸಮಯದಲ್ಲಿ ಉಳಿತಾಯದ ಎಷ್ಟು ಹಣ ಖರ್ಚು ಮಾಡಬೇಕು? ತೆರಿಗೆ ನಂತರದಲ್ಲಿ ಸಾಧ್ಯವಾಗುವ ಉಳಿತಾಯವೆಷ್ಟು? ಹೀಗೆ ಅನೇಕ ಪ್ರಶ್ನೆಗಳು ಪ್ರತಿ ಹೂಡಿಕೆದಾರನ ಮನದಲ್ಲೂ ಇರುತ್ತವೆ. ಈ ಪ್ರಶ್ನೆಗಳು ಎಲ್ಲರಿಗೂ ಒಂದಿಷ್ಟು ಗೊಂದಲವನ್ನೂ ಮೂಡಿಸುತ್ತವೆ. ಆದರೆ ಇವೆಲ್ಲ ಪ್ರಶ್ನೆಗಳಿಗೆ ಸುಲಭವಾಗಿ ಉತ್ತರ ಕಂಡುಕೊಳ್ಳಲು ಕೆಲವು ಸೂತ್ರಗಳಿವೆ.

1. ರೂಲ್ ಆಫ್ 72: ನಿಮ್ಮ ಹಣ ಎಷ್ಟು ವರ್ಷಗಳಲ್ಲಿ ಎರಡು ಪಟ್ಟು ಆಗುತ್ತದೆ ಎನ್ನುವುದಕ್ಕೆ ಉತ್ತರ ಕೊಡುವ ಸೂತ್ರ 'ರೂಲ್ ಆಫ್ 72'. ಹೂಡಿಕೆ ಮೊತ್ತದ ಮೇಲೆ ಪ್ರತಿ ವರ್ಷ ಪಡೆಯುವ ಬಡ್ಡಿ ಲಾಭವನ್ನು 72ರಿಂದ ಭಾಗಿಸಿದಾಗ ನಿಮ್ಮ ಹೂಡಿಕೆ ಎಷ್ಟು ವರ್ಷಗಳಲ್ಲಿ ಎರಡು ಪಟ್ಟು ಆಗುತ್ತದೆ ಎನ್ನುವುದಕ್ಕೆ ಉತ್ತರ ಸಿಗುತ್ತದೆ. ವಾರ್ಷಿಕ ಶೇ 10ರಷ್ಟು ಬಡ್ಡಿ ಸಿಕ್ಕರೆ ನಿಮ್ಮ ಹೂಡಿಕೆ ಮೊತ್ತ ದ್ವಿಗುಣಗೊಳ್ಳಲು 7 ವರ್ಷ 2 ತಿಂಗಳು ಬೇಕು. ವಾರ್ಷಿಕ ಶೇ 5ರಷ್ಟು ಬಡ್ಡಿ ಲಾಭ ದಕ್ಕಿದರೆ ಹೂಡಿಕೆ ಹಣ ಎರಡು ಪಟ್ಟು ಆಗಲು ಸುಮಾರು 14 ವರ್ಷಗಳು ಬೇಕಾಗುತ್ತವೆ. ಒಂದೊಮ್ಮೆ ವಾರ್ಷಿಕ ಶೇ 20ರಷ್ಟು ಬಡ್ಡಿ ಲಾಭ ದೊರಕಿದರೆ ನಿಮ್ಮ ಹಣ ಮೂರೂವರೆ ವರ್ಷಗಳಲ್ಲಿ ದ್ವಿಗುಣಗೊಳ್ಳುತ್ತದೆ.

2. ರೂಲ್ ಆಫ್ 70: ಬೆಲೆ ಏರಿಕೆ (ಹಣದುಬ್ಬರ) ಕಾರಣದಿಂದಾಗಿ ಎಷ್ಟು ವರ್ಷಗಳಿಗೊಮ್ಮೆ ನಿಮ್ಮ ಹಣದ ಮೌಲ್ಯ ಕುಸಿತ ಕಾಣಲಿದೆ ಎನ್ನುವುದನ್ನು 'ರೂಲ್ ಆಫ್ 70' ತಿಳಿಸುತ್ತದೆ. 70ರಿಂದ ಪ್ರಸ್ತುತ ಬೆಲೆ ಏರಿಕೆ ದರವನ್ನು ಭಾಗಿಸಿದಾಗ (70/ಹಣದುಬ್ಬರ) ನಿಮ್ಮ ದುಡ್ಡಿನ ಮೌಲ್ಯ ಎಷ್ಟು ವರ್ಷಗಳಿಗೊಮ್ಮೆ ಅರ್ಧಕ್ಕೆ ಇಳಿಯಲಿದೆ ಎನ್ನುವುದು ಗೊತ್ತಾಗುತ್ತದೆ.

ಉದಾಹರಣೆಗೆ, ಈಗ ಹಣದುಬ್ಬರ ದರ ಶೇ 6.95ರಷ್ಟಿದೆ ಅಂದುಕೊಳ್ಳೋಣ. 70ರಿಂದ 6.95ನ್ನು ಭಾಗಿಸಿ. ಸರಿಸುಮಾರು 10 ವರ್ಷಗಳಿಗೆ ನಿಮ್ಮ ದುಡ್ಡು ಅರ್ಧದಷ್ಟು ಮೌಲ್ಯ ಕಳೆದುಕೊಳ್ಳುತ್ತದೆ ಎಂಬುದು ತಿಳಿಯುತ್ತದೆ. ಅಂದರೆ ಇವತ್ತು ನಿಮ್ಮ ಬಳಿ ಇರುವ ನೂರು ರೂಪಾಯಿ 10 ವರ್ಷಗಳ ಬಳಿಕ ₹ 50ರಷ್ಟು ಮೌಲ್ಯವನ್ನು ಮಾತ್ರ ಹೊಂದಿರಲಿದೆ. ಹೀಗಾಗಿಯೇ, ನಾವು ಮಾಡುವ ಹೂಡಿಕೆಗಳಿಗೆ ಬೆಲೆ ಏರಿಕೆ ಪ್ರಮಾಣವನ್ನು ಮೀರಿ ಲಾಭ ತಂದುಕೊಡುವ ಸಾಮರ್ಥ್ಯ ಇರಬೇಕು ಎಂದು ಸಲಹೆ ನೀಡುವುದು.

3. 4 ಶೇಕಡ ಹಿಂಪಡೆಯುವುದು: ನಿವೃತ್ತಿಯ ಸಮಯಕ್ಕೆಂದು ಹೂಡಿಕೆ ಮಾಡಿದ ಹಣವನ್ನು ನಿವೃತ್ತಿ ವೇಳೆ ಯಾವ ಪ್ರಮಾಣದಲ್ಲಿ ಹಿಂಪಡೆಯುತ್ತಾ ಹೋಗಬೇಕು ಎನ್ನುವ ಪ್ರಶ್ನೆಗೆ ಉತ್ತರ ಕೊಡುವ ನಿಯಮ '4 ಶೇಕಡ ಹಿಂಪಡೆಯುವುದು' (4 percent withdrawal). ನಿವೃತ್ತಿಯ ನಂತರದ ಮೊದಲನೇ ವರ್ಷ ನೀವು ಮಾಡಬೇಕಾಗುವ ವೆಚ್ಚದ ಅಂದಾಜು ತೆಗೆದುಕೊಂಡು ಅದನ್ನು 25ರೊಂದಿಗೆ ಗುಣಿಸಿದಾಗ ಎಷ್ಟು ಮೊತ್ತ ಬರುವುದೋ ಅದರಲ್ಲಿ ಪ್ರತಿ ವರ್ಷ ಶೇ 4ರಷ್ಟನ್ನು ಹಿಂದಕ್ಕೆ ಪಡೆಯಬಹುದು ಎನ್ನುವುದನ್ನು ಈ ನಿಯಮ ಹೇಳುತ್ತದೆ.

ಉದಾಹರಣೆಗೆ ನಾನು 50ನೇ ವರ್ಷ ವಯಸ್ಸಿಗೆ ನಿವೃತ್ತಿ ತೆಗೆದುಕೊಳ್ಳುತ್ತಿದ್ದು ನಿವೃತ್ತಿ ಜೀವನದ ಮೊದಲ ವರ್ಷದ ವೆಚ್ಚ ₹ 5 ಲಕ್ಷ ಎಂದಿಟ್ಟುಕೊಳ್ಳಿ. ಇದರಂತೆ ಲೆಕ್ಕಾಚಾರ ಮಾಡಿದಾಗ ನಿವೃತ್ತಿ ಜೀವನಕ್ಕಾಗಿ ₹ 1.25 ಕೋಟಿ (5,00,000 * 25 = 1.25 ಕೋಟಿ) ಬೇಕಾಗುತ್ತದೆ. ಈ ಮೊತ್ತದಲ್ಲಿ ನಾನು ಪ್ರತಿ ವರ್ಷ ಶೇ 4ರಷ್ಟು ಅಂದರೆ ₹ 5 ಲಕ್ಷ ಹಿಂಪಡೆಯಬಹುದು. ನಿವೃತ್ತಿ ಜೀವನದ ಖರ್ಚು–ವೆಚ್ಚಗಳನ್ನು ನಿಭಾಯಿಸಲು ಈ ಹಣ ಅಗತ್ಯವಾಗಿ ಬೇಕಾಗುತ್ತದೆ.

4. 10–5–3 ರೂಲ್: ಈ ನಿಯಮ ತೆರಿಗೆ ಪಾವತಿಸಿದ ನಂತರದಲ್ಲಿ ನಿಮ್ಮ ಹೂಡಿಕೆ ಎಷ್ಟು ಲಾಭ ನೀಡಬಹುದು ಎನ್ನುವುದನ್ನು ಅರಿತುಕೊಳ್ಳಲು ಸಹಾಯ ಮಾಡುತ್ತದೆ. ಉದಾಹರಣೆಗೆ ಷೇರು ಮಾರುಕಟ್ಟೆ ಹೂಡಿಕೆ ನಿಮಗೆ ತೆರಿಗೆ ನಂತರದಲ್ಲಿ ವಾರ್ಷಿಕ ಶೇ 10ರಷ್ಟು ಲಾಭಾಂಶ ಕೊಡುತ್ತದೆ ಎಂದಿಟ್ಟುಕೊಳ್ಳಿ. ನಿಶ್ಚಿತ ಠೇವಣಿ (ಎಫ್.ಡಿ) ತೆರಿಗೆ ನಂತರದಲ್ಲಿ ವಾರ್ಷಿಕ ಶೇ 5ರಷ್ಟು ಲಾಭಾಂಶ ಕೊಡುತ್ತದೆ. ಇನ್ನು, ಉಳಿತಾಯ ಖಾತೆಯಲ್ಲಿ ಶೇ 3ರಷ್ಟು ಲಾಭ ದಕ್ಕುತ್ತದೆ. ಈಕ್ವಿಟಿ, ನಿಶ್ಚಿತ ಠೇವಣಿಗಳು ಹಾಗೂ ಉಳಿತಾಯ ಖಾತೆಯಲ್ಲಿನ ಹೂಡಿಕೆಗಳಿಂದ ಸಿಗುವ ಲಾಭವನ್ನು ಈ ನಿಯಮ ಬಳಸಿ ಲೆಕ್ಕಹಾಕಿ, ನೀವು ನಿರ್ದಿಷ್ಟ ಅವಧಿಯ ನಂತರ ಎಷ್ಟು ಹಣ ಸಿಗಬಹುದು ಎಂಬ ಅಂದಾಜು ಮಾಡಬಹುದು.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಕರಡಿ ಹಿಡಿತದಲ್ಲಿ ಷೇರುಪೇಟೆ ಸೂಚ್ಯಂಕಗಳು?

ಷೇರುಪೇಟೆಯಲ್ಲಿ ಕರಡಿಯ ಹಿಡಿತ ಜೋರಾದಂತೆ ಕಾಣುತ್ತಿದೆ. ಏಪ್ರಿಲ್ 22ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಕುಸಿದಿವೆ. 57,197 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.95ರಷ್ಟು ಇಳಿಕೆ ಕಂಡಿದೆ. 17,172 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.73ರಷ್ಟು ತಗ್ಗಿದೆ. ಅಮೆರಿಕದ ಫೆಡರಲ್ ಬ್ಯಾಂಕ್ ಮೇ ತಿಂಗಳಲ್ಲಿ ಬಡ್ಡಿ ದರವನ್ನು ಶೇ 0.50ರಷ್ಟು ಹೆಚ್ಚಳ ಮಾಡುವ ಮುನ್ಸೂಚನೆ ನೀಡಿರುವುದು, ಹಣದುಬ್ಬರ, ರಷ್ಯಾ–ಉಕ್ರೇನ್ ನಡುವಿನ ಯುದ್ಧ, ತೈಲ ಬೆಲೆಯಲ್ಲಿ ಅನಿಶ್ಚಿತತೆ ಸೇರಿ ಹಲವು ಅಂಶಗಳು ಕುಸಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ವಾಹನ ವಲಯ ಮಾತ್ರ ಶೇ 3.08ರಷ್ಟು ಗಳಿಕೆ ಕಂಡಿದೆ. ಇನ್ನುಳಿದ ಎಲ್ಲ ಸೂಚ್ಯಂಕಗಳು ಇಳಿಕೆ ದಾಖಲಿಸಿವೆ. ಮಾಹಿತಿ ತಂತ್ರಜ್ಞಾನ ಶೇ 5.61ರಷ್ಟು, ಮಾಧ್ಯಮ ವಲಯ ಶೇ 4.15ರಷ್ಟು, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 3.93ರಷ್ಟು, ಬ್ಯಾಂಕ್ ಶೇ 3.76ರಷ್ಟು, ರಿಯಲ್ ಎಸ್ಟೇಟ್ ಶೇ 3.45ರಷ್ಟು, ಲೋಹ ವಲಯ ಶೇ 2.81ರಷ್ಟು, ನಿಫ್ಟಿ ಸ್ಮಾಲ್ ಕ್ಯಾಪ್ 100 ಸೂಚ್ಯಂಕ ಶೇ 1.87ರಷ್ಟು, ಮಿಡ್ ಕ್ಯಾಪ್ 100 ಶೇ 1.56ರಷ್ಟು, ಫಾರ್ಮಾ ವಲಯ ಶೇ 1.47ರಷ್ಟು ಮತ್ತು ಎಫ್‌ಎಂಸಿಜಿ ವಲಯ ಶೇ 1.09ರಷ್ಟು ಕುಸಿತ ಕಂಡಿವೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಕೋಲ್ ಇಂಡಿಯಾ ಶೇ 8ರಷ್ಟು, ರಿಲಯನ್ಸ್ ಶೇ 8ರಷ್ಟು, ಮಹಿಂದ್ರ ಆ್ಯಂಡ್ ಮಹಿಂದ್ರ ಶೇ 6ರಷ್ಟು, ಮಾರುತಿ ಶೇ 6ರಷ್ಟು ಮತ್ತು ಐಷರ್ ಮೋಟರ್ಸ್ ಶೇ 6ರಷ್ಟು ಜಿಗಿದಿವೆ. ಇನ್ಫೊಸಿಸ್ ಶೇ 9ರಷ್ಟು, ಟೆಕ್ ಮಹಿಂದ್ರ ಶೇ 7ರಷ್ಟು, ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 7ರಷ್ಟು, ಎಚ್‌ಡಿಎಫ್‌ಸಿ ಶೇ 7ರಷ್ಟು ಮತ್ತು ಹಿಂಡಾಲ್ಕೊ ಶೇ 6ರಷ್ಟು ಇಳಿಕೆ ದಾಖಲಿಸಿವೆ.

ಮುನ್ನೋಟ: ಈ ವಾರ ಬಜಾಜ್ ಫೈನಾನ್ಸ್, ಬಜಾಜ್ ಆಟೊ, ಹಿಂದೂಸ್ಥಾನ್ ಯುನಿಲಿವರ್, ಎಕ್ಸಿಸ್ ಬ್ಯಾಂಕ್, ವೇದಾಂತ್, ಮಾರುತಿ, ಹ್ಯಾಟ್ಸನ್, ಟಾಟಾ ಕಾಫಿ, ಎಸ್‌ಬಿಐ ಲೈಫ್, ಪಿಎನ್‌ಬಿ ಹೌಸಿಂಗ್, ವಿಪ್ರೊ, ಯೆಸ್ ಬ್ಯಾಂಕ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಸದ್ಯದ ಸ್ಥಿತಿಯಲ್ಲಿ ಷೇರುಪೇಟೆಯಲ್ಲಿ ಏರಿಳಿತದ ಹಾದಿ ಮುಂದುವರಿಯಲಿದೆ. ದೇಶಿಯ ವಿದ್ಯಮಾನಗಳ ಜೊತೆಗೆ ಜಾಗತಿಕ ಬೆಳವಣಿಗೆಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ತಾಳೆ ಎಣ್ಣೆ ರಫ್ತಿಗೆ ಇಂಡೊನೇಷ್ಯಾ ನಿಷೇಧದ ಪರಿಣಾಮ

ಅಡುಗೆ ಎಣ್ಣೆಗಳ ಬೆಲೆ ಮತ್ತಷ್ಟು ಹೆಚ್ಚಳ?

• ವಿಜಯ್ ಜೋಷಿ

ಬೆಂಗಳೂರು: ತಾಳೆ ಎಣ್ಣೆ ರಫ್ತು ನಿಷೇಧಿಸಲು ಇಂಡೊನೇಷ್ಯಾ ತೀರ್ಮಾನಿಸಿರುವ ಪರಿಣಾಮವಾಗಿ ದೇಶದಲ್ಲಿ ಅಡುಗೆ ಎಣ್ಣೆ ಬೆಲೆಯು ತೀವ್ರವಾಗಿ ಏರಿಕೆ ಆಗಬಹುದು ಎಂಬ ಆತಂಕ ವ್ಯಕ್ತವಾಗಿದೆ. ಈ ನಡುವೆ, ರಫ್ತು ನಿಷೇಧವನ್ನು ಇಂಡೊನೇಷ್ಯಾ ಹೆಚ್ಚು ಕಾಲ ಜಾರಿಯಲ್ಲಿ ಇರಿಸಲಿಕ್ಕಿಲ್ಲ ಎಂಬ ಆಶಾಭಾವನೆ ಕೂಡ ವರ್ತಕರಲ್ಲಿ ಇದೆ.

'ರಫ್ತು ನಿಷೇಧ ತೀರ್ಮಾನ ಪ್ರಕಟವಾದ ತಕ್ಷಣ ದೇಶಿ ಸಗಟು ಮಾರುಕಟ್ಟೆಯಲ್ಲಿ ಪರಿಣಾಮ ಕಂಡುಬಂದಿದೆ. ತಾಳೆ ಎಣ್ಣೆ ಬೆಲೆಯು ಲೀಟರಿಗೆ ₹ 5ರಷ್ಟು ಜಾಸ್ತಿ ಆಗಿದೆ. ಇದು ಆಮದು ಮಾಡಿಕೊಳ್ಳುವವರು ಹಾಗೂ ಎಣ್ಣೆ ಸಂಸ್ಕರಣೆ ಮಾಡುವವರ ಮಟ್ಟದಲ್ಲಿ ಆಗಿರುವ ಹೆಚ್ಚಳ. ಚಿಲ್ಲರೆ ಮಾರುಕಟ್ಟೆಯಲ್ಲಿ ದರ ವ್ಯತ್ಯಾಸ ಆಗಿಲ್ಲ. ಆದರೆ ರಫ್ತು ನಿಷೇಧದಿಂದ ಚಿಲ್ಲರೆ ಮಾರುಕಟ್ಟೆ ಮೇಲೆ ಪರಿಣಾಮ ಆಗುವುದಂತೂ ಖಂಡಿತ' ಎಂದು ಅಡುಗೆ ಎಣ್ಣೆ ಉದ್ಯಮದ ಮೂಲಗಳು ತಿಳಿಸಿವೆ.

'ದೇಶಿ ಮಾರುಕಟ್ಟೆಯಲ್ಲಿ ತಾಳೆ ಎಣ್ಣೆ ಬೆಲೆ ಎಷ್ಟು ಹೆಚ್ಚಾಗಬಹುದು ಎಂಬುದನ್ನು ಈಗಲೇ ಅಂದಾಜು ಮಾಡಲು ಆಗದು. ಸ್ಪಷ್ಟ ಚಿತ್ರಣ ಸಿಗಲು ಒಂದು ವಾರವಾದರೂ ಬೇಕು. ನಾವು ಆಮದು ಮಾಡಿಕೊಳ್ಳುವ ಅಡುಗೆ ಎಣ್ಣೆಗಳಲ್ಲಿ ತಾಳೆ ಎಣ್ಣೆಯ ಪ್ರಮಾಣವು ಶೇ 50ರಷ್ಟು ಇದೆ. ನಿರ್ಬಂಧದ ಪರಿಣಾಮವಾಗಿ ಜನ ಆತಂಕಕ್ಕೆ ಒಳಗಾಗಿ ಎಣ್ಣೆಯನ್ನು ಹೆಚ್ಚು ಖರೀದಿಸಿದರೆ ಲೀಟರಿಗೆ ಬೆಲೆಯು ತಕ್ಷಣಕ್ಕೆ ₹ 10ರವರೆಗೆ ಹೆಚ್ಚಳ ಆಗಬಹುದು' ಎಂದು ಮೂಲವೊಂದು 'ಪ್ರಜಾವಾಣಿ'ಗೆ ತಿಳಿಸಿದೆ.

'ರಷ್ಯಾ ಮತ್ತು ಉಕ್ರೇನ್ ಯುದ್ಧದ ಕಾರಣದಿಂದಾಗಿ ಸೂರ್ಯಕಾಂತಿ ಎಣ್ಣೆ ಬೆಲೆ ಹೆಚ್ಚಾಗಿದೆ. ಈಗ ತಾಳೆ ಎಣ್ಣೆ ರಫ್ತು ನಿಷೇಧದ ಕಾರಣದಿಂದಾಗಿ ಕೆಲವು ದಿನಗಳ ಮಟ್ಟಿಗೆ ಒಂದಿಷ್ಟು ಸಮಸ್ಯೆಯಾಗುವುದು ಖಂಡಿತ. ಆದರೆ, ತಾಳೆ ಎಣ್ಣೆ ರಫ್ತಿನಿಂದ ದೊಡ್ಡ ಆದಾಯ ಪಡೆಯುತ್ತಿರುವ ಇಂಡೊನೇಷ್ಯಾ, ಈ ನಿಷೇಧವನ್ನು ಹೆಚ್ಚು ದಿನ ಜಾರಿಯಲ್ಲಿ ಇರಿಸಿಕೊಳ್ಳಲಿಕ್ಕಿಲ್ಲ' ಎಂದು ಬೆಂಗಳೂರಿನ ಕೃಷ್ಣಂ ಆಯಿಲ್ ಟ್ರೇಡರ್ಸ್‌ನ ವರ್ತಕ ಕೃಷ್ಣಂ ಶಶಿಧರ್ ಅಭಿಪ್ರಾಯಪಟ್ಟರು.

ನಿರ್ಬಂಧದ ಪ್ರಕಟಣೆ ಹೊರಬಿದ್ದ ನಂತರದಲ್ಲಿ ರಿಫೈನ್ಡ್ ತಾಳೆ ಎಣ್ಣೆ ಬೆಲೆಯು ದೇಶದ ಬಂದರುಗಳಲ್ಲಿ ಪ್ರತಿ 10 ಕೆ.ಜಿ.ಗೆ ₹ 1570ಕ್ಕೆ ತಲುಪಿದೆ. ಇದು ₹ 1,600 ಅಥವಾ ₹ 1,650ರ ಮಟ್ಟ ತಲುಪಬಹುದು ಎಂದು ಅಂದಾಜಿಸಿರುವುದಾಗಿ ಮೂಲಗಳು ಹೇಳಿವೆ.

ಅಡುಗೆ ಎಣ್ಣೆ ಆಮದು: ತಾಳೆ ಎಣ್ಣೆ ಪಾಲು ಹೆಚ್ಚು

ಬೆಂಗಳೂರು: ದೇಶಕ್ಕೆ ಆಮದು ಆಗುವ ಅಡುಗೆ ಎಣ್ಣೆಗಳ ಪಟ್ಟಿಯಲ್ಲಿ ತಾಳೆ ಎಣ್ಣೆಗೆ ಮುಖ್ಯ ಸ್ಥಾನ ಇದೆ. ನವೆಂಬರ್‌ನಿಂದ ಮಾರ್ಚ್‌ವರೆಗೆ ದೇಶಕ್ಕೆ ಆಮದು ಆಗಿರುವ ಅಡುಗೆ ಎಣ್ಣೆಗಳ ಪೈಕಿ ತಾಳೆ ಎಣ್ಣೆಯ ಪ್ರಮಾಣವು ಯಾವ ತಿಂಗಳಿನಲ್ಲಿಯೂ ಶೇಕಡ 44ಕ್ಕಿಂತ ಕಡಿಮೆ ಆಗಿಲ್ಲ.

ನವೆಂಬರ್, ಡಿಸೆಂಬರ್‌ನಲ್ಲಿ ತಲಾ ಶೇಕಡ 47ರಷ್ಟು, ಜನವರಿಯಲ್ಲಿ ಶೇ 44ರಷ್ಟು, ಫೆಬ್ರುವರಿಯಲ್ಲಿ ಶೇ 46ರಷ್ಟು, ಮಾರ್ಚ್‌ನಲ್ಲಿ ಶೇ 51ರಷ್ಟು ಪಾಲು ತಾಳೆ ಎಣ್ಣೆಯದ್ದು ಎಂದು ಅಡುಗೆ ಎಣ್ಣೆ ವರ್ತಕರ ಸಂಘವಾದ ಸಾಲ್ವೆಂಟ್ ಎಕ್ಸ್‌ಟ್ರ್ಯಾಕ್ಟರ್ಸ್ ಅಸೋಸಿಯೇಷನ್ (ಎಸ್‌ಇಎ) ಅಂಕಿ–ಅಂಶಗಳು ಹೇಳುತ್ತವೆ. ಮಾರ್ಚ್‌ನಲ್ಲಿ ಭಾರತಕ್ಕೆ 5.39 ಲಕ್ಷ ಟನ್ ತಾಳೆ ಎಣ್ಣೆ ಆಮದಾಗಿದೆ. ನವೆಂಬರ್‌ನಿಂದ ಮಾರ್ಚ್‌ವರೆಗಿನ ಅವಧಿಯಲ್ಲಿ ಭಾರತವು 56.42 ಲಕ್ಷ ಟನ್‌ನಷ್ಟು ಅಡುಗೆ ಎಣ್ಣೆಗಳನ್ನು ಆಮದು ಮಾಡಿಕೊಂಡಿದೆ. ಇದರಲ್ಲಿ ತಾಳೆ ಎಣ್ಣೆಯ ಪಾಲು 26.53 ಲಕ್ಷ ಟನ್. ಒಟ್ಟು ತಾಳೆ ಎಣ್ಣೆ ಆಮದಿನಲ್ಲಿ ಇಂಡೊನೇಷ್ಯಾ ಪಾಲು 9.82 ಲಕ್ಷ ಟನ್. ಅಂದರೆ, ಭಾರತವು ಆಮದು ಮಾಡಿಕೊಳ್ಳುವ ತಾಳೆ ಎಣ್ಣೆಯ ಪ್ರಮಾಣದಲ್ಲಿ ಇಂಡೊನೇಷ್ಯಾದ ಪಾಲು ಶೇ 37ರಷ್ಟಿದೆ.

'ಇಷ್ಟು ದೊಡ್ಡ ಪ್ರಮಾಣದಲ್ಲಿ ನಮಗೆ ತಾಳೆ ಎಣ್ಣೆ ಪೂರೈಸುವ ದೇಶ ಇಂಡೊನೇಷ್ಯಾ. ಇದು ರಫ್ತು ನಿರ್ಬಂಧ ಮಾಡಿದರೆ, ತಕ್ಷಣಕ್ಕೆ ಪರ್ಯಾಯ ಹುಡುಕಿಕೊಳ್ಳುವುದು ಕಷ್ಟ. ಮಲೇಷ್ಯಾ ಒಂದರಿಂದಲೇ ನಮ್ಮ ಮಾರುಕಟ್ಟೆಯ ತಾಳೆ ಎಣ್ಣೆ ಅಗತ್ಯವನ್ನು ಪೂರೈಕೆ ಮಾಡಲು ಆಗಲಿಕ್ಕಿಲ್ಲ' ಎಂದು ಮೂಲಗಳು ತಿಳಿಸಿವೆ. ಇಂಡೊನೇಷ್ಯಾ, ಮಲೇಷ್ಯಾ ಮತ್ತು ಥೈಲ್ಯಾಂಡ್ ಭಾರತಕ್ಕೆ ತಾಳೆ ಎಣ್ಣೆ ರಫ್ತು ಮಾಡುತ್ತವೆ.

ಹಣದುಬ್ಬರದ ಮೇಲೆ ಪರಿಣಾಮ

ಬೆಂಗಳೂರು: ಮಾರ್ಚ್‌ನಲ್ಲಿ ಚಿಲ್ಲರೆ ಹಣದುಬ್ಬರ ದರವು ಶೇಕಡ 6.95ರಷ್ಟು ಆಗಿದೆ. ಅದರಲ್ಲೂ, ಎಣ್ಣೆಗಳು ಮತ್ತು ಕೊಬ್ಬುಗಳ (oils and fats) ಬೆಲೆ ಏರಿಕೆಯು ಶೇ 18.79ರಷ್ಟು ಆಗಿದೆ. 'ಈಗ ಇಂಡೊನೇಷ್ಯಾ ಕೈಗೊಂಡಿರುವ ತೀರ್ಮಾನದಿಂದಾಗಿ ಎಣ್ಣೆ ಮತ್ತು ಕೊಬ್ಬುಗಳ ಬೆಲೆ ಏರಿಕೆ ಮೇಲೆ ಗಂಭೀರ ಪರಿಣಾಮ ಉಂಟಾಗಬಹುದು. ಆ ಮೂಲಕ ಚಿಲ್ಲರೆ ಹಣದುಬ್ಬರ ದರವೂ ಹೆಚ್ಚಾಗಬಹುದು' ಎಂದು ಬೆಂಗಳೂರಿನ ಐಸೆಕ್‌ನ (ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ) ಅರ್ಥಶಾಸ್ತ್ರದ ಪ್ರೊಫೆಸರ್ ಕೃಷ್ಣ ರಾಜ್ ಅಂದಾಜಿಸಿದರು.

ಇ.ಡಿ ತನಿಖೆ– ಪ್ರಿಯಾಂಕಾ ಗಾಂಧಿ ವಿರುದ್ಧ ರಾಣಾ ಆರೋಪ

ಪೇಂಟಿಂಗ್ ಖರೀದಿಗೆ ಒತ್ತಡ

ನವದೆಹಲಿ(ಪಿಟಿಐ): ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರಿಂದ ಎಂ.ಎಫ್. ಹುಸೇನ್ ಪೇಂಟಿಂಗ್ ಖರೀದಿಸುವಂತೆ ತಮ್ಮ ಮೇಲೆ ಒತ್ತಡ ಹೇರಲಾಗಿತ್ತು ಎಂದು ಯೆಸ್ ಬ್ಯಾಂಕ್ ಸಹ ಸಂಸ್ಥಾಪಕ ರಾಣಾ ಕಪೂರ್ ಅವರು ಜಾರಿ ನಿರ್ದೇಶನಾಲಯದ(ಇ.ಡಿ) ವಿಚಾರಣೆ ವೇಳೆ ಬಹಿರಂಗಪಡಿಸಿದ್ದಾರೆ ಎಂದು ತಿಳಿದು ಬಂದಿದೆ.

ರಾಣಾ ಕಪೂರ್

ರಾಣಾ ಕಪೂರ್ ಅವರ ಹೇಳಿಕೆಯನ್ನು ಒಳಗೊಂಡ ದೋಷಾರೋಪ ಪಟ್ಟಿಯನ್ನು ಇ.ಡಿ ಅಧಿಕಾರಿಗಳು ಮುಂಬೈನಲ್ಲಿರುವ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಕೆ ಮಾಡಿದ್ದಾರೆ.

'ನನ್ನ ಮೇಲೆ ಪ್ರಿಯಾಂಕಾ ಗಾಂಧಿ ಅವರಿಂದ ಎಂ.ಎಫ್ ಹುಸೇನ್ ಪೇಂಟಿಂಗ್ ಅನ್ನು ಖರೀದಿಸುವಂತೆ ಬಲವಂತಪಡಿಸಲಾಗಿತ್ತು. ಒಂದು ವೇಳೆ ಇದಕ್ಕೆ ನಾನು ನಿರಾಕರಿಸಿದರೆ, ಸೋನಿಯಾ ಗಾಂಧಿ ಅವರ ಜತೆಗಿನ ಉತ್ತಮ ಸಂಬಂಧಕ್ಕೆ ಅಡ್ಡಿಯಾಗುವುದಷ್ಟೇ ಅಲ್ಲದೆ, 'ಪದ್ಮ ಭೂಷಣ' ಪುರಸ್ಕಾರದಿಂದಲೂ ವಂಚಿತರಾಗಬೇಕಾಗುತ್ತದೆ ಎಂದು ಆಗಿನ ಪೆಟ್ರೋಲಿಯಂ ಸಚಿವ ಮುರಳಿ ದೇವ್ರೊರಾ ಅವರು ನನಗೆ ತಿಳಿಸಿದ್ದರು. ಅಲ್ಲದೆ ಈ ಪೇಂಟಿಂಗ್ ಖರೀದಿಯಿಂದ ಬಂದಿದ್ದ ಹಣವನ್ನು ನ್ಯೂಯಾರ್ಕ್‌ನಲ್ಲಿ ಸೋನಿಯಾ ಗಾಂಧಿ ಅವರ ಚಿಕಿತ್ಸೆಗಾಗಿ ಬಳಸಲಾಗಿತ್ತು' ಎಂದು ಕಪೂರ್ ಹೇಳಿದ್ದಾರೆ.

'ಸೋನಿಯಾ ಗಾಂಧಿ ಅವರ ವೈದ್ಯಕೀಯ ಚಿಕಿತ್ಸೆಗಾಗಿ ಸೂಕ್ತ ಸಮಯದಲ್ಲಿ ಬೆಂಬಲಿಸುವಂತೆ ಸೋನಿಯಾ ಅವರ ಅತ್ಯಾಪ್ತರಾಗಿದ್ದ ಅಹ್ಮದ್ ಪಟೇಲ್ ಅವರು ನನಗೆ ಹೇಳಿದ್ದರು. ಕುಟುಂಬದ ಒಳಿತಿಗಾಗಿ ನಾನು ನೆರವಾಗಿದ್ದೆ. ಪದ್ಮ ಭೂಷಣ ಪುರಸ್ಕಾರಕ್ಕೆ ಇದನ್ನು ಪರಿಗಣಿಸಲಾಗಿತ್ತು' ಎಂದು ಕಪೂರ್ ಹೇಳಿದ್ದಾರೆ ಎನ್ನಲಾಗಿದೆ.

ಬಿಜೆಪಿ ಟೀಕೆ: ರಾಣಾ ಕಪೂರ್ ಆರೋಪವನ್ನು ಆಧಾರವಾಗಿಟ್ಟುಕೊಂಡು ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿರುವ ಬಿಜೆಪಿ, ಸುಲಿಗೆಕೋರರಾದ ಕಾಂಗ್ರೆಸ್ ಮತ್ತು ಗಾಂಧಿಗಳು 'ಪದ್ಮ ಭೂಷಣ' ಪುರಸ್ಕಾರದ ಮಾರಾಟದಲ್ಲಿ ತೊಡಗಿಸಿಕೊಂಡಿದ್ದರು ಎಂದು ದೂರಿದೆ.

ಸೇಡಿನ ರಾಜಕೀಯ: ಕಪೂರ್ ಅವರ ಈ ಹೇಳಿಕೆಯನ್ನು ರಾಜಕೀಯ ಸೇಡು ಎಂದು ಕಾಂಗ್ರೆಸ್ ಆರೋಪಿಸಿದೆ.

ಮುನಿದಾಸ್‌ಗೆ ಜಾಮೀನು

ಸೀತಾಪುರ (ಪಿಟಿಐ): ಉತ್ತರಪ್ರದೇಶದ ಸೀತಾಪುರದಲ್ಲಿ ದ್ವೇಷ ಭಾಷಣ ಮಾಡಿ, ಮುಸ್ಲಿಂ ಮಹಿಳೆಯರ ವಿರುದ್ಧ ಅತ್ಯಾಚಾರದ ಬೆದರಿಕೆ ಒಡ್ಡಿದ್ದ ಮಹರ್ಷಿ ಶ್ರೀಲಕ್ಷ್ಮಣ ದಾಸ್ ಉದಾಸಿ ಆಶ್ರಮದ ಬಜರಂಗ ಮುನಿದಾಸ್ ಅವರಿಗೆ ಸ್ಥಳೀಯ ನ್ಯಾಯಾಲಯವು ಶನಿವಾರ ಜಾಮೀನು ನೀಡಿದೆ.

ಜಿಲ್ಲಾ ನ್ಯಾಯಾಧೀಶ ಸಂಜಯ್ ಕುಮಾರ್ ಅವರು ಜಾಮೀನು ಮಂಜೂರು ಮಾಡಿದ್ದು, ಮುನಿದಾಸ್ ಭಾನುವಾರ ಬೆಳಿಗ್ಗೆ ಜಿಲ್ಲಾ ಕಾರಾಗೃಹದಿಂದ ಬಿಡುಗಡೆಯಾಗಿದ್ದಾರೆ.

ದಾಸ್ ಅವರ ವಿರುದ್ಧ ರಾಮ್ ನರೇಶ್ ಎಂಬುವರು ದೂರು ನೀಡಿದ ಬಳಿಕ ಅವರನ್ನು ಏ. 13ರಂದು ಪೊಲೀಸರು ಬಂಧಿಸಿದ್ದರು.

ಬಿಡುಗಡೆಯ ಬಳಿಕ ಮಾತನಾಡಿದ ಮುನಿದಾಸ್, 'ನಾನು ಸಾವಿರ ಬಾರಿ ಜೈಲಿಗೆ ಹೋಗಲು ಸಿದ್ಧ. ಆದರೆ, ಮಹಿಳೆಯರ ರಕ್ಷಣೆಯ ಕೆಲಸವನ್ನು ಮುಂದುವರಿಸುತ್ತೇನೆ ಎಂದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ,ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

GALAXY PART time work with college girls housewife 15k - 25k 7043061724 7043061715

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC,PUC, Degree ಯವರು ITI ನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100-56,000/- ವಸತಿಯೂಟದೊಂದಿಗೆ. 7899778278, 9611715755

Wanted

ತಕ್ಷಣ ಬೇಕಾಗಿದ್ದಾರೆ.ಬೆಂಗಳೂರಿನಲ್ಲಿ ಕೆಲಸಕ್ಕೆ,ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ,ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು,ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ.ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/- ESI & PF ಸೌಲಭ್ಯವಿರುತ್ತದೆ.ಬೆಂಗಳೂರು-56ಸಂಪರ್ಕಿಸಿ: 9606523337, 9606384001,

ಮನೆಕೆಲಸ (12,000-15,000) / ಹೋಂನರ್ಸ್ (15,000-18,000), ಹೆಂಗಸರು/ ಹುಡುಗಿಯರು ಬೇಕಾಗಿದ್ದಾರೆ. ಊಟ- ವಸತಿ ಉಚಿತ. ಉಡುಪಿ 7411499276

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17800-68000. 9538811223, 9538811104

ಪ್ರವಾಸ

Travel

26.06.2022 ಸಪ್ಟಂಬರ್ ಅಕ್ಟೋಬರ್‌ನಲ್ಲಿ 14/20/26 ದಿನಗಳ ಪೂರಿಜಗನ್ನಾಥ್, ಕಾಶಿ,ಗಯಾ,ಅಯೋಧ್ಯ, ನೈಮಿಶಾರಣ್ಯ ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯುಮುನೋತ್ರಿ ಅಮೃತ್‌ಸರ್ ವೈಷ್ಣೋದೇವಿ, ದೆಹಲಿ. ಜುಲೈ ಅಗಸ್ಟ್ ತಿಂಗಳಲ್ಲಿ ಅಮರನಾಥ್ ಮುಕ್ತಿನಾಥ್ 'ಶ್ರೀಸುಧಾ ಟ್ರಾವಲ್ಸ್' 080-22429289, 9448119290, 9019301300

29.06.2022 14 ದಿನಗಳು ವಿಮಾನ/ A/C ಬಸ್ಸಿನಲ್ಲಿ ಅಮರನಾಥ್,ದೆಹಲಿ ವೈಷ್ಣೊದೇವಿ,ಕಾಶ್ಮೀರ್ ಕಾಂಗ್ಡಾದೇವಿ,ಅಮೃತ್-ಸರ್ ಇತ್ಯಾದಿ. ಗಣೇಶ ಹಬ್ಬದ ಪ್ರಯುಕ್ತ: 02.09.2022 15 ದಿನಗಳ ಚಾರ್-ಧಾಮ್ ಇತ್ಯಾದಿ. ಊಟ ವಸತಿಯೊಂದಿಗೆ ಸಂಪರ್ಕಿಸಿ: ಜೈರಾಮ್ ಟೂರ್ಸ್ ವಿ.ವಿ.ಪುರಂ ಬೆಂಗಳೂರು-4. 9342514289

03.06.2022 18.06.2022 20.06.2022 ಚಾರ್‌ಧಾಮ್ ಪ್ರವಾಸ. 06.07.2022 16.07.2022 ಅಮರನಾಥ್ ಪ್ರವಾಸಗಳು. 01.09.2022, 35 ದಿನಗಳ ಉತ್ತರ ಭಾರತ. 7 ದಿನಗಳ ಕಾಶಿ,ಗಯಾ,ಅಯೋಧ್ಯ, ಇತ್ಯಾದಿ. ಸಂಪರ್ಕಿಸಿ: ಏಷ್ಯನ್ ಟ್ರಾವಲ್ ಏಜೆನ್ಸಿ 080-26574131, 26573421, 9964108171

★ಜುಲೈ 13ರಿಂದ 12 ದಿನಗಳ* ಅಮರನಾಥ, ಜಮ್ಮು, ಶ್ರೀನಗರ, ವೈಷ್ಣೋದೇವಿ, ಅಮೃತಸರ್, ಕುರುಕ್ಷೇತ್ರ, ಸಂಪರ್ಕಿಸಿ: ಶ್ರೀಗಂಗಾ ಟೂರಿಸ್ಟ್. ಬೆಂಗಳೂರು. 9480253807

11.05.2022 01.06.2022 ಕಾಶಿ,ಗಯಾ,ಅಯೋಧ್ಯ 7 ದಿನಗಳು. 05.05.2022 26.05.2022 ಧರ್ಮಸ್ಥಳ ಹೊರನಾಡು 4 ದಿನಗಳು. 19.05.2022 ರಾಮೇಶ್ವರ ಕುಂಭಕೋಣಂ 6 ದಿನಗಳು. ಜೈನ್ ಟ್ರಾವಲ್ಸ್ ಬೆಂಗಳೂರು-03. 9448402248 7022547922

15 ದಿನಗಳ ಕಾಶಿ,ದೆಹಲಿ ಪ್ರವಾಸ. 17ದಿನಗಳ ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ಚಾರ್‌ಧಾಮ್ ಮತ್ತು ಜೂನ್ ಜುಲೈನಲ್ಲಿ ಅಮರನಾಥ್ ಪ್ರವಾಸ. ಸಂಪರ್ಕಿಸಿ: ನವಕರ್ನಾಟಕ ಕಿಸಾನ್ ಯಾತ್ರ ಸೇವಸಂಘ, ಗಿರಿನಗರ ಬೆಂಗಳೂರು 9916473906 8861111568

ಪಶುಪತಿ, ಸ್ವಯಂಭೂ, ಮನಕಾಮನ, ಚಂದ್ರಗಿರಿ, ಗುಪ್ತೇಶ್ವರ, ಮುಕ್ತಿನಾಥ್, ಚಿತ್ವಾನ್ ಇತ್ಯಾದಿ ನೇಪಾಳದ ಯಾವುದೇ ಸ್ಥಳಗಳಿಗೂ ಪ್ರವಾಸ ಏರ್ಪಡಿಸುವ ಏಕೈಕ ಸಂಸ್ಥೆ ನಾಲಂದಾ ಟ್ರಾವೆಲ್ಸ್ ಕುಂದಾಪುರ. ಸಂಪರ್ಕಿಸಿ: 8310028157.

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ ಭವಿಷ್ಯ ಖಚಿತ ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಧರ್ಮಸ್ಥಳ: 7022443071

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD
BOOK YOUR CLASSIFIEDS ONLINE
ಪ್ರಜಾವಾಣಿ
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

ಲಖನೌ ಸೂಪರ್ ಜೈಂಟ್ಸ್ ಜಯಭೇರಿ: ಮುಂಬೈ ಇಂಡಿಯನ್ಸ್‌ಗೆ ಸತತ ಎಂಟನೇ ಸೋಲು

ರಾಹುಲ್ ಶತಕದ ಭರಾಟೆ

ಮುಂಬೈ: ಕನ್ನಡಿಗ ಕೆ.ಎಲ್. ರಾಹುಲ್ ಮತ್ತು ಕೃಣಾಲ್ ಪಾಂಡ್ಯ ಮುಂಬೈ ಇಂಡಿಯನ್ಸ್ ತಂಡದ ಗಾಯದ ಮೇಲೆ ಬರೆ ಎಳೆದರು.

ಸತತ ಎಂಟನೇ ಪಂದ್ಯದಲ್ಲಿ ರೋಹಿತ್ ಶರ್ಮಾ ಬಳಗವು ಸೋತಿತು. 36 ರನ್‌ಗಳಿಂದ ಲಖನೌ ಸೂಪರ್ ಜೈಂಟ್ಸ್ ತಂಡವು ಜಯಿಸಿತು.

ಒಂಬತ್ತು ದಿನಗಳ ಹಿಂದೆ ಬ್ರೆಬೋರ್ನ್ ಮೈದಾನದಲ್ಲಿ ಶತಕ ದಾಖಲಿಸಿದ್ದ ಅವರು, ಭಾನುವಾರ ವಾಂಖೆಡೆ ಕ್ರೀಡಾಂಗಣದಲ್ಲಿ ನೂರರ ಗಡಿ ದಾಟಿದರು. ಎರಡೂ ಪಂದ್ಯಗಳಲ್ಲಿ ಅವರು ಶತಕ ಪೂರೈಸಿದ್ದು ಕೂಡ 56 ಎಸೆತಗಳಲ್ಲಿ. ಮುಂಬೈ ಇಂಡಿಯನ್ಸ್ ಎದುರೇ ಈ ಎರಡೂ ಶತಕಗಳು ದಾಖಲಾಗಿದ್ದು ಮತ್ತೊಂದು ವಿಶೇಷ.

ಇಲ್ಲಿ ರಾಹುಲ್ (ಔಟಾಗದೆ 103; 62ಎ) ಛಲದ ಆಟದ ಬಲದಿಂದಲೇ ಲಖನೌ ಸೂಪರ್ ಜೈಂಟ್ಸ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 168 ರನ್ ಗಳಿಸಲು ಸಾಧ್ಯವಾಯಿತು. ಮುಂಬೈ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 132 ರನ್ ಗಳಿಸಿ ಸೋತಿತು. ರೋಹಿತ್ ಶರ್ಮಾ 39 ರನ್) ಮತ್ತು ತಿಲಕ್ ವರ್ಮಾ (38 ರನ್) ಅವರನ್ನು ಬಿಟ್ಟರೆ ಉಳಿದ ಬ್ಯಾಟರ್‌ಗಳಿಂದ ಉತ್ತಮ ಇನಿಂಗ್ಸ್ ಮೂಡಿ ಬರಲಿಲ್ಲ.

ರಾಹುಲ್ ಸುಂದರ ಶತಕ: ಮುಂಬೈ ತಂಡವು ಇಲ್ಲಿ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಲ್ಕನೇ ಓವರ್‌ನಲ್ಲಿಯೇ ಕ್ವಿಂಟನ್ ಡಿಕಾಕ್ (10 ರನ್) ವಿಕೆಟ್ ಗಳಿಸಿದ ಜಸ್‌ಪ್ರೀತ್ ಬೂಮ್ರಾ ಸಂಭ್ರಮಿಸಿದರು.

ಇನ್ನೊಂದು ಬದಿಯಲ್ಲಿದ್ದ ರಾಹುಲ್ ಮಾತ್ರ ಬೌಲರ್‌ಗಳನ್ನು ಆತ್ಮವಿಶ್ವಾಸದಿಂದ ಎದುರಿಸಿದರು. ಕರ್ನಾಟಕ ತಂಡದ ಅವರ ಗೆಳೆಯ ಮನೀಷ್ ಪಾಂಡೆ (22; 22ಎ) ಇನಿಂಗ್ಸ್‌ಗೆ ಬಲ ತುಂಬುವ ಪ್ರಯತ್ನ ಮಾಡಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 58 ರನ್ ಸೇರಿಸಿದರು. 12ನೇ ಓವರ್‌ನಲ್ಲಿ ಕೀರನ್ ಪೊಲಾರ್ಡ್ ಎಸೆತದಲ್ಲಿ ಮನೀಷ್ ಔಟಾಗುವುದರ ಮೂಲಕ ಜೊತೆಯಾಟ ಮುರಿದುಬಿತ್ತು.

ಇದರ ನಂತರ ಕ್ರೀಸ್‌ಗೆ ಬಂದ ಬ್ಯಾಟರ್‌ಗಳು ದೊಡ್ಡ ಇನಿಂಗ್ಸ್ ಆಡುವ ಛಲ ತೋರಲಿಲ್ಲ. ನಾಯಕ ರಾಹುಲ್ ಆಟವೇ ತಂಡಕ್ಕೆ ಶಕ್ತಿ ತುಂಬಿತು.

33 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಬೂಮ್ರಾ, ಉನದ್ಕತ್, ಪೊಲಾರ್ಡ್ ಅವರ ಚಾಣಾಕ್ಷ ಬೌಲಿಂಗ್ ಅನ್ನು ಎದುರಿಸಿ ನಿಂತ ಅವರು 166.13ರ ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟಿಂಗ್ ಮಾಡಿದರು. ಇನ್ನೊಂದು ವಿಶೇಷವೆಂದರೆ; ಈ ಇನಿಂಗ್ಸ್‌ನಲ್ಲಿ ರಾಹುಲ್ ಬಿಟ್ಟು ಉಳಿದ ಐವರು ಬ್ಯಾಟರ್‌ಗಳು ಸೇರಿ 58 ಎಸೆತಗಳಲ್ಲಿ 57 ರನ್ ಗಳಿಸಿದರು.

ಹೆಚ್ಚು ಶತಕ ಗಳಿಸಿದವರು (ಐಪಿಎಲ್)

ಆಟಗಾರ	ಶತಕಗಳು	ಇನಿಂಗ್ಸ್
ಕ್ರಿಸ್ ಗೇಲ್	6	141
ವಿರಾಟ್ ಕೊಹ್ಲಿ	5	207
ಜೋಸ್ ಬಟ್ಲರ್	4	71
ಕೆ.ಎಲ್. ರಾಹುಲ್	4	93
ಶೇನ್ ವಾಟ್ಸನ್	4	141
ಡೇವಿಡ್ ವಾರ್ನರ್	4	155



ಕೆ. ಎಲ್. ರಾಹುಲ್– ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಲಖನೌ ಸೂಪರ್ ಜೈಂಟ್ಸ್ 6ಕ್ಕೆ 168 (20 ಓವರ್)

ಕ್ವಿಂಟನ್ ಸಿ ರೋಹಿತ್ ಬಿ ಬೂಮ್ರಾ 10 (9 ಎ, 6x1), ರಾಹುಲ್ ಔಟಾಗದೆ 103 (62 ಎ, 4x12 6x4), ಮನೀಷ್ ಸಿ ಮೆರೆಡಿತ್ ಬಿ ಪೊಲಾರ್ಡ್ 22 (22 ಎ, 6x1), ಸ್ಟೋಯಿನಿಸ್ ಸಿ ತಿಲಕ್ ಬಿ ಸ್ಯಾಮ್ಸ್ 0 (3 ಎ), ಕೃಣಾಲ್ ಸಿ ಶೋಕೀನ್ ಬಿ ಪೊಲಾರ್ಡ್ 1 (2 ಎ), ದೀಪಕ್ ಸಿ ಬ್ರೆವಿಸ್ ಬಿ ಮೆರೆಡಿತ್ 10 (9 ಎ, 4x1), ಆಯುಷ್ ಸಿ ಪೊಲಾರ್ಡ್ ಬಿ ಮೆರೆಡಿತ್ 14 (11 ಎ, 6x1), ಜೇಸನ್ ಔಟಾಗದೆ 0 (2 ಎ))

ಇತರೆ (ಲೆಗ್‌ಬೈ 2, ವೈಡ್ 6) 8

ವಿಕೆಟ್ ಪತನ: 1-27 (ಕ್ವಿಂಟನ್ ಡಿಕಾಕ್, 3.6), 2-85 (ಮನೀಷ್ ಪಾಂಡೆ, 11.5), 3-102 (ಮಾರ್ಕಸ್ ಸ್ಟೋಯಿನಿಸ್, 12.5), 4-103 (ಕೃಣಾಲ್ ಪಾಂಡ್ಯ, 13.1), 5-121 (ದೀಪಕ್ ಹೂಡಾ, 15.3), 6-168 (ಆಯುಷ್ ಬದೋನಿ, 19.4)

ಬೌಲಿಂಗ್: ಡ್ಯಾನಿಯಲ್ ಸ್ಯಾಮ್ಸ್ 4-0-40-1, ಕೃತಿಕ್ ಶೋಕೀನ್ 2-0-11-0, ಜಸ್‌ಪ್ರೀತ್ ಬೂಮ್ರಾ 4-0-31-1, ರಿಲೆ ಮೆರೆಡಿತ್ 4-0-40-2, ಜಯದೇವ್ ಉನದ್ಕತ್ 4-0-36-0, ಕೀರನ್ ಪೊಲಾರ್ಡ್ 2-0-8-2

ಮುಂಬೈ ಇಂಡಿಯನ್ಸ್ 8ಕ್ಕೆ 132 (20 ಓವರ್)

ಇಶಾನ್ ಸಿ ಹೋಲ್ಡರ್ ಬಿ ರವಿ 8 (20ಎ), ರೋಹಿತ್ ಸಿ ಗೌತಮ್ (ಬದಲಿ) ಬಿ ಕೃಣಾಲ್ 39 (31ಎ, 4X5, 6X1), ಡೆವಾಲ್ಡ್ ಸಿ ಚಮೀರ ಬಿ ಮೊಹಸಿನ್ 3 (5ಎ), ಸೂರ್ಯಕುಮಾರ್ ಸಿ ರಾಹುಲ್ ಬಿ ಆಯುಷ್ 7 (7ಎ, 4X1), ತಿಲಕ್ ಸಿ ರವಿ ಬಿ ಹೋಲ್ಡರ್ 38 (27ಎ, 4X2, 6X2), ಪೊಲಾರ್ಡ್ ಸಿ ಹೂಡಾ ಬಿ ಕೃಣಾಲ್ 19 (20ಎ, 6X1), ಡೇನಿಯಲ್ ಸಿ ರವಿ ಬಿ ಕೃಣಾಲ್ 3 (7ಎ), ಜಯದೇವ್ ರನೌಟ್ (ಹೋಲ್ಡರ್/ ಕೃಣಾಲ್) 1 (1ಎ), ಹೃತಿಕ್ ಔಟಾಗದೆ 0 (0ಎ), ಜಸ್‌ಪ್ರೀತ್ ಔಟಾಗದೆ 0 (2ಎ)

ಇತರೆ (ಲೆಗ್‌ಬೈ 2, ವೈಡ್ 12) 14

ವಿಕೆಟ್ ಪತನ: 1-49 (ಇಶಾನ ಕಿಶನ್, 7.1), 2-54 (ಡೆವಾಲ್ಡ್ ಬ್ರೆವಿಸ್, 8.3), 3-58 (ರೋಹಿತ್ ಶರ್ಮಾ, 9.4), 4-67 (ಸೂರ್ಯಕುಮಾರ್ ಯಾದವ್, 11.2), 5-124 (ತಿಲಕ್ ವರ್ಮಾ, 17.5), 6-131 (ಕೀರನ್ ಪೊಲಾರ್ಡ್, 19.1), 7-132 (ಜಯದೇವ್ ಉನದ್ಕತ್, 19.3), 8-132 (ಡೇನಿಯಲ್ ಸ್ಯಾಮ್ಸ್, 19.4)

ಬೌಲಿಂಗ್: ಮೊಹಸಿನ್ ಖಾನ್ 4-0-27-1, ದುಷ್ಮಂತ ಚಮೀರ 4-0-14-0, ಜೇಸನ್ ಹೋಲ್ಡರ್ 4-0-36-1, ಕೃಣಾಲ್ ಪಾಂಡ್ಯ 4-0-19-3, ರವಿ ಬಿಷ್ಣೋಯಿ 3-0-28-1, ಆಯುಷ್ ಬದೋನಿ 1-0-6-1

ಫಲಿತಾಂಶ: ಲಖನೌ ಸೂಪರ್ ಜೈಂಟ್ಸ್‌ಗೆ 36 ರನ್‌ಗಳ ಜಯ

ಲಯಕ್ಕೆ ಮರಳುವ ಸಾಮರ್ಥ್ಯ ವಿರಾಟ್‌ಗೆ ಇದೆ: ಸಂಜಯ್

ಮುಂಬೈ (ಪಿಟಿಐ): ವಿರಾಟ್ ಕೊಹ್ಲಿ ತಮ್ಮ ಫಾರ್ಮ್‌ಗೆ ಮರಳಲು ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದ್ದಾರೆ. ಸ್ವಲ್ಪ ಅದೃಷ್ಟವೂ ಜೊತೆ ನೀಡಿದರೆ ಅವರು ಲಯಕ್ಕೆ ಮರಳುವುದು ಖಚಿತ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮುಖ್ಯ ಕೋಚ್ ಸಂಜಯ್ ಬಾಂಗರ್ ಹೇಳಿದ್ದಾರೆ.

ಕೊಹ್ಲಿ ಈ ಬಾರಿಯ ಐಪಿಎಲ್‌ನಲ್ಲಿ ಸತತ ಎರಡು ಪಂದ್ಯಗಳಲ್ಲಿ ಅವರು ಸೊನ್ನೆ ಸುತ್ತಿದ್ದಾರೆ. ಈ ಪಂದ್ಯಗಳಲ್ಲಿ ತಾವೆದುರಿಸಿದ ಮೊದಲ ಎಸೆತದಲ್ಲಿಯೇ ಔಟಾಗಿದ್ದಾರೆ. ಅಲ್ಲೇ ಕಳೆದ ಎರಡು ವರ್ಷಗಳಿಂದ ಅವರು ಯಾವುದೇ ಮಾದರಿಯ ಕ್ರಿಕೆಟ್‌ನಲ್ಲಿಯೂ ಶತಕ ದಾಖಲಿಸಿಲ್ಲ.

ಮಯಂಕ್ ಪಡೆಗೆ ಧೋನಿ ಸವಾಲು

ಚೆನ್ನೈ ಸೂಪರ್ ಕಿಂಗ್ಸ್–ಪಂಜಾಬ್ ಕಿಂಗ್ಸ್ ಹಣಾಹಣಿ ಇಂದು

ಮುಂಬೈ (ಪಿಟಿಐ): ಮಹೇಂದ್ರಸಿಂಗ್ ಧೋನಿ ತಾವು ಈಗಲೂ ಫಿನಿಷರ್ ಎಂಬುದನ್ನು ಈಚೆಗೆ ಮುಂಬೈ ಇಂಡಿಯನ್ಸ್ ತಂಡದ ಎದುರಿನ ಪಂದ್ಯದಲ್ಲಿ ತೋರಿಸಿದ್ದಾರೆ. ಅಂದು ಅವರು ಆಡಿದ ಆಟವು ಚೆನ್ನೈ ಸೂಪರ್ ಕಿಂಗ್ಸ್ ತಂಡದೊಳಗೆ ಸಂಚಲನ ಮೂಡಿಸಿದೆ. ನಾಯಕ ರವೀಂದ್ರ ಜಡೇಜ ಆತ್ಮವಿಶ್ವಾಸವೂ ಇಮ್ಮಡಿಸಿದೆ.


ಮಯಂಕ್ ಅಗರವಾಲ್

ಇದುವರೆಗೆ ಆಡಿರುವ ಏಳು ಪಂದ್ಯಗಳಲ್ಲಿ ಐದರಲ್ಲಿ ಸೋತಿರುವ ಕಹಿಯನ್ನು ಮರೆತು ಪುಟಿದೇಳುವತ್ತ ಜಡೇಜ ಬಳಗ ಚಿತ್ತ ನೆಟ್ಟಿದೆ. ಸೋಮವಾರ ವಾಂಖೆಡೆ ಕ್ರೀಡಾಂಗಣದಲ್ಲಿ ಚೆನ್ನೈ ತಂಡವು ಮಯಂಕ್ ಅಗರವಾಲ್ ನಾಯಕತ್ವದ ಪಂಜಾಬ್ ಕಿಂಗ್ಸ್ ಎದುರು ಕಣಕ್ಕಿಳಿಯಲಿದೆ. ಮೊದಲ ಸುತ್ತಿನಲ್ಲಿ ಅನುಭವಿಸಿದ ಸೋಲಿನ ಮುಯ್ಯಿ ತೀರಿಸಿಕೊಳ್ಳಲು ಚೆನ್ನೈ ಸಿದ್ಧವಾಗಿದೆ.

ಮಯಂಕ್ ಬಳಗವೂ ಇದುವರೆಗೆ ಏಳು ಪಂದ್ಯಗಳನ್ನು ಆಡಿದೆ. ಮೂರರಲ್ಲಿ ಗೆದ್ದು, ನಾಲ್ಕರಲ್ಲಿ ಸೋತಿದೆ. ಆದರೆ, ಕಳೆದೆರಡು ಪಂದ್ಯಗಳಲ್ಲಿ ಸತತ ಸೋಲಿನ ಕಹಿ ಅನುಭವಿಸಿದೆ. ಗೆಲುವಿನ ಹಾದಿಗೆ ಮರಳುವ ತವಕದಲ್ಲಿದೆ.

ರವೀಂದ್ರ ಜಡೇಜ, ಮಹೇಂದ್ರಸಿಂಗ್ ಧೋನಿ

ಡೆಲ್ಲಿ ಕ್ಯಾಪಿಟಲ್ಸ್ ಎದುರಿನ ಪಂದ್ಯದಲ್ಲಿ ಪಂಜಾಬ್ ತಂಡವು ಕಳಪೆ ಬ್ಯಾಟಿಂಗ್‌ಗೆ ಬೆಲೆ ತೆರಬೇಕಾಯಿತು. ಶಿಖರ್ ಧವನ್, ಜಾನಿ ಬೆಸ್ಟೊ, ಲಿವಿಂಗ್‌ಸ್ಟೋನ್, ಶಾರುಕ್ ಖಾನ್ ಅವರಲ್ಲಿ ಒಬ್ಬರೂ ಮಿಂಚಲಿಲ್ಲ. ಇದರಿಂದಾಗಿ ಎದುರಾಳಿ ತಂಡಕ್ಕೆ ನೀಡಿದ ಸಾಧಾರಣ ಗುರಿಯನ್ನು ರಕ್ಷಿಸಿಕೊಳ್ಳುವ ಬೌಲರ್‌ಗಳ ಪ್ರಯತ್ನ ಫಲ ಕೊಡಲಿಲ್ಲ. ರಾಹುಲ್ ಚಾಹರ್ ಮತ್ತು ಕಗಿಸೊ ರಬಾಡ ಅವರ ಅನುಭವದ ಮೇಲೆಯೇ ತಂಡವು ಅವಲಂಬಿತವಾಗಿದೆ. ಚೆನ್ನೈನ ಋತುರಾಜ್ ಗಾಯಕವಾಡ, ರಾಬಿನ್ ಉತ್ತಪ್ಪ, ಅಂಬಟಿ ರಾಯುಡು, ಮೋಯಿನ್ ಅಲಿ, ಧೋನಿ ಅವರ ಆಟಕ್ಕೆ ಕಡಿವಾಣ ಹಾಕುವ ಸವಾಲು ಇವರ ಮುಂದಿದೆ. ಚೆನ್ನೈನ ಮುಖೇಶ್ ಚೌಧರಿ, ಜಡೇಜ ಮತ್ತು ಬ್ರಾವೊ ಚೆನ್ನೈ ತಂಡದ ಬೌಲಿಂಗ್ ವಿಭಾಗದ ಶಕ್ತಿಯಾಗಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	7	6	1	0	0	12	0.396
ಹೈದರಾಬಾದ್	7	5	2	0	0	10	0.691
ರಾಜಸ್ಥಾನ	7	5	2	0	0	10	0.432
ಲಖನೌ	8	5	3	0	0	10	0.334
ಬೆಂಗಳೂರು	8	5	3	0	0	10	-0.472
ಡೆಲ್ಲಿ	7	3	4	0	0	6	0.715
ಕೋಲ್ಕತ್ತ	8	3	5	0	0	6	0.080
ಪಂಜಾಬ್	7	3	4	0	0	6	-0.562
ಚೆನ್ನೈ	7	2	5	0	0	4	-0.534
ಮುಂಬೈ	8	0	8	0	0	0	-1.000

*ಭಾನುವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	491
ರಾಹುಲ್	ಲಖನೌ	368
ಹಾರ್ದಿಕ್	ಗುಜರಾತ್	295

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	18
ನಟರಾಜನ್	ಹೈದರಾಬಾದ್	15
ಕುಲದೀಪ್	ಡೆಲ್ಲಿ	13

ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್: ವಿಕಿ ಚಾಹರ್‌ಗೆ ಕಂಚು

ದೀಪಕ್ ಪೂನಿಯಾ ಬೆಳ್ಳಿ ನಗು

ಉಲಾನ್‌ಬಾತರ್, ಮಂಗೋಲಿಯಾ (ಪಿಟಿಐ): ಭಾರತದ ದೀಪಕ್ ಪೂನಿಯಾ ಅವರಿಗೆ ಕಜಕಸ್ತಾನದ ಅಜ್ಮತ್ ದೌಲತ್‌ಬೆಕೊವ್ ತಂತ್ರಗಳಿಗೆ ಪ್ರತಿತಂತ್ರ ಹೆಣೆಯಲು ಸಾಧ್ಯವಾಗಲಿಲ್ಲ. ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನ 86 ಕೆಜಿ ವಿಭಾಗದಲ್ಲಿ ಅವರು ಬೆಳ್ಳಿ ಪದಕಕ್ಕೆ ಸಮಾಧಾನಪಡಬೇಕಾಯಿತು. 92 ಕೆಜಿ ವಿಭಾಗದಲ್ಲಿ ವಿಕಿ ಚಾಹರ್ ಕಂಚು ಗೆದ್ದುಕೊಂಡರು.

ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಒಂದೂ ಪಾಯಿಂಟ್ಸ್ ಬಿಟ್ಟುಕೊಡದೇ ಫೈನಲ್ ಪ್ರವೇಶಿಸಿದ್ದ ದೀಪಕ್, ಚಿನ್ನದ ಪದಕದ ಸುತ್ತಿನಲ್ಲಿ 1-6ರಿಂದ ಅಜ್ಮತ್ ಅವರಿಗೆ ಮಣಿದರು.

ಇದಕ್ಕೂ ಮೊದಲು ದೀಪಕ್ 6-0ಯಿಂದ ಇರಾನ್‌ನ ಮೊಹಸೆನ್ ಮೀರ್‌ಯೂಸುಫ್ ಮತ್ತು 5-0ಯಿಂದ ಕೊರಿಯಾದ ಗ್ವಾನುಕ್ ಕಿಮ್ ಅವರನ್ನು ಚಿತ್ ಮಾಡಿದ್ದರು.

ಫೈನಲ್ ಬೌಟ್‌ನಲ್ಲಿ ಭಾರತದ ಪೈಲ್ವಾನ ಆಕ್ರಮಣಕಾರಿ ನಡೆಗಳನ್ನು ಪ್ರಯೋಗಿಸಲು ದೌಲತ್‌ಬೆಕೊವ್ ಅವಕಾಶ ಮಾಡಿಕೊಡಲಿಲ್ಲ. ಹೆಚ್ಚು ಅಂತರ ಕಾಯ್ದುಕೊಳ್ಳುವ ಮೂಲಕ 'ಲೆಗ್ ಅಟ್ಯಾಕ್' ತಂತ್ರಗಳಿಗೂ ಶರಣಾಗಲಿಲ್ಲ. ಆದರೆ ಪ್ರತಿದಾಳಿಗಳನ್ನು ಯಶಸ್ವಿಯಾಗಿ ನಡೆಸಿದ ಕಜಕಸ್ತಾನ ಪೈಲ್ವಾನ ಗೆಲುವು ಒಲಿಸಿಕೊಂಡರು.

ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ದೀಪಕ್ ಅವರಿಗೆ ಇದು ನಾಲ್ಕನೇ ಪದಕ. 2021ರಲ್ಲಿ ಬೆಳ್ಳಿ, 2019 ಮತ್ತು 2020ರಲ್ಲಿ ಕಂಚು ಗೆದ್ದುಕೊಂಡಿದ್ದರು.

ಕಂಚಿನ ಪದಕದ ಸುತ್ತಿನಲ್ಲಿ ವಿಕಿ 5-3ರಿಂದ ಉಜ್ಬೆಕಿಸ್ತಾನದ ಅಜಿನಿಯಾಜ್ ಸಪರ್ನಿಯಜೊವ್ ಅವರನ್ನು ಮಣಿಸಿದರು.

61 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಮಂಗಲ್ ಕಡಿಯಾನ್ ಕಂಚಿನ ಪದಕದ ಬೌಟ್‌ನಲ್ಲಿ 4-6ರಿಂದ ಕಿರ್ಗಿಸ್ತಾನದ ಉಲುಕ್‌ಬೆಕ್ ಜೊಲ್ಡೊಶ್‌ಬೆಕೊವ್ ಎದುರು ಎಡವಿದರು.

ದೀಪಕ್ ಪೂನಿಯಾ– ಪಿಟಿಐ ಚಿತ್ರ

ಆರ್ಚರಿ: ತರುಣದೀಪ್– ರಿಧಿಗೆ ಚಿನ್ನ

ಅಂತಲ್ಯ, ಟರ್ಕಿ (ಪಿಟಿಐ): ನಿಖರ ಗುರಿಯ ಮೂಲಕ ಗಮನಸೆಳೆದ ತರುಣದೀಪ್ ರಾಯ್ ಮತ್ತು ರಿಧಿ ಫೋರ್ ಆರ್ಚರಿ ಸ್ಟೇಜ್ 1 ವಿಶ್ವಕಪ್ ಟೂರ್ನಿಯಲ್ಲಿ ಭಾರತಕ್ಕೆ ಎರಡನೇ ಚಿನ್ನದ ಪದಕ ಗೆದ್ದುಕೊಟ್ಟರು.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಮಿಶ್ರ ಜೋಡಿ ವಿಭಾಗದ ಫೈನಲ್‌ನಲ್ಲಿ ಭಾನುವಾರ ಭಾರತದ ಬಿಲ್ಗಾರರು ಶೂಟ್ ಆಫ್‌ನಲ್ಲಿ 5-4ರಿಂದ ಗ್ರೇಟ್ ಬ್ರಿಟನ್‌ನ ಬ್ರಿಯೊನಿ ಪ್ರಿಟ್‌ಮನ್ ಮತ್ತು ಅಲೆಕ್ಸ್ ವೈಸ್ ಅವರನ್ನು ಸೋಲಿಸಿದರು.

ಅಮೆರಿಕದ ಗೇಬ್ರಿಯಲ್ ಸೆಸಾಯಿ ಮತ್ತು ಬ್ರಾಡಿ ಎಲಿಸನ್, ಸ್ಪೇನ್ನ ಎಲಿಯಾ ಕೆನಾಲೆಸ್ ಮತ್ತು ಮಿಗುವೆಲ್ ಅಲ್ವಾರಿನೊ ಗಾರ್ಸಿಯಾ ಅವರನ್ನು ಸೋಲಿಸಿ ಕಂಚಿನ ಪದಕ ಗೆದ್ದುಕೊಂಡರು.

ಫೈನಲ್ ಹಣಾಹಣಿಯ ಆರಂಭದಲ್ಲಿ 0-2ರ ಸೆಟ್ ಹಿನ್ನಡೆಯಲ್ಲಿದ್ದ ತರುಣದೀಪ್– ರಿಧಿ ಬಳಿಕ ಪುಟಿದೆದ್ದು ಗೆಲುವು ಒಲಿಸಿಕೊಂಡರು. ಈ ಜೋಡಿಗೆ ವಿಶ್ವಕಪ್‌ನಲ್ಲಿ ಒಲಿದ ಚೊಚ್ಚಲ ಚಿನ್ನ ಇದು. ಭಾರತ ತಂಡಕ್ಕೂ ಮಿಶ್ರ ಜೋಡಿ ವಿಭಾಗದಲ್ಲಿ ಇದು ಮೊದಲ ಚಿನ್ನದ ಸಂಭ್ರಮ. ಈ ಗೆಲುವಿನೊಂದಿಗೆ ಭಾರತ ತಂಡವು ವರ್ಷದ ಮೊದಲ ವಿಶ್ವಕಪ್ ಟೂರ್ನಿಯನ್ನು ಎರಡು ಚಿನ್ನದ ಪದಕಗಳೊಂದಿಗೆ ಕೊನೆಗೊಳಿಸಿತು. ಶನಿವಾರ ಪುರುಷರ ಕಾಂಪೌಂಡ್ ತಂಡ ವಿಭಾಗದಲ್ಲಿ ಅಭಿಷೇಕ್ ವರ್ಮಾ, ರಜತ್ ಚೌಹಾನ್ ಮತ್ತು ಅಮನ್ ಸೈನಿ ಚಿನ್ನ ಕೊರಳಿಗೇರಿಸಿಕೊಂಡಿದ್ದರು.

38 ವರ್ಷದ ತರುಣದೀಪ್ 2010ರಲ್ಲಿ ಗುವಾಂಗ್‌ಜೌ ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ ಗೆದ್ದುಕೊಂಡಿದ್ದರು. 17 ವರ್ಷದ ರಿಧಿಗೆ ಇದು ಮೊದಲ ವಿಶ್ವಕಪ್ ಪದಕ.

ರಿಧಿ ಫೋರ್ ಮತ್ತು ತರುಣದೀಪ್ ರಾಯ್– ಟ್ವಿಟರ್ ಚಿತ್ರ

ತಕ್ಷಣವೇ ಉಚಿತ ಕೋವಿಶೀಲ್ಡ್ ಲಸಿಕೆ ನೀಡಿ: ಎಸ್‌ಐಐ ಒತ್ತಾಯ

ನವದೆಹಲಿ (ಪಿಟಿಐ): ದೇಶದಲ್ಲಿ ಹೆಚ್ಚುತ್ತಿರುವ ಕೋವಿಡ್ ಪ್ರಕರಣಗಳನ್ನು ಗಮನದಲ್ಲಿಟ್ಟುಕೊಂಡು, ಕೋವ್ಯಾಕ್ಸ್ ಸೌಲಭ್ಯದಡಿ ಲಸಿಕೆ ಮತ್ತು ಪ್ರತಿರಕ್ಷಣೆಗಳ ಜಾಗತಿಕ ಒಕ್ಕೂಟವು (ಜಿಎವಿಐ) ಉಚಿತವಾಗಿ ನೀಡಿದ ಕೋವಿಶೀಲ್ಡ್‌ನ 10 ಕೋಟಿ ಡೋಸ್‌ಗಳನ್ನು ಬಳಸಬೇಕೆಂದು ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಈ ಸಂಬಂಧ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯಕ್ಕೆ ಪತ್ರ ಬರೆದಿರುವ ಎಸ್‌ಐಐ, 'ಪ್ರಸ್ತುತ ಲಭ್ಯವಿರುವ 10 ಕೋಟಿ ಉಚಿತ ಕೋವಿಶೀಲ್ಡ್ ಡೋಸ್‌ಗಳನ್ನು ಕೇಂದ್ರ ಸರ್ಕಾರವು ಸಕಾಲಿಕವಾಗಿ ಬಳಸಿಕೊಳ್ಳಬೇಕು. ಇಲ್ಲದಿದ್ದರೆ ಕೋವಿಡ್‌ನಿಂದ ಜೀವ ಉಳಿಸುವ ಈ ಡೋಸ್‌ಗಳು ವ್ಯರ್ಥವಾಗಲಿವೆ' ಎಂದೂ ಹೇಳಿದೆ.

'ಯುನಿಸೆಫ್ ಮೂಲಕ ಭಾರತಕ್ಕೆ 14 ಕೋಟಿ ಡೋಸ್ ಕೋವಿಶೀಲ್ಡ್ ಅನ್ನು ಪೂರೈಸಲಾಗಿದೆ. ದೇಶದಲ್ಲಿ ಕೋವಿಡ್ ಪ್ರಕರಣಗಳು ಮತ್ತೆ ಹೆಚ್ಚುತ್ತಿರುವ ಕಾರಣ, ನಮ್ಮ ನಾಗರಿಕರಿಗೆ ತಕ್ಷಣವೇ ಲಭ್ಯವಿರುವ 10 ಕೋಟಿ ಉಚಿತ ಕೋವಿಶೀಲ್ಡ್ ಲಸಿಕೆ ಡೋಸ್‌ಗಳನ್ನು ಬಳಸುವುದು ಕೋವಿಡ್ ಉಲ್ಬಣ ನಿಯಂತ್ರಿಸಲು ಪ್ರಯೋಜನಕಾರಿಯಾಗಲಿದೆ' ಎಂದು ಪತ್ರದಲ್ಲಿ ಎಸ್‌ಐಐ ನಿರ್ದೇಶಕ (ಸರ್ಕಾರ ಮತ್ತು ನಿಯಂತ್ರಣ ವ್ಯವಹಾರಗಳು) ಪ್ರಕಾಶ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

ಕೋವಿಡ್: ನಾಲ್ಕು ಜಿಲ್ಲೆಗಳಲ್ಲಿ ಪತ್ತೆ

ಬೆಂಗಳೂರು: ರಾಜ್ಯದಲ್ಲಿ ಭಾನುವಾರ 60 ಮಂದಿ ಕೊರೊನಾ ಸೋಂಕಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣವು ಶೇ 0.72ರಷ್ಟಿದೆ.

ಬೆಂಗಳೂರು ನಗರದಲ್ಲಿ ಅತಿ ಹೆಚ್ಚಿನ 57 ಪ್ರಕರಣಗಳು ವರದಿಯಾಗಿವೆ. ಚಿತ್ರದುರ್ಗ, ಧಾರವಾಡ, ವಿಜಯಪುರ ಜಿಲ್ಲೆಗಳಲ್ಲಿ ತಲಾ ಒಂದು ಪ್ರಕರಣ ಪತ್ತೆಯಾಗಿದೆ. ಉಳಿದ ಜಿಲ್ಲೆಗಳಲ್ಲಿ ಯಾವುದೇ ಹೊಸ ಪ್ರಕರಣಗಳು ವರದಿಯಾಗಿಲ್ಲ. ಈವರೆಗೆ ದೃಢಪಟ್ಟ ಒಟ್ಟು ಪ್ರಕರಣಗಳ ಸಂಖ್ಯೆ 39.46 ಲಕ್ಷಕ್ಕೆ ಏರಿಕೆಯಾಗಿದೆ. ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 1,676ಕ್ಕೆ ಇಳಿಕೆಯಾಗಿದೆ ಎಂದು ಆರೋಗ್ಯ ಇಲಾಖೆ ಪ್ರಕಟಣೆ ತಿಳಿಸಿದೆ.

2,593 ಹೊಸ ಕೋವಿಡ್ ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ ಕಳೆದ 24 ಗಂಟೆಗಳಲ್ಲಿ 2,593 ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 15,873ಕ್ಕೆ ಏರಿಕೆಯಾಗಿದೆ.

ಇದೇ ವೇಳೆ ದೇಶದಲ್ಲಿ 44 ಸಾವು ಸಂಭವಿಸಿದೆ. ಇದುವರೆಗೆ ಒಟ್ಟಾರೆ 5,22,193 ಮಂದಿ ಮೃತಪಟ್ಟಿದ್ದಾರೆ. ಕಳೆದ ಹಲವು ದಿನಗಳಿಂದ ಕೋವಿಡ್ ಪ್ರಕರಣಗಳ ಸಂಖ್ಯೆ ದೇಶದಲ್ಲಿ ದಿನದಿಂದ ದಿನಕ್ಕೆ ಏರಿಕೆಯಾಗುತ್ತಲೇ ಇದೆ. ಶುಕ್ರವಾರ 2,451 ಪ್ರಕರಣಗಳು ವರದಿಯಾಗಿದ್ದವು. ಶನಿವಾರ 2,527 ಪ್ರಕರಣಗಳು ಪತ್ತೆಯಾಗಿದ್ದವು.

ಶಾಂಘೈನಲ್ಲಿ ಒಂದೇ ದಿನ 39 ಮಂದಿ ಸಾವು

ಬೀಜಿಂಗ್ (ಪಿಟಿಐ/ಎಪಿ): ಚೀನಾದ ರಾಜಧಾನಿ ಬೀಜಿಂಗ್‌ನಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಳವಾಗುತ್ತಿದ್ದು, ತೀವ್ರ-ಕಟ್ಟೆಚ್ಚರ ಘೋಷಿಸಲಾಗಿದೆ. ದೇಶದ ಆರ್ಥಿಕ ಕೇಂದ್ರವಾದ ಶಾಂಘೈನಲ್ಲಿ ಒಂದೇ ದಿನ 39 ಮಂದಿ ಕೋವಿಡ್‌ನಿಂದ ಮೃತಪಟ್ಟಿದ್ದಾರೆ.

ಚೀನಾದಲ್ಲಿ ಶನಿವಾರ 21,796 ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ 1,566 ಲಕ್ಷಣ ಹೊಂದಿರುವ ಪ್ರಕರಣಗಳಾದರೆ, ಉಳಿದವು ಲಕ್ಷಣರಹಿತ ಪ್ರಕರಣಗಳಾಗಿವೆ. ಇಂತಹ ಪ್ರಕರಣಗಳು ಶಾಂಘೈನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗಿವೆ. ಈಗ ಒಟ್ಟು ಪ್ರಕರಣಗಳ ಸಂಖ್ಯೆ 4,66,000ಕ್ಕೆ ಏರಿದೆ ಎಂದು ಚೀನಾದ ರಾಷ್ಟ್ರೀಯ ಆರೋಗ್ಯ ಆಯೋಗ ವರದಿ ಮಾಡಿದೆ.

'ಲಕ್ಷಣ ರಹಿತ ಸೋಂಕಿತರು ವಾರದಿಂದ ನಗರದಲ್ಲಿ ಪ್ರಯಾಣ ಮಾಡುತ್ತಿರುವುದರಿಂದ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದೆ' ಎಂದು ಬೀಜಿಂಗ್‌ನ ವಿಪತ್ತು ನಿರ್ವಹಣಾ ಮತ್ತು ನಿಯಂತ್ರಣ ಕೇಂದ್ರದ ಉಪ ನಿರ್ದೇಶಕ ಪಾಂಗ್ ಕ್ಸಿಂಗುವೊ ತಿಳಿಸಿದ್ದಾರೆ.

ಲೋಹದ ತಡೆಗೋಡೆ ನಿರ್ಮಿಸಲಿರುವ ತೈವಾನ್: ಕೊರೊನಾ ಸೋಂಕು ಹೆಚ್ಚಳವಾಗುತ್ತಿರುವ ಕಾರಣ ಚೀನಾದ ನೆರೆಯ ದೇಶ ತೈವಾನ್ ಸಹ ಆತಂಕಗೊಂಡಿದೆ. ಸೋಂಕಿತರು ವಾಸವಾಗಿರುವ ಮನೆ ಹಾಗೂ ಅಪಾರ್ಟ್‌ಮೆಂಟ್‌ಗಳಲ್ಲಿ ಸೊಂಕು ಹರಡದಂತೆ ತಡೆಯಲು ಲೋಹದ ತಡೆಗೋಡೆಗಳನ್ನು ನಿರ್ಮಿಸುತ್ತಿದ್ದಾರೆ. ಇಂತಹ ತಡೆಗೋಡೆಗಳು ಆರೋಗ್ಯ ಕಾರ್ಯಕರ್ತರಿಗೆ ಓಡಾಡಲು ಒಂದು ಚಿಕ್ಕ ಬಾಗಿಲನ್ನು ಹೊಂದಿರಲಿವೆ.

ಇಸ್ರೇಲ್‌ನಲ್ಲಿ ಮಾಸ್ಕ್ ಕಡ್ಡಾಯವಲ್ಲ: ಇಸ್ರೇಲ್‌ನಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಗಣನೀಯ ಇಳಿಕೆ ಕಂಡುಬಂದಿದೆ. ಈ ಕಾರಣಕ್ಕೆ ಅಲ್ಲಿನ ಸರ್ಕಾರ ಒಂದು ವರ್ಷದಿಂದ ಜಾರಿಯಲ್ಲಿದ್ದ ಒಳಾಂಗಣದಲ್ಲಿ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕೆಂಬ ಆದೇಶವನ್ನು ಹಿಂತೆಗೆದುಕೊಂಡಿದೆ.

ಸಂಕ್ಷಿಪ್ತ ಸುದ್ದಿ

ಕೋವಿಡ್ ಬಗ್ಗೆ ಎಚ್ಚರದಿಂದಿರಿ: ಪ್ರಧಾನಿ ಮೋದಿ

ನವದೆಹಲಿ (ಪಿಟಿಐ): ಹಲವು ಹಬ್ಬಗಳು ಹತ್ತಿರವಾಗುತ್ತಿರುವುದರಿಂದ ಜನರು ಕೋವಿಡ್ ಬಗ್ಗೆ ಎಚ್ಚರದಿಂದಿರಬೇಕು. ಮುಖಗವಸು ಧರಿಸುವುದು, ಕೈತೊಳೆಯುವುದು ಮೊದಲಾದ ಮುಂಜಾಗ್ರತಾ ಕ್ರಮಗಳನ್ನು ಮುಂದುವರಿಸಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಸಲಹೆ ನೀಡಿದ್ದಾರೆ.

ತಿಂಗಳ ರೇಡಿಯೊ ಕಾರ್ಯಕ್ರಮ 'ಮನ್ ಕಿ ಬಾತ್'ನಲ್ಲಿ ಮಾತನಾಡಿದ ಅವರು, ಮುಂಬರುವ ದಿನಗಳಲ್ಲಿ ಈದ್, ಅಕ್ಷಯ ತೃತೀಯಾ, ಭಗವಾನ್ ಪರಶುರಾಮ ಜಯಂತಿ ಮತ್ತು ವೈಶಾಖ ಬುದ್ಧ ಪೂರ್ಣಿಮೆಯನ್ನು ಆಚರಿಸಲಾಗುವುದು, ಈ ಹಬ್ಬಗಳ ಆಚರಣೆ ವೇಳೆ ಕೋವಿಡ್ ಬಗ್ಗೆ ಎಚ್ಚರಿಕೆ ಇರಲಿ ಎಂದರು.

ಪಾಕ್: ಬಿಲಾವಲ್ ವಿದೇಶಾಂಗ ಸಚಿವ?

ಇಸ್ಲಾಮಾಬಾದ್/ಲಂಡನ್ (ಪಿಟಿಐ): ಒಂದು ಅಥವಾ ಎರಡು ದಿನಗಳಲ್ಲಿ ಪಾಕಿಸ್ತಾನ ಪೀಪಲ್ಸ್ ಪಕ್ಷದ (ಪಿಪಿಪಿ) ಅಧ್ಯಕ್ಷ ಬಿಲಾವಲ್ ಭುಟ್ಟೋ ಜರ್ದಾರಿ ಪಾಕಿಸ್ತಾನದ ವಿದೇಶಾಂಗ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ಪಕ್ಷದ ಹಿರಿಯ ಮುಖಂಡ ಕಮರ್ ಜಮಾನ್ ಕೈರಾ ಹೇಳಿದ್ದಾರೆ. ಜರ್ದಾರಿ ಕುಟುಂಬದ ಭುಟ್ಟೋ (33) ವಿದೇಶಾಂಗ ಸಚಿವರ ಹುದ್ದೆಗೆ ಮುಂಚೂಣಿಯಲ್ಲಿರುವವರು. ಮಂಗಳವಾರ ನಿಗದಿಯಾಗಿದ್ದ ಕಾರ್ಯಕ್ರಮದಲ್ಲಿ ಪ್ರಮಾಣವಚನ ಸ್ವೀಕರಿಸಲಿಲ್ಲ. ಇದು ಊಹಾಪೋಹಗಳಿಗೆ ಕಾರಣವಾಗಿತ್ತು.

ಪ್ರಧಾನಿ ಪ್ರಯಾಣಕ್ಕೆ ತಡೆ ಇಲ್ಲ: ವಿಮಾನ ಪ್ರಯಾಣ ನಿರ್ಬಂಧ ಪಟ್ಟಿಯಿಂದ ಪ್ರಧಾನಿ ಶೆಹಬಾಝ್ ಷರೀಫ್ ಸೇರಿ ಹಲವು ಉನ್ನತ ನಾಯಕರ ಹೆಸರನ್ನು ಪಾಕಿಸ್ತಾನ ನೂತನ ಸರ್ಕಾರ ತೆಗೆದು ಹಾಕಿದೆ ಎಂದು ಭಾನುವಾರ ತಿಳಿದು ಬಂದಿದೆ.

ಸಿಂಗಪುರ: 1 ತಿಂಗಳು ತಮಿಳು ಭಾಷೆ ಉತ್ಸವ

ಸಿಂಗಪುರ (ಪಿಟಿಐ): ಸಿಂಗಪುರದ ನಾಲ್ಕು ಅಧಿಕೃತ ಭಾಷೆಗಳಲ್ಲಿ ಒಂದಾದ ತಮಿಳು ಭಾಷೆಯ ಪ್ರಚಾರಕ್ಕಾಗಿ ಒಂದು ತಿಂಗಳ ಕಾಲ ಉತ್ಸವವನ್ನು ಹಮ್ಮಿಕೊಳ್ಳಲಾಗಿದ್ದು, ಉತ್ಸವವು ಇದೇ ತಿಂಗಳು ಆರಂಭವಾಗಲಿದೆ.

ಈ ಕುರಿತು ಮಾಹಿತಿ ನೀಡಿದ ಸಿಂಗಪುರದ ಸರ್ಕಾರ ಸ್ಥಾಪಿತ ತಮಿಳು ಭಾಷಾ ಪರಿಷತ್ತಿನ ಅಧ್ಯಕ್ಷ ಎಸ್. ಮನೋಹರನ್, 'ಉತ್ಸವದಲ್ಲಿ ತಮಿಳು ನಾಟಕಗಳು, ಸಂಗೀತ ಕಾರ್ಯಕ್ರಮ ಹಾಗೂ ಪ್ರದರ್ಶನ ಕಲೆಗಳ ಒಟ್ಟು 44 ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಇವೆಲ್ಲವೂ ವರ್ಚುವಲ್ ವೇದಿಕೆ ಮೂಲಕ ಪ್ರಸಾರಗೊಳ್ಳಲಿದೆ. ಈ ಕಾರ್ಯಕ್ರಮವು 'ತಮಿಳನ್ನು ಪ್ರೀತಿಸಿ, ತಮಿಳನ್ನು ಮಾತನಾಡಿ' ಎಂಬ ಸಂದೇಶವನ್ನು ಸಾರಲಿದೆ' ಎಂದು ಹೇಳಿದರು.

ಟೋಕಿಯೊ: ದೋಣಿ ಮುಳುಗಿ 10 ಸಾವು

ಟೋಕಿಯೊ (ಎಪಿ): ಜಪಾನ್ ಉತ್ತರ ಭಾಗದ ರಾಷ್ಟ್ರೀಯ ಉದ್ಯಾನದಲ್ಲಿ ಹಿಮಾಚ್ಛಾದಿತ ನೀರಿನಲ್ಲಿ ಪ್ರವಾಸಿ ದೋಣಿ ಮುಳುಗಿದ್ದು 10 ಮಂದಿ ಸಾವನ್ನಪ್ಪಿದ್ದಾರೆ. ದೋಣಿಯಲ್ಲಿ 26 ಮಂದಿ ಇದ್ದರು, ಉಳಿದವರಿಗೆ ಶೋಧ ನಡೆದಿದೆ.

'ಮೃತರಲ್ಲಿ ಮೂವರು ಮಹಿಳೆಯರು ಇದ್ದಾರೆ. ದೋಣಿಯಲ್ಲಿ ಇಬ್ಬರು ಸಿಬ್ಬಂದಿ, ಇಬ್ಬರು ಮಕ್ಕಳು ಇದ್ದರು. ಶನಿವಾರ ಮಧ್ಯಾಹ್ನ ಶಿರೆಟೊಕೊ ದ್ವೀಪಕಲ್ಪದ ಸಮೀಪ ಅವಘಡ ನಡೆದಿದೆ ಎಂದು ರಕ್ಷಣಾ ಸಿಬ್ಬಂದಿ ತಿಳಿಸಿದ್ದಾರೆ.

ಸೃಜನಾತ್ಮಕ ದೃಶ್ಯೀಕರಣ. ಹಾರ್ಲಿಕ್ಸ್ ದೈನಂದಿನ ಆಹಾರದ ಭಾಗವಾಗಿ ಸೇವಿಸಬೇಕಾದ ಪೌಷ್ಟಿಕ ಪಾನೀಯವಾಗಿದೆ.

ಖೇಲೊ ಇಂಡಿಯಾ ವಾರ್ಸಿಟಿ ಕ್ರೀಡಾಕೂಟ: ಚಿನ್ನಕ್ಕೆ ಮುತ್ತಿಕ್ಕಿದ ಸ್ನೇಹಾ ಸೊರೇನ್, ಕೋಮಲ್

ತಂದೆಯ ನೆನಪು; ನನಸಾದ ಚಿನ್ನದ ಕನಸು

• ವಿಕ್ರಂ ಕಾಂತಿಕೆರೆ

ಬೆಂಗಳೂರು: ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೀಟ್ ಆಗಿದ್ದ ಕೋಮಲ್ ಕೊಹರ್ ವೃತ್ತಿಜೀವನದ ಪಥ ಬದಲಿಸಲು ಕಾರಣ, ಅವರ ತಂದೆ. ಆದರೆ ಮಗಳು ಚಿನ್ನದ ಸಾಧನೆ ಮಾಡುವ ಎತ್ತರಕ್ಕೇರುವಷ್ಟರಲ್ಲಿ ತಂದೆ ಬದುಕಿಲ್ಲ. ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟದ ಎರಡನೇ ಆವೃತ್ತಿಯ ಮೊದಲ ಚಿನ್ನದ ಒಡತಿ ಕೋಮಲ್, ಪದಕ ಗೆದ್ದ ನಂತರ ತಂದೆಯ ನೆನಪಿನಲ್ಲಿ ಭಾವುಕರಾದರು.

ಹರಿಯಾಣದ ಸೋನಿಪತ್ ನಿವಾಸಿ ಕೋಮಲ್, ರೋಹ್ಟಕ್‌ನ ಮಹರ್ಷಿ ದಯಾನಂದ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸುತ್ತಿದ್ದಾರೆ. ವೇಟ್‌ಲಿಫ್ಟರ್‌ಗಳ ಊರಾದ ಖಖೋಡದಲ್ಲಿ ಜನಿಸಿದ ಅವರು ಓಟದಲ್ಲಿ ಸಾಧನೆ ಮಾಡುವ ಕನಸು ಹೊತ್ತುಕೊಂಡಿದ್ದರು. ಆದರೆ ತಂದೆಯ ಪ್ರೇರಣೆಯಿಂದ ವೇಟ್‌ಲಿಫ್ಟಿಂಗ್ ಕಡೆಗೆ ವಾಲಿದರು. ಖೇಲೊ ಇಂಡಿಯಾದ ಮೊದಲ ಆವೃತ್ತಿಯಲ್ಲಿ ಬೆಳ್ಳಿ ಗೆದ್ದಿದ್ದ ಅವರು ಚಿನ್ನದ ಕನಸನ್ನು ಈ ಬಾರಿ ನನಸು ಮಾಡಿಕೊಂಡರು. ಸ್ನ್ಯಾಚ್, ಕ್ಲೀನ್ ಆ್ಯಂಡ್ ಜರ್ಕ್‌ನಲ್ಲಿ ಕೂಟ ದಾಖಲೆಯನ್ನೂ ಬರೆದರು.

19 ವರ್ಷದ ಕೋಮಲ್, ಬಿಎ ವಿದ್ಯಾರ್ಥಿನಿ. ಕಳೆದ ಡಿಸೆಂಬರ್‌ನಲ್ಲಿ ಅಂತರ ವಿವಿ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದ ಅವರು ಈ ವರ್ಷ ಮಾರ್ಚ್‌ನಲ್ಲಿ ನಡೆದ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ದಾಖಲೆಯೊಂದಿಗೆ ಚಿನ್ನ ಗಳಿಸಿದ್ದರು. ಈ ಸಾಧನೆಗಳನ್ನು ಕಣ್ತುಂಬಿಕೊಳ್ಳಲು ತಂದೆ ಇರಲಿಲ್ಲ. ಸುದೀರ್ಘ ಕಾಲದ ಅನಾರೋಗ್ಯದಿದಾಗಿ ಅವರು ವರ್ಷದ ಹಿಂದೆ ಸಾವಿಗೀಡಾಗಿದ್ದರು.

ಜೈನ್ ವಿಶ್ವವಿದ್ಯಾಲಯ ಆವರಣದಲ್ಲಿ ಭಾನುವಾರ ನಡೆದ ಮಹಿಳೆಯರ 45 ಕೆಜಿ ವಿಭಾಗದಲ್ಲಿ ಕೋಮಲ್ 160 (70 ಕೆಜಿ ಸ್ನ್ಯಾಚ್, 90 ಕೆಜಿ ಕ್ಲೀನ್ ಆ್ಯಂಡ್ ಜರ್ಕ್) ಕೆಜಿ ಭಾರ ಎತ್ತಿದರು. ಅದಮಾಸ್ ವಿವಿಯ ಚಂದ್ರಿಕಾ ಮತ್ತು ಶಿವಾಜಿ ವಿವಿಯ ಪ್ರತೀಕ್ಷಾ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡರು. ಚಂದ್ರಿಕಾ 147 (64 + 83) ಕೆಜಿ ಭಾರ ಎತ್ತಿದರೆ, ಪ್ರತೀಕ್ಷಾ 143 (63 + 80) ಕೆಜಿ ಸಾಧನೆ ಮಾಡಿದರು.

ಸ್ನೇಹಾ ಸೊರೇನ್‌ಗೆ ಚಿನ್ನ: ಒಡಿಶಾದ ಭುವನೇಶ್ವರದಲ್ಲಿರುವ ಕಳಿಂಗ ಕೈಗಾರಿಕಾ ತಾಂತ್ರಿಕ ವಿಶ್ವವಿದ್ಯಾಲಯದ (ಕೆಐಐಟಿಯು) ಸ್ನೇಹಾ ಸೊರೇನ್ ಕೂಡ ವೇಟ್‌ಲಿಫ್ಟಿಂಗ್‌ನಲ್ಲಿ ಚಿನ್ನ ಗೆದ್ದುಕೊಂಡರು. ಮಹಿಳೆಯರ 49 ಕೆಜಿ ವಿಭಾಗದಲ್ಲಿ ಅವರು ಈ ಸಾಧನೆ ಮಾಡಿದರು. ಅವರು ಸ್ನ್ಯಾಚ್‌ನಲ್ಲಿ 69 ಕೆಜಿ, ಕ್ಲೀನ್ ಆ್ಯಂಡ್ ಜರ್ಕ್‌ನಲ್ಲಿ 92 ಕೆಜಿ ಭಾರ ಎತ್ತಿದರು. ಶಿವಾಜಿ ವಿವಿಯ ಸರಿತಾ ಮತ್ತು ಹರಿಯಾಣದ ಕುರುಕ್ಷೇತ್ರ ವಿವಿಯ ಶಾಲು ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡರು.

ಭಾರತ ಕ್ರೀಡಾ ಪ್ರಾಧಿಕಾರದ ಆವರಣದಲ್ಲಿ ನಡೆದ ಶೂಟಿಂಗ್‌ನ 10 ಮೀ ಏರ್ ರೈಫಲ್‌ನಲ್ಲಿ ಆಂಧ್ರಪ್ರದೇಶದ ಕೆಎಲ್ ವಿವಿಯ ಮದ್ದಿನೇನಿ ಮಹೇಶ್ ಚಿನ್ನ ಗಳಿಸಿದರು. ಡೆಲ್ಲಿ ವಿವಿಯ ಪಾರ್ಥ್ ಮಖೀಜ ಮತ್ತು ಸಾವಿತ್ರಿಬಾಯಿ ಫುಲೆ ವಿವಿಯ ಗಜಾನನ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು. ಪುರುಷರ 55 ಕೆಜಿ ವಿಭಾಗದ ವೇಟ್‌ಲಿಫ್ಟಿಂಗ್‌ನಲ್ಲಿ ಪಂಡಿತ್ ರವಿಶಂಕರ್ ವಿವಿಯ ವಿಜಯ್ ಪಂಡಿತ್ ಚಿನ್ನ ಗೆದ್ದುಕೊಂಡರು. ಅದೇ ವಿವಿಯ ಬಿ.ಕೋಮಲ್ ಕಂಚಿನ ಪದಕ ಗಳಿಸಿದರು. ಬಹಿನ್‌ಬಾಯಿ ಚೌಧರಿ ವಿವಿಯ ಎಸ್.ಉದಯ್ ಬೆಳ್ಳಿ ಗಳಿಸಿದರು.

ಕೋಮಲ್ ಕೊಹರ್ ಸಂಭ್ರಮ

ಕಂಠೀರವ ಕ್ರೀಡಾಂಗಣ		
ಬ್ಯಾಸ್ಕೆಟ್‌ಬಾಲ್	ಮಧ್ಯಾಹ್ನ 2ರಿಂದ ಸಂಜೆ 6.30	
ಜೈನ್ ವಿವಿ ಆವರಣ		
ಬಾಕ್ಸಿಂಗ್	ಬೆಳಿಗ್ಗೆ 11ರಿಂದ 2.00	ಮಧ್ಯಾಹ್ನ 3ರಿಂದ ರಾತ್ರಿ 10
ಈಜು	ಬೆಳಿಗ್ಗೆ 9ರಿಂದ 9.40	ಸಂಜೆ 5ರಿಂದ 6.40
ವೇಟ್‌ಲಿಫ್ಟಿಂಗ್	ಬೆಳಿಗ್ಗೆ 9.30ರಿಂದ 12.30	ಮಧ್ಯಾಹ್ನ 2ರಿಂದ 5.00
ಮಲ್ಲಕಂಬ	ಬೆಳಿಗ್ಗೆ 10ರಿಂದ ಮಧ್ಯಾಹ್ನ 1.00	ಸಂಜೆ 4ರಿಂದ 7.00
ಫುಟ್‌ಬಾಲ್	ಬೆಳಿಗ್ಗೆ 9ರಿಂದ ಮಧ್ಯಾಹ್ನ 2.00	
ವಾಲಿಬಾಲ್	ಸಂಜೆ 4ರಿಂದ 6.00	
ಜೈನ್ ಕ್ರೀಡಾಶಾಲೆ		
ಬ್ಯಾಡ್ಮಿಂಟನ್	ಮಧ್ಯಾಹ್ನ 12ರಿಂದ 3.00	
ಫುಟ್‌ಬಾಲ್	ಬೆಳಿಗ್ಗೆ 9ರಿಂದ ಮಧ್ಯಾಹ್ನ 2.00	
ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅಂಗಣ		
ಹಾಕಿ	ಬೆಳಿಗ್ಗೆ 6.30ರಿಂದ 11.45	ಮಧ್ಯಾಹ್ನ 2.30ರಿಂದ ರಾತ್ರಿ 7.45
ಸಾಯ್ ಎನ್‌ಎಸ್‌ಎಸ್‌ಸಿ		
ಶೂಟಿಂಗ್	ಬೆಳಿಗ್ಗೆ 9ರಿಂದ 11.15	

ಕೈಸೇರದ ಆಹ್ವಾನ: ಬೇಸರ

ಬೆಂಗಳೂರು: 'ಭಾನುವಾರ ಸಂಜೆ ನಡೆದ ವಿಶ್ವವಿದ್ಯಾಲಯ ಖೇಲೊ ಇಂಡಿಯಾದ ಉದ್ಘಾಟನೆ ಸಮಾರಂಭಕ್ಕೆ ನನ್ನನ್ನು ಮೂರ್ನಾಲ್ಕು ಗಂಟೆಗಳ ಮುನ್ನ ಆಹ್ವಾನಿಸಲಾಗಿದೆ. ಚೆನ್ನೈನಲ್ಲಿ ಇರುವ ನಾನು ಇಷ್ಟು ಅಲ್ಪಾವಧಿಯಲ್ಲಿ ಬೆಂಗಳೂರು ತಲುಪುವುದು ಹೇಗೆ' ಎಂದು ಒಲಿಂಪಿಯನ್ ಹಾಕಿಪಟು ಬಿ.ಪಿ. ಗೋವಿಂದ ಬೇಸರ ವ್ಯಕ್ತಪಡಿಸಿದ್ದಾರೆ.

'ಒಂದು ವಾರದ ಹಿಂದೆ ಹಾಕಿ ಕರ್ನಾಟಕದ ಪದಾಧಿಕಾರಿ ಸುಬ್ಬಯ್ಯ ಅವರು ಕರೆ ಮಾಡಿದ್ದರು. ಕ್ರೀಡಾ ಇಲಾಖೆಯವರು ಆಮಂತ್ರಣ ಕಳಿಸುತ್ತಾರೆಂದು ಮಾಹಿತಿ ನೀಡಿದ್ದರು. ರಾಜ್ಯದಲ್ಲಿ ಬಹಳ ದೊಡ್ಡ ಕ್ರೀಡಾಕೂಟ ನಡೆಯುತ್ತಿದ್ದು ಬನ್ನಿ ಎಂದೂ ಹೇಳಿದ್ದರು. ನಾನೂ ಒಪ್ಪಿದ್ದೆ. ಆದರೆ ಅಧಿಕೃತ ಆಮಂತ್ರಣ ಇದುವರೆಗೂ ಬಂದಿಲ್ಲ' ಎಂದು ಗೋವಿಂದ 'ಪ್ರಜಾವಾಣಿ'ಗೆ ತಿಳಿಸಿದರು.

ಈ ವಿಷಯದ ಕುರಿತು ಪ್ರತಿಕ್ರಿಯಿಸಿದ ಸುಬ್ಬಯ್ಯ, 'ಒಂದು ವಾರದ ಹಿಂದೆಯೇ ಅರ್ಜುನ, ಪದ್ಮಶ್ರೀ, ಖೇಲ್ ರತ್ನ ಪುರಸ್ಕೃತ ಕ್ರೀಡಾಪಟುಗಳೆಲ್ಲರಿಗೂ ಅಧಿಕೃತ ಆಮಂತ್ರಣ ಪತ್ರಗಳು ರವಾನೆಯಾಗಿವೆ. ಯಾವುದೇ ರೀತಿಯ ಅಗೌರವವನ್ನು ಯಾರಿಗೂ ತೋರಿಲ್ಲ' ಎಂದು ಸ್ಪಷ್ಟಪಡಿಸಿದರು.

ಕಂಚಿನ ಪದಕ ಜಯಿಸಿದ ಕರ್ನಾಟಕ ತಂಡ: (ಎಡದಿಂದ) ಕುಶಲಾ ಎನ್ ಭೂಷಣ್, ಲಯ ಕೆ ಬಿ, ಸುರಭಿ ಬಿ.ಆರ್, ಯಶಸ್ವಿನಿ ಎಂ, ವಿದ್ಯಾಶ್ರೀ ಜೆ, ಶಿವಲೀಲಾ ಎಸ್, ಪ್ರಿಯಾ ಎಂ, ಭಾವನಾ ಆರ್, ಸಚಿತಾ ಎಸ್.ಎಂ, ಗಗನಾ ಕೆ. ಎಸ್, ಎಂ.ಮಹಾಲಕ್ಷ್ಮಿ, ದೀಪಾ ಟಿ. ಆರ್

ನೆಟ್‌ಬಾಲ್: ಕರ್ನಾಟಕ ಮಹಿಳೆಯರಿಗೆ ಕಂಚು

ಬೆಂಗಳೂರು: ಕರ್ನಾಟಕ ಮಹಿಳಾ ತಂಡವು ಫೆಡರೇಷನ್ ಕಪ್ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದೆ.

ಹರಿಯಾಣದ ಭಿವಾನಿಯಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ ಮೂರನೇ ಸ್ಥಾನವನ್ನು ಉತ್ತರಪ್ರದೇಶದೊಂದಿಗೆ ಹಂಚಿಕೊಂಡಿತು.

ಕಂಚಿನ ಪದಕದ ಸುತ್ತಿನಲ್ಲಿ ಉಭಯ ತಂಡಗಳು 33–33 ಪಾಯಿಂಟ್ಸ್‌ಗಳಿಂದ ಸಮಬಲ ಸಾಧಿಸಿದವು.

ರೇಸ್: ಕರ್ಣ-ನಿಖಿಲ್‌ಗೆ ಪ್ರಶಸ್ತಿ

ಚೆನ್ನೈ (ಪಿಟಿಐ): ಕರ್ಣ ಕಡೂರು ಹಾಗೂ ಅವರ ಸಹ ಚಾಲಕ ನಿಖಿಲ್ ಪೈ ಅವರು ಎಂಆರ್‌ಎಫ್ ದಕ್ಷಿಣ ಭಾರತ ರ‍್ಯಾಲಿ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ಅರ್ಕಾ ಮೋಟರ್‌ಸ್ಪೋರ್ಟ್ಸ್‌ನ ಕರ್ಣ ಮತ್ತು ನಿಖಿಲ್ (1 ತಾಸು 44 ನಿಮಿಷ, 52.7 ಸೆಕೆಂಡು) ಭಾನುವಾರ ಮಂಗಳೂರಿನ ಡೀನ್ ಮಸ್ಕರೆನ್ಹಾಸ್ ಹಾಗೂ ಸಹ ಚಾಲಕ, ಕೊಡಗಿನ ಗಗನ್ ಕರುಂಬಯ್ಯ ಅವರನ್ನು 4.6 ಸೆಕೆಂಡುಗಳಲ್ಲಿ ಹಿಂದಿಕ್ಕಿದರು.

ಕರ್ಣ (ಬಲ) ಮತ್ತು ನಿಖಿಲ್ ಪೈ

ಇಮೊಲಾ ರೇಸ್‌ನಲ್ಲಿ ಮಿಂಚಿದ ಜೆಹಾನ್

ಇಮೊಲಾ, ಇಟಲಿ (ಪಿಟಿಐ): ಭಾರತದ ಜೆಹಾನ್ ದಾರುವಾಲಾ ಅವರು ಇಲ್ಲಿ ನಡೆದ ಫಾರ್ಮುಲಾ 2 ಚಾಂಪಿಯನ್‌ಷಿಪ್‌ನ ಸ್ಪ್ರಿಂಟ್ ರೇಸ್‌ನಲ್ಲಿ ಎರಡನೇ ಸ್ಥಾನ ಗಳಿಸಿದರು.

ಪ್ರೇಮಾ ರೇಸಿಂಗ್ ಚಾಲಕ ದಾರುವಾಲಾ ಇಲ್ಲಿ ನಡೆದ ಜಿದ್ದಾಜಿದ್ದಿ ರೇಸ್‌ನ ಆರಂಭದಲ್ಲಿ 3ನೇ ಸ್ಥಾನದಲ್ಲಿದ್ದರು. ಬಳಿಕ ವೇಗ ಹೆಚ್ಚಿಸುವ ಮೂಲಕ 'ಪೋಡಿಯಂ ಫಿನಿಶ್' ಮಾಡಿದರು. ನ್ಯೂಜಿಲೆಂಡ್ ಚಾಲಕ ಮಾರ್ಕಸ್ ಆರ್ಮ್‌ಸ್ಟ್ರಾಂಗ್ ಪ್ರಶಸ್ತಿಗೆ ಮುತ್ತಿಟ್ಟರು. ಪ್ರೇಮಾ ರೇಸಿಂಗ್‌ನ ಡೆನ್ನಿಸ್ ಹ್ಯುಜರ್ (ಇಟಲಿ) ಮೂರನೇ ಸ್ಥಾನ ಗಳಿಸಿದರು.

ಜೆಹಾನ್ 2ನೇ ಸ್ಥಾನ ಗಳಿಸುವ ಮೂಲಕ ಈ ಋತುವಿನಲ್ಲಿ ಮೂರನೇ ಬಾರಿ 'ಪೋಡಿಯಂ ಫಿನಿಶ್' ಮಾಡಿದರು. ಒಟ್ಟಾರೆ 10ನೇ ಬಾರಿ ಅವರು ಈ ಸಾಧನೆ ಮಾಡಿದ್ದಾರೆ.

'ಅಮೆರಿಕದ ಲೋಗಾನ್ ಸರ್ಜೆಂಟ್ ಅವರನ್ನು ಹಿಂದಿಕ್ಕುವ ವೇಳೆ ಲಯ ತಪ್ಪಿತು. ಹೀಗಾಗಿ ಮಾರ್ಕಸ್ ವೇಗ ಮೀರಲು ಸಾಧ್ಯವಾಗಲಿಲ್ಲ' ಎಂದು ಜೆಹಾನ್ ಹೇಳಿದರು.

ಜೆಹಾನ್ ದಾರುವಾಲಾ

ಉದ್ಘಾಟನಾ ಸಮಾರಂಭದಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ 'ವಂದೇಮಾತರಂ' ಗೀತ–ನೃತ್ಯ ಪ್ರದರ್ಶಿಸಿದ ಕಲಾವಿದೆಯರು –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

ಕ್ರೀಡಾ 'ಉತ್ಸವ'ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳ ಮೆರುಗು

ಜಾನಪದ ಮೇಳ; ಕಂಬದ ಕಸರತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾದ್ಯಗಳ ಮೇಳ ಮತ್ತು ನೃತ್ಯದ ಸೊಬಗಿನೊಂದಿಗೆ ದೇಶದ ವಿಭಿನ್ನ ಸಂಸ್ಕೃತಿಯ ಶ್ರೀಮಂತಿಕೆಯ ಅನಾವರಣ; ಕಂಬದ ಮೇಲೆ ಕಸರತ್ತು ಮಾಡಿದ ಕ್ರೀಡಾಪಟುಗಳ ರೋಮಾಂಚಕಾರಿ ಪ್ರದರ್ಶನ...

ಖೇಲೊ ಇಂಡಿಯಾ ಕ್ರೀಡಾಕೂಟದ ಉದ್ಘಾಟನಾ ಸಮಾರಂಭಕ್ಕೆ ಮೆರುಗು ನೀಡಿದ ಕಲಾ–ಸಾಂಸ್ಕೃತಿಕ ಕಾರ್ಯಕ್ರಮಗಳು ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ಸಂಜೆ ಭಾವಲೋಕವನ್ನು ಸೃಷ್ಟಿಸಿತು.

ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು ಅವರು ಕ್ರೀಡಾಕೂಟ ಉದ್ಘಾಟನೆಯಾಗಿರುವುದನ್ನು ಘೋಷಿಸಿದ ನಂತರ ಚಂದನ್ ಶೆಟ್ಟಿ ಮತ್ತು ತಂಡದಿಂದ ಖೇಲೊ ಇಂಡಿಯಾ ಹಾಡು ಹಾಗೂ ನೃತ್ಯದೊಂದಿಗೆ ಕಲಾ ಕಾರ್ಯಕ್ರಮಗಳಿಗೆ ಚಾಲನೆ ಸಿಕ್ಕಿತು. ನಂತರ ಚಂಡೆ, ವಾದ್ಯ, ವಿವಿಧ ಜಾನಪದ ತಂಡಗಳ ನೃತ್ಯ ಮುದ ನೀಡಿತು. ಮೊದಲು ಕೊಂಬು ಊದುತ್ತ ಕ್ರೀಡಾಂಗಣದ ಮೂಲೆಯೊಂದರಿಂದ ತಂಡ ಬರುತ್ತಿದ್ದಂತೆ ಮತ್ತೊಂದು ಮೂಲೆಯಿಂದ ಡೊಳ್ಳು ಬಾರಿಸುತ್ತ ಇನ್ನೊಂದು ತಂಡ ಬಂತು. ನಂತರ ಚೆಂಡೆ ಮೇಳದ ತಂಡದವರು ಪ್ರವೇಶ ಮಾಡಿದರು.

ನವಿಲು ಕುಣಿತ, ಗೊರವರ ಕುಣಿತ, ಬೊಂಬೆ ಕುಣಿತ, ಪೂಜಾ ಕುಣಿತ, ವೀರಭದ್ರ ವೇಷದ ತಂಡಗಳು ಒಂದೊಂದಾಗಿ ಬಂದವು. ಕಥಕ್ಕಳಿ ಸೇರಿದಂತೆ ವಿವಿಧ ರಾಜ್ಯಗಳ ಕಲಾತಂಡಗಳು ಕೂಡ ಕಾರ್ಯಕ್ರಮಕ್ಕೆ ಮೆರುಗು ತುಂಬಿದವು. ಹುಲಿ ಕುಣಿತ ಮತ್ತು ಯಕ್ಷಗಾನದ ಧೀಂಗಿಣದೊಂದಿಗೆ ಅಂಗಣದ ಸೊಬಗು ಇನ್ನಷ್ಟು ಹೆಚ್ಚಿತು.

ಮಲ್ಲಕಂಬದ ರೋಮಾಂಚನ: ಮೂಡುಬಿದಿರೆಯ ಆಳ್ವಾಸ್ ಮಲ್ಲಕಂಬ ತಂಡದವರ ಪ್ರದರ್ಶನ ಪ್ರೇಕ್ಷಕರ ಎದೆ ಝಲ್ಲೆನಿಸಿತು. 5ನೇ ತರಗತಿಯಿಂದ ಪದವಿ ವರೆಗಿನ ವಿದ್ಯಾರ್ಥಿಗಳು ನಡೆಸಿಕೊಟ್ಟ ನಟರಾಜಾಸನ, ಚಕೋರಾಸನ, ಹ್ಯಾಂಡ್ ಸ್ಟ್ಯಾಂಡ್, ಮೌಂಟ್, ಸ್ಟಡಲ್, ಫ್ಲ್ಯಾಗ್ ಮತ್ತು ಪಿರಮಿಡ್ ಆಕೃತಿಗಳು ಮಲ್ಲಕಂಬ ವೈವಿಧ್ಯತೆಯನ್ನು ಅನಾವರಣಗೊಳಿಸಿದವು. ವಂದೇಮಾತರಂ ಗೀತ–ನೃತ್ಯವೂ ಮುದ ನೀಡಿತು.

ಅಂಕ, ಉದ್ಯೋಗ ನೀಡಿ: ವೆಂಕಯ್ಯ ನಾಯ್ಡು

ಶಾಲೆ ಮತ್ತು ಕಾಲೇಜುಗಳಲ್ಲಿ ಕ್ರೀಡಾಪಟುಗಳು ಬೆಳೆಯಬೇಕಾದರೆ ಅವರಿಗೆ ಹೆಚ್ಚು ಅಂಕಗಳನ್ನು ನೀಡಬೇಕು. ಉದ್ಯೋಗದಲ್ಲಿ ಮೀಸಲಾತಿಯನ್ನೂ ಹೆಚ್ಚಿಸಬೇಕು ಎಂದು ವೆಂಕಯ್ಯ ನಾಯ್ಡು ಹೇಳಿದರು. ಕ್ರೀಡೆಯನ್ನು ಜೀವನದ ಭಾಗವಾಗಿ ಮಾಡುವಂತೆ ಅವರು ಅಥ್ಲೀಟ್‌ಗಳಿಗೆ ಸಲಹೆ ನೀಡಿದರು.

ಪ್ರಧಾನಿ ನರೇಂದ್ರ ಮೋದಿ ಅವರು ವರ್ಚುವಲ್ ಆಗಿ ಮಾತನಾಡಿದರು. ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್, ಕ್ರೀಡಾ ಇಲಾಖೆ ರಾಜ್ಯ ಸಚಿವ ನಿಶಿತ್ ಪ್ರಮಾಣಿಕ್, ರಾಜ್ಯದ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ, ಸಂಸದ ಪಿ.ಸಿ. ಮೋಹನ್, ವಿಧಾನ ಪರಿಷತ್ ಸದಸ್ಯ ಕೆ.ಗೋವಿಂದರಾಜ್ ಇದ್ದರು. ಈಜುಪಟು ಶ್ರೀಹರಿ ನಟರಾಜ್ ಕ್ರೀಡಾಪಟುಗಳ ಪರವಾಗಿ ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಸಚಿವ ಅನುರಾಗ್ ದಿಢೀರ್ ಭೇಟಿ

ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಬಂದಿದ್ದ ಕೇಂದ್ರ ಸಚಿವ ಅನುರಾಗ್ ಠಾಕೂರ್ ಕ್ರೀಡಾಕೂಟದ ಜಂಟಿ ಆಯೋಜಕರಾದ ಜೈನ್ ವಿವಿಯ ಆವರಣಕ್ಕೆ ಬೆಳಿಗ್ಗೆ ದಿಢೀರ್ ಭೇಟಿ ನೀಡಿ ಅಚ್ಚರಿ ಮೂಡಿಸಿದರು. ಇಲ್ಲಿನ ಕ್ರೀಡಾಂಗಣಗಳಲ್ಲಿ ನಡೆಯುತ್ತಿದ್ದ ಸ್ಪರ್ಧೆಗಳನ್ನು ವೀಕ್ಷಿಸಿದ ಅವರು ಕ್ರೀಡಾಪಟುಗಳ ಜೊತೆ ಸಂವಾದವನ್ನೂ ನಡೆಸಿದರು.

ಪ್ರಶಸ್ತಿಯೊಂದಿಗೆ ಸಂಭ್ರಮಿಸಿದ ಆ್ಯಂಡ್ರೆ ರುಬ್ಲೆವ್– ಎಎಫ್‌ಪಿ ಚಿತ್ರ

ಸರ್ಬಿಯಾ ಓಪನ್: ರುಬ್ಲೆವ್‌ಗೆ ಮಣಿದ ಜೊಕೊವಿಚ್

ಬೆಲ್‌ಗ್ರೇಡ್ (ಎಎಫ್‌ಪಿ/ ರಾಯಿಟರ್ಸ್): ಜಿದ್ದಾಜಿದ್ದಿನ ಹಣಾಹಣಿಯಲ್ಲಿ ನೊವಾಕ್ ಜೊಕೊವಿಚ್ ಅವರಿಗೆ ಸೋಲುಣಿಸಿದ ರಷ್ಯಾದ ಆ್ಯಂಡ್ರೆ ರುಬ್ಲೆವ್, ಸರ್ಬಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿಗೆ ಮುತ್ತಿಟ್ಟರು.



ಜೊಕೊವಿಚ್

ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ರುಬ್ಲೆವ್ 6-2, 6-7(4), 6-0ರಿಂದ ಸರ್ಬಿಯಾ ಆಟಗಾರನಿಗೆ ಸೋಲುಣಿಸಿದರು.

ಜೊಕೊವಿಚ್ ಈ ವರ್ಷದಲ್ಲಿ ಮೊದಲ ಬಾರಿ ಟೂರ್ನಿಯೊಂದರ ಫೈನಲ್‌ಗೆ ಲಗ್ಗೆಯಿಟ್ಟಿದ್ದರು.

ಶನಿವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಜೊಕೊವಿಚ್ 4-6, 6-1 6-2ರಿಂದ ರಷ್ಯಾದ ಕರೆನ್ ಕಚನೊವ್ ಅವರನ್ನು ಮಣಿಸಿದರು. ನಾಲ್ಕರ ಘಟ್ಟದ ಪಂದ್ಯದಲ್ಲಿ ರುಬ್ಲೆವ್ 6-2, 6-2ರಿಂದ ಇಟಲಿಯ ಫ್ಯಾಬಿಯಾ ಫಾಗ್ನಿನಿ ಸವಾಲು ಮೀರಿದ್ದರು.